ರೂ. 20/-

# ಕನ್ನಡ ಲಿಬರೇಶನ್

ಮೇ 2023ರ ಸಂಚಿಕೆ

ಸಿಪಿಐ (ಎಂಎಲ್) ಲಿಬರೇಶನ್ ಮುಖವಾಣಿ



## ಕರ್ನಾಟಕದ ಜನತೆಯು ಎಚ್ಚೆತ್ತು, ವಿಧಾನಸಭಾ ಚುನಾವಣೆ - 2023ರಲ್ಲಿ ದ್ವೇಷದ ರಾಜಕಾರಣವನ್ನು ತಿರಸ್ಕರಿಸಬೇಕು!

# ಕರ್ನಾಟಕ ವಿಧಾನಸಭಾ ಚುನಾವಣೆ - 2023

## ಘನತೆ, ಸಮಾನತೆ, ಸಾಮಾಜಿಕ ನ್ಯಾಯಕ್ಕಾಗಿ
## ಸಿಪಿಐ(ಎಂಎಲ್) ಲಿಬರೇಶನ್ !







**ಪಿ.ಪಿ. ಅಪ್ಪಣ್ಣ**

151- ಕೆ.ಆರ್.ಪುರಂ
ವಿಧಾನಸಭಾ ಕ್ಷೇತ್ರ

**ಕೆಂಚಪ್ಪ ಹಿರೇಖೇಡ**

61- ಕನಕಗಿರಿ
ವಿಧಾನಸಭಾ ಕ್ಷೇತ್ರ

**CPI(ML) ಲಿಬರೇಶನ್ ಪಕ್ಷದ ಅಭ್ಯರ್ಥಿಗಳು!**

ಪೌರಕಾರ್ಮಿಕರ ಮತ್ತು ಕಟ್ಟಡ ಕಾರ್ಮಿಕರ ಹಕ್ಕುಗಳಿಗಾಗಿ ಮತ್ತು ಘನತೆಗಾಗಿ ಹೋರಾಡುತ್ತಾರೆ

ಕೃಷಿ ಕಾರ್ಮಿಕರ ಹಕ್ಕುಗಳಿಗಾಗಿ, ದಲಿತರ ಘನತೆಗಾಗಿ, ಗ್ರಾಮೀಣ ಬಡಜನರ ಪರವಾಗಿ ಹೋರಾಡುತ್ತಾರೆ

# ಕನ್ನಡ ಲಿಬರೇಶನ್

ಮೇ 2023ರ ಸಂಚಿಕೆ


## ಪರಿವಿಡಿ


ಕರ್ನಾಟಕದ ಚುನಾವಣೆಯಲ್ಲಿ ಸಂಘ ಪರಿವಾರಕ್ಕೆ ತಕ್ಕ ಪಾಠ ಕಲಿಸೋಣ 3

ಚುನಾವಣೆಗಳು, ಕೋಮು ಹತ್ಯೆ ಮತ್ತು ಹಿಂದುತ್ವ ನಿರ್ಭಯ 5

ಧಾರ್ಮಿಕ ಹಬ್ಬಗಳನ್ನು ಕೋಮು ದ್ವೇಷದ ಮತ-ಸುಗ್ಗಿಯ ರಂಗಭೂಮಿಯನ್ನಾಗಿಸುವ ಬಿಜೆಪಿಯ ತಂತ್ರವನ್ನು ಸೋಲಿಸಿ! 6

ಕರ್ನಾಟಕದ ಜನತೆಯು ಎಚ್ಚೆತ್ತು, ಮುಂಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಿ 7

ನಂದಿನಿ - ಅಮುಲ್ ವಿವಾದ ಮತ್ತು ರೈತರ ಮೇಲಿನ ಪರಿಣಾಮ 9

ಭಾರತೀಯ ಮೇ ದಿನದ ಒಂದು ಶತಮಾನ ಪೂರ್ಣಗೊಂಡಿದೆ! 10

ಮೋದಿ ಆಡಳಿತದಿಂದ ಜನಿತವಾಗಿರುವ ಕಡಿವಾಣವಿಲ್ಲದ ತುರ್ತು ಪರಿಸ್ಥಿತಿಯನ್ನು ಪ್ರತಿರೋಧಿಸಿ 12

ಪಿತೃಪ್ರಭುತ್ವ ಕೊನೆಕೊಳ್ಳಲು ಮಹಿಳಾ ಮೀಸಲಾತಿ ಎಷ್ಟು ಮುಖ್ಯ? 13

ಹಾವೇರಿಯ ದಲಿತರ ಮೇಲಿನ ದೌರ್ಜನ್ಯದ ಕುರಿತು ವರದಿ 16

ನಾವೆದ್ದು ನಿಲ್ಲದಿದ್ದರೆ 18

ಸವಾಲಿನ ಹಾದಿಯಲ್ಲಿ ಸ್ಫೂರ್ತಿದಾಯಕ ಪಯಣ 19

ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ವಾಹನ ಚಾಲಕರು-ಸಹಾಯಕರುಗಳ ಹೋರಾಟ 23

ನಮ್ಮ ಕಾರ್ಯಕ್ರಮಗಳು 24


**ಮುಖಪುಟ ಚಿತ್ರ: ಅಲಾಮಿ ಮತ್ತು ವಿ. ಅರುಣ್ ಕುಮಾರ್**


**ಸಂಪಾದಕೀಯ ಮಂಡಳಿ**

**ಕ್ಲಿಫ್ಟನ್ ಡಿ' ರೋಜಾರಿಯೋ**
**ಡಾ । ವಿ. ಲಕ್ಷ್ಮಿ ನಾರಾಯಣ**
**ನಾ. ದಿವಾಕರ್**
**ರತಿ ರಾವ್**
**ಪಿ.ಆರ್.ಎಸ್ ಮಣಿ**
**ಲೇಖಾ ಅಡವಿ**



**ಸಂಪಾದಕೀಯ ಇ-ಮೇಲ್:**
**kannadaliberation@gmail.com**


# ಕರ್ನಾಟಕದ ಚುನಾವಣೆಯಲ್ಲಿ ಸಂಘ ಪರಿವಾರಕ್ಕೆ ತಕ್ಕ ಪಾಠ ಕಲಿಸೋಣ

2023ರ ಕರ್ನಾಟಕದ ವಿಧಾನಸಭಾ ಚುನಾವಣೆಯು ಮುಂದಿನ ವರ್ಷದ ಲೋಕ ಸಭಾ ಚುನಾವಣೆಯ ಮೇಲೆ ಪ್ರಭಾವ ಬೀರಲಿದೆ. ದಕ್ಷಿಣ ಭಾರತಕ್ಕೆ ಕರ್ನಾಟಕವು ಹೆಬ್ಬಾಗಿಲಾಗಿದೆ ಎಂದು ಸಂಘ ಪರಿವಾರವು ಹೇಳುತ್ತದೆ. 2008ರಲ್ಲಿ ಮೊದಲನೆಯ ಬಾರಿಗೆ ಜಾತಿ ಮತ್ತು ಧರ್ಮದ ಜೋಡಿ ವಿಚಾರವನ್ನು ಮುಂದಿಟ್ಟ ಸಂಘ ಪರಿವಾರವು ಅಧಿಕಾರವನ್ನು ಹಿಡಿಯಲು ಸಾಧ್ಯವಾಯಿತು. ತದನಂತರ "ಆಪರೇಷನ್ ಕಮಲಾ"ವನ್ನು ನಡೆಸಿದ ಬಿಜೆಪಿಯು 2018ರಲ್ಲಿ ಬಹುಮತ ಸಿಗದಿದ್ದರೂ ಅಧಿಕಾರವನ್ನು ಹಿಡಿಯಿತು. ಅಂದಿನಿಂದ ಇದುವರೆಗೂ ರಾಜ್ಯದ ಜನತೆಯ ಬದುಕಿನ ಮೇಲೆ ಭಾರಿ ದಾಳಿಯನ್ನು ನಡೆಸಿದೆ. ಹಿಂದೆಂದೂ ಕಾಣದ ಭ್ರಷ್ಟಾಚಾರ, ಬೆಲೆ ಏರಿಕೆ ಮತ್ತು ಜೀವನ ವೆಚ್ಚ, ಮೂಲಭೂತ ಸೌಕರ್ಯಗಳ ಕುಸಿತ, ರೈತ ಮತ್ತು ಕಾರ್ಮಿಕ ವಿರೋಧಿ ಕಾನೂನುಗಳ ಜಾರಿ, ಮುಗಿಲೇರುತ್ತಿರುವ ನಿರುದ್ಯೋಗ, ಹಾಗೆಯೇ ಸಾಲದಲ್ಲಿ ಮುಳುಗುತ್ತಿರುವ ರಾಜ್ಯದ ಆರ್ಥಿಕ ವ್ಯವಸ್ಥೆ, ಮಹಿಳೆಯರ ಮೇಲೆ ದೌರ್ಜನ್ಯ ಮತ್ತು ಅವರ ಸ್ವಾಯತ್ತತೆ ಮೇಲಿನ ದಾಳಿ, ಹೆಚ್ಚುತ್ತಿರುವ ಜಾತಿ ದೌರ್ಜನ್ಯಗಳು, ಕೋಮುವಾದದ ದಾಳಿ ಮತ್ತು ಧರ್ಮದ ಹೆಸರಿನಲ್ಲಿ ಬಿತ್ತುತ್ತಿರುವ ದ್ವೇಷದ ವಿಷಬೀಜ. ಇವೆಲ್ಲವೂ ಬಿಜೆಪಿಯ ಆಡಳಿತದ ಫಲವಾಗಿದೆ.

ಬಿಜೆಪಿ ಆಡಳಿತದ ವಿರೋಧಿ ಅಲೆಯನ್ನು ತಗ್ಗಿಸಲು ಆರ್.ಎಸ್.ಎಸ್ ಚುನಾವಣಾ ಪ್ರಚಾರದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿದೆ. ಚುನಾವಣೆಯಲ್ಲಿ ಟಿಕೆಟ್ ನೀಡುವ ವಿಧಾನದಲ್ಲಿ ಅವರ ಪಾತ್ರವಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಕೆಲವು ತಿಂಗಳ ಹಿಂದೆ ಆರ್.ಎಸ್.ಎಸ್ ಆಂತರಿಕ ಸಮೀಕ್ಷೆಯನ್ನು ನಡೆಸಿದ್ದು ಅದರಲ್ಲಿ ಬಿಜೆಪಿ ಆಡಳಿತದ ವಿರುದ್ಧ ವಿರೋಧಿ ಅಲೆಯಿರುವುದು ಕಂಡುಬಂದಿದೆ ಎಂಬುವುದಾಗಿ ಗಾಳಿಮಾತು ಎಲ್ಲೆಡೆ ಹರಿದಾಡುತ್ತಿದೆ. ಈ ಒಂದು ಸಮೀಕ್ಷೆಯನ್ನು ಆಧರಿಸಿ ಆರ್.ಎಸ್.ಎಸ್ ತಾನು ಬಿತ್ತುವ ಫಾಸಿವಾದವನ್ನು ಒಪ್ಪದಿರುವ ಹಳೆಯ ಪೀಳಿಗೆಯನ್ನು ಬದಲಾಯಿಸುತ್ತ, ಆರ್.ಎಸ್.ಎಸ್ ಶಾಖದಲ್ಲಿ ಬೆಳೆದು ಬಂಡ ಮುಖಗಳಿಗೆ ಮಣೆಹಾಕುತ್ತಿದೆ. ಉದಾಹರಣೆಗೆ, ಯಶಪಾಲ್ ಸುವರ್ಣ ರವರು ಸಂಘ ಪರಿವಾರಕ್ಕೆ ಸೇರಿದವರಾಗಿದ್ದು ಅವರು ಹಿಜಾಬ್ ವಿವಾದದಲ್ಲಿ ಸೂತ್ರಧಾರಿಯಾಗಿದ್ದರು. ಇವರಿಗೆ ಬಿಜೆಪಿಯು ಉಡುಪಿ ಕ್ಷೇತ್ರದಿಂದ ಟಿಕೆಟ್ ನೀಡುದ್ದು, ಹಾಲಿ ಶಾಸಕರಾದ ರಘುಪತಿ ಭಟ್ ಅವರನ್ನು ಪಕ್ಕಕ್ಕೆ ಸರಿಸಿದೆ. ಈ ಚುನಾವಣೆಯಲ್ಲಿ 15 ಹಾಲಿ ಶಾಸಕರಿಗೆ ಟಿಕೆಟ್ ನೀಡದೇ, 60 ಹೊಸ ಮುಖಗಳಿಗೆ ಬಿಜೆಪಿ ಟಿಕೆಟ್ ನೀಡಿದೆ.

ಈ ಬದಲಾವಣೆಗಳು "ಪರಿವಾರವಾದ"ವನ್ನು ಅಲ್ಲಗಳೆಯಲು ಅಥವಾ ಸ್ಥಗಿತಗೊಂಡಿರುವ ರಾಜಕೀಯವನ್ನು ಚುರುಕುಗೊಳಿಸಲು ಮಾಡಲಾಗುತ್ತಿದೆ ಎಂಬುವುದು ನೆಪವಾಗಿರುವುದು ಸರಿಯಷ್ಟೆ. ಕರ್ನಾಟಕದ ರಾಜಕೀಯ ಪರಿಸ್ಥಿತಿಯಲ್ಲಿ ಹಿಂದುತ್ವವನ್ನು ಗಟ್ಟಿಯಾಗಿ ಸ್ಥಾಪಿಸಲು ಮತ್ತು ಜಾತಿ ಹಾಗೂ ಕೋಮುವಾದಿ ವಿಷಬೀಜವನ್ನು ಬಿತ್ತಲು ಮಾಡುತ್ತಿರುವ ಪ್ರಯತ್ನವಾಗಿದೆ. ರಾಜ್ಯದ ರಾಜಕಾರಣದಲ್ಲಿ ಬಿ.ಎಲ್ ಸಂತೋಷ್ ಅವರ ಪ್ರವೇಶ, ಯಡಿಯೂರಪ್ಪ ಅವರ ಸ್ಥಾನದಲ್ಲಿ ಬಸವರಾಜ್ ಬೊಮ್ಮಾಯಿ ಅವರನ್ನು ಕೂರಿಸಿರುವುದು, ಕರ್ನಾಟಕದಲ್ಲಿ ಕೋಮುವಾದಿ ಧೋರಣೆ ಹೆಚ್ಚಿಸಿರುವುದು - ಇವೆಲ್ಲವೂ ರಾಜ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಹೊಸ ಹೊಂದಾಣಿಕೆಯನ್ನು ತರಲು ಬಿಜೆಪಿಯ ಪ್ರಯತ್ನವಾಗಿದೆ. ಇದರಲ್ಲಿ ಕೋಮುವಾದಿ ದ್ವೇಷದ ರಾಜಕಾರಣವನ್ನು ಮಾಡುತ್ತಾ ಜಾತಿ ಮತ್ತು ಸಾಮಾಜವನ್ನು ಸಂಪೂರ್ಣವಾಗಿ ತಮ್ಮ ಇಚ್ಛೆಯಂತೆ ಬದಲಾಯಿಸಲಾಗುತ್ತಿದೆ.

**ಮುಂದುವರೆಸಿದೆ...**

ಬಿ. ಎಲ್. ಸಂತೋಷ್ ಅವರ ನೇತೃತ್ವದಲ್ಲಿ ಹಿಂದೂ ಮೂಲಭೂತವಾದಿಗಳು ಮುಸಲ್ಮಾನರ ಮೇಲೆ ಗುಂಪು ಥಳಿತ, ಮೂಲೆಗುಂಪು ಮಾಡಿ ಮತ್ತು ಬಹಿಷ್ಕಾರವನ್ನು ಎಸಗಿದ್ದಾರೆ. ಮುಸಲ್ಮಾನರ ವಿರುದ್ಧ ಹಿಂಸೆ ಮಾಡಲೆಂದೇ ದನಮಾಂಸ, ಸಾಮೂಹಿಕ ಪ್ರಾರ್ಥನೆ, ಹಲಾಲ್, ಅಜಾನ್, ಟೋಪಿ, ಉರ್ದು ಭಾಷೆ ಮತ್ತು ಹಿಜಾಬ್ ಗಳನ್ನು ನೆಪವಾಗಿಸಿಕೊಂಡಿದ್ದಾರೆ. ಬಿಜೆಪಿ ಆಡಳಿತವು ಕೊನೆಗೊಳ್ಳುತ್ತಿರುವ ಸಮಯದಲ್ಲಿ ಸರ್ಕಾರವು ತೆಗೆದುಕೊಂಡ ಕೆಲವು ನಿರ್ಧಾರಗಳು ಅವರ ಕೋಮುವಾದಿ ವೇಷವನ್ನು ಬಯಲು ಮಾಡುತ್ತದೆ. ಎರಡು ಪ್ರಬಲ ಸಮುದಾಯಗಳಾದ ಒಕ್ಕಲಿಗ ಮತ್ತು ಪಂಚಮಸಾಲಿಗಳಿಗಾಗಿ 2ಸಿ ಮತ್ತು 2ಡಿ ಎಂಬ ಎರಡು ಹೊಸ ಪ್ರವರ್ಗಗಳನ್ನು ಸೃಷ್ಟಿಸಿ ಕ್ರಮವಾಗಿ 4% ರಿಂದ 6% ಮತ್ತು 5% ರಿಂದ 7% ಕ್ಕೆ ಮೀಸಲಾತಿಯನ್ನು ಹೆಚ್ಚಿಸಿದೆ ಹಾಗು 2ಬಿ ಪ್ರವರ್ಗದಲ್ಲಿರುವ ಮುಸ್ಲಿಮರನ್ನು ಇಡಬ್ಲ್ಯೂಎಸ್ ಪ್ರವರ್ಗದಲ್ಲಿ ಬಿಜೆಪಿ ಸರ್ಕಾರ ಸೇರಿಸಿದೆ. ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯದವರನ್ನು ತಮ್ಮ ಮತದಾರರನ್ನಾಗಿಸಲು ಪ್ರಯತ್ನವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದಕ್ಕೆ ಮುಂಚೆ ಸಂಘ ಪರಿವಾರದವರು ಸೃಷ್ಟಿಸಿದ ಉರಿ ಗೌಡ - ನಂಜೇ ಗೌಡ ಅವರು ಟಿಪ್ಪು ಸುಲ್ತಾನರನ್ನು ಕೊಲೆ ಮಾಡಿದವರು ಎಂದು ಪ್ರಚಾರ ನಡೆಸುತ್ತಿರುವಾಗ ಆದಿಚುಂಚನಗಿರಿ ಮಠದ ನಿರ್ಮಲಾನಂದ ಸ್ವಾಮೀಜಿ ಅವರು ಈ ಅಪಪ್ರಚಾರವನ್ನು ಖಂಡಿಸಿದ್ದರು. ಆದಿವಾಸಿ ಮತ್ತು ದಲಿತರ ಮತಗಳನ್ನು ಪಡೆಯಲು ಕೇಂದ್ರ ಸರ್ಕಾರದ ಶಿಫಾರಸ್ಸಿನ ಮೇರೆಗೆ ಪರಿಶಿಷ್ಠ ಜಾತಿಗಳ ಮೀಸಲಾತಿಯನ್ನು ಶೇಖಡಾ 15ರಿಂದ ಶೇಖಡಾ 17ಕ್ಕೆ ಹೆಚ್ಚಿಸಲಾಯಿತು ಮತ್ತು ಪರಿಶಿಷ್ಠ ಪಂಗಡದವರ ಮೀಸಲಾತಿಯನ್ನು ಶೇಖಡಾ 3ರಿಂದ ಶೇಖಡಾ 7ಕ್ಕೆ ಹೆಚ್ಚಿಸಲಾಯಿತು.

ಬಿಜೆಪಿ ಪಕ್ಷದೊಳಗೆ ಅಸಮಾಧಾನವೂ ಸ್ಪಷ್ಟವಾಗಿ ಕಾಣುತ್ತಿದ್ದು, ನರೇಂದ್ರ ಮೋದಿಯವರು ಕರ್ನಾಟಕದಾದ್ಯಂತ 20 ರೋಡ್ ಶೋಗಳನ್ನು ಆಯೋಜಿಸಿಕೊಂಡು ಅವರ ಬೆನ್ನಮೇಲೆ ಚುನಾವಣೆಯ ಸವಾರಿ ಮಾಡಲು ತಯಾರಾಗಿದ್ದಾರೆ.

ಬಿಜೆಪಿಯಲ್ಲಿ ಟಿಕೆಟ್ ನಿರಾಕರಣೆಯ ನಂತರ ಹಲವಾರು ಬಿಜೆಪಿ ಸದಸ್ಯರು ಪಕ್ಷಕ್ಕೆ ರಾಜೀನಾಮೆ ನೀಡಿದರು. ಅದರಲ್ಲಿ ಪ್ರಮುಖರಾದವರು ಮಾಜಿ ಮುಖ್ಯ ಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ್ ಸವದಿಯವರಾಗಿದ್ದಾರೆ. ಅವರಿಬ್ಬರೂ ಲಿಂಗಾಯತ ಸಮುದಾಯಕ್ಕೆ ಸೇರಿದವರು. ಅವರು ಕಾಂಗ್ರೆಸ್ ಪಕ್ಷವನ್ನು ಸೇರಿದರು ಮತ್ತು ತಕ್ಷಣವೇ ಚುನಾವಣಾ ರಂಗಕ್ಕೆ ಇಳಿದರು. ಆಯನೂರ್ ಮಂಜುನಾಥ್ ಅಂತಹ ಮತ್ತೊಬ್ಬ ಲಿಂಗಾಯತ ಮುಖಂಡ ಜನತಾ ದಳ (ಜಾತ್ಯತೀತ) ಪಕ್ಷವನ್ನು ಸೇರಿ ಶಿವಮೊಗ್ಗ ನಗರದಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ.

ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಭಿನ್ನಾಭಿಪ್ರಾಯಗಳು ಇದ್ದರೂ ಸಹ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಸಾಮಾಜಿಕ ತಳಪಾಯ ಮತ್ತು ಚಳುವಳಿಗಳನ್ನು ಹೊಂದಿದ್ದು ತಮ್ಮ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಕಾಂಗ್ರೆಸ್ ಪಕ್ಷವು ನಾಲ್ಕು ಮುಖ್ಯ ಚುನಾವಣಾ ಭರವಸೆಗಳನ್ನು ನೀಡಿದ್ದಾರೆ - ಗೃಹ ಲಕ್ಷ್ಮಿ ಯೋಜನೆ ಅಡಿಯಲ್ಲಿ ಮಹಿಳಾ ಮನೆಯೊಡತಿಗೆ ಮಾಸಿಕ ರೂ. 2,000/-, 200 ಯೂನಿಟ್ ಗಳ ವರೆಗೂ ಉಚಿತ ವಿದ್ಯುತ್, 10 ಕೆಜಿ ಉಚಿತ ಅಕ್ಕಿ ಮತ್ತು ನಿರುದ್ಯೋಗ ಭತ್ಯೆ. ಜೆಡಿ(ಎಸ್) ಸಹ ಶಿಕ್ಷಣ, ಆರೋಗ್ಯ, ವಸತಿ, ರೈತ, ಯುವಕರು ಮತ್ತು ಮಹಿಳಾ ಸಬಲೀಕರಣಕ್ಕಾಗಿ ಐದು-ಅಂಶಗಳ ಅಜೆಂಡಾವನ್ನು ಮುಂದಿಟ್ಟಿದೆ.



ಚಿತ್ರ: ನ್ಯೂಸ್ ಕ್ಲಿಕ್

ಕರ್ನಾಟಕದ ರಾಜಕೀಯ ಪರಿಸ್ಥಿತಿ ಹೀಗಿರುವಾಗ, ಎಡಪಂಥೀಯ ಪಕ್ಷಗಳಲ್ಲಿ ಐಕ್ಯಮತ್ಯ ಕಂಡುಬಂದಿರುವುದಿಲ್ಲ. ಸಿಪಿಐಎಂ, ಸಿಪಿಐ ಮತ್ತು ಎಸ್.ಯು.ಸಿ.ಐ ಪಕ್ಷಗಳು ಒಂದಿಷ್ಟು ಕ್ಷೇತ್ರಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಿದ್ದಾರೆ. ಸಿಪಿಐ ಪಕ್ಷವು 7 ಕ್ಷೇತ್ರದಲ್ಲಿ ಸ್ಪರ್ಧಿಸಿದ್ದು, ಮೇಲುಕೋಟೆಯಲ್ಲಿ ದರ್ಶನ ಪುಟ್ಟಣ್ಣಯ್ಯ ಅವರಿಗೆ ಮತ್ತು ಬಾಗೇಪಲ್ಲಿಯಲ್ಲಿ ಸಿಪಿಐಎಂ ಅಭ್ಯರ್ಥಿಗೆ ಬೆಂಬಲವನ್ನು ಘೋಷಿಸಿದೆ. ಹಾಗು 215 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆ ಸಿಪಿಐ ತಮ್ಮ ಬೆಂಬಲವನ್ನು ಘೋಷಿಸಿದೆ. ಸಿಪಿಐಎಂ ಮತ್ತು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಪ್ರಕಾಶ್ ಅಂಬೇಡ್ಕರ್) ಅವರುಗಳು ಜೆಡಿ(ಎಸ್) ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಬಿಜೆಪಿ ಪಕ್ಷದ ಫಾಸಿವಾದಿ ನಡೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಾ ಎಸ್.ಯು.ಸಿ.ಐ ಪಕ್ಷವು ಜೆಡಿ(ಎಸ್), ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಸರಿಸಮಾನವಾಗಿ ಪರಿಗಣಿಸುತ್ತಾ ಮೂರೂ ಪಕ್ಷಗಳ ವಿರುದ್ಧ ಹೋರಾಡಲಿದ್ದಾರೆ. ಭಾರತ ರಾಷ್ಟ್ರ ಸಮಿತಿಯ (ಮುಂಚೆ, ತೆಲಂಗಾಣ ರಾಷ್ಟ್ರ ಸಮಿತಿ) ಮುಖಂಡರು ಜೆಡಿ(ಎಸ್)ಗೆ ಬೆಂಬಲ ಸೂಚಿಸಿದ್ದಾರೆ ಮತ್ತು ಅವರ ಪರವಾಗಿ ಪ್ರಚಾರ ಮಾಡಲಿದ್ದಾರೆ.

ಈ ನಿಟ್ಟಿನಲ್ಲಿ ಸಿಪಿಐ(ಎಂಎಲ್) ಲಿಬರೇಶನ್ ಪಕ್ಷವು ಎರಡು ಕ್ಷೇತ್ರಗಳಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದೆ. ಪಕ್ಷದ ವತಿಯಿಂದ ಕೆ.ಆರ್ ಪುರಂ ಕ್ಷೇತ್ರದಿಂದ ಕಾಮ್ರೇಡ್ ಪಿ.ಪಿ. ಅಪ್ಪಣ್ಣ ಅವರು ಮತ್ತು ಕನಕಗಿರಿ ಕ್ಷೇತ್ರದಿಂದ ಕಾಮ್ರೇಡ್ ಕೆಂಚಪ್ಪ ಹಿರೇಖೇಡ ಅವರು ಸ್ಪರ್ಧಿಸಿದ್ದಾರೆ. ಉಳಿದಂತೆ ಫಾಸಿವಾದಿ ಪಡೆಗಳನ್ನು ಸೋಲಿಸುವುದಕ್ಕಾಗಿ ಮಿಕ್ಕ ಎಲ್ಲಾ ಕ್ಷೇತ್ರಗಳಲ್ಲಿ ಎಡಪಂಥೀಯ, ಜಾತ್ಯತೀತ ಮತ್ತು ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ ಪಕ್ಷಗಳಿಗೆ ಬೆಂಬಲ ನೀಡುತ್ತದೆ. ಬಾಗೇಪಲ್ಲಿಯಲ್ಲಿ ಸಿಪಿಐಎಂ ಮತ್ತು ಮೇಲುಕೋಟೆಯಲ್ಲಿ ಸರ್ವೋದಯ ಕರ್ನಾಟಕ ಪಕ್ಷಗಳಿಗೆ ಬೆಂಬಲವನ್ನು ಸೂಚಿಸಿದೆ. ಚುನಾವಣಾ ರಂಗವನ್ನು ಉಪಯೋಗಿಸುತ್ತಾ ಸಿಪಿಐ(ಎಂಎಲ್) ಲಿಬರೇಶನ್ ಪಕ್ಷವು ಬಿಜೆಪಿಯ ಪೊಳ್ಳು ಅಭಿವೃದ್ಧಿ ಮತ್ತು ಭ್ರಷ್ಟಾಚಾರವನ್ನು ಬಹಿರಂಗ ಪಡಿಸಲು ಮತ್ತು ಕೋಮುವಾದಿ-ಜಾತಿವಾದಿ ರಾಜಕಾರಣವನ್ನು ಸೋಲಿಸಲು ಹೊರಟಿದೆ.

ಫಾಸಿವಾದವನ್ನು ನಿರ್ಣಾಯಕವಾಗಿ ಸೋಲಿಸಲು ಚುನಾವಣಾ ರಂಗ ಮಾತ್ರ ಸಾಲದು. ಬಿಜೆಪಿ-ಮೋದಿಯ ವಿರುದ್ಧ ದೀರ್ಘಕಾಲದ ಯುದ್ಧ ನಡೆಸಬೇಕಾಗಿದೆಂದು ಪಕ್ಷದ 11ನೇ ಮಹಾಧಿವೇಶನದ ಸಂದೇಶವಾಗಿತ್ತು. ಬಿಜೆಪಿಯ ಫಾಸಿವಾದಿ ಸಿದ್ಧಾಂತ ಮತ್ತು ರಾಜಕೀಯವನ್ನು ಸೋಲಿಸಿ ಕ್ರಾಂತಿಕಾರಿ ಕಮ್ಯುನಿಸ್ಟರಾದ ನಾವು ದೀರ್ಘಕಾಲದ ಹೋರಾಟವನ್ನು ರೂಪಿಸಬೇಕು. ★

# ಚುನಾವಣೆಗಳು, ಕೋಮು ಹತ್ಯೆ ಮತ್ತು ಹಿಂದುತ್ವ ನಿರ್ಭಯ

ಕಳೆದ ಮಾರ್ಚ್ 31 ರಂದು ನಮ್ಮ ರಾಮನಗರ ಜಿಲ್ಲೆಯಲ್ಲಿ ಇದ್ರೀಸ್ ಪಾಷಾ ಎಂಬಾತನನ್ನು ಗೋ ಸಂರಕ್ಷಣೆಯ ಹೆಸರಿನಲ್ಲಿ ಧಾರ್ಮಿಕ ಉಗ್ರಗಾಮಿ ಪುನೀತ್ ಕೆರೆಹಳ್ಳಿ ಮತ್ತು ರಾಷ್ಟ್ರ ರಕ್ಷಣಾ ಪಡೆಯ ಸಂಗಡಿಗರು ಜೊತೆಗೂಡಿ ಹತ್ಯೆ ಮಾಡಿರುವುದು ಕರ್ನಾಟಕದಲ್ಲಿ ಹಿಂದುತ್ವದ ಉಗ್ರಗಾಮಿಗಳು ಕಾನೂನು ಸುವ್ಯವಸ್ಥೆಯನ್ನು ತಮಗೆ ಹೇಗೆ ಬೇಕೊ ಹಾಗೆ ದುರ್ಬಳಕೆ ಮಾಡಿರುವುದನ್ನು ತೋರಿಸುತ್ತದೆ.

ಇದ್ರೀಸ್ ಪಾಷಾ ಎಂಬುವವರು ಸೈಯದ್ ಜಹೀರ್ ಮತ್ತು ಇರ್ಫಾನ್ ಎಂಬುವವರೊಂದಿಗೆ ಜಾನುವಾರುಗಳನ್ನು ವಾಹನದಲ್ಲಿ ಸಾಗಿಸುತ್ತಿದ್ದ ಸಂದರ್ಭದಲ್ಲಿ ಪುನೀತ್ ಕೆರೆಹಳ್ಳಿ ಮತ್ತು ಆತನ ಸಹಚರರು ಸಾತನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಡ್ಡಗಟ್ಟಿರುವುದಲ್ಲದೇ ಈ ಉಗ್ರಗಾಮಿಗಳು ಗೋಹತ್ಯೆಗಾಗಿ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದಾರೆ ಎಂದು ಆಧಾರರಹಿತ ಆರೋಪಗಳನ್ನು ಮಾಡುತ್ತಾ ನಿಂದಿಸಿದರಲ್ಲದೇ, ನಿಮ್ಮಂತಹವರು "ಪಾಕಿಸ್ತಾನಕ್ಕೆ ಹೋಗಬೇಕು" ಎಂಬ ಮಾತುಗಳನ್ನು ಆಡಿರುತ್ತಾರೆ. ವರದಿಗಳ ಪ್ರಕಾರ, ಈ ಜಗಳದಲ್ಲಿ ಪೊಲೀಸ್ ಪೇದೆಯೊಬ್ಬರು ಮಧ್ಯಪ್ರವೇಶಿಸಿ ಉಳಿದ ಇಬ್ಬರನ್ನು ಪೊಲೀಸ್ ಠಾಣೆಗೆ ಕರೆದೊಯ್ಯುವ ಮೊದಲು ಜೀವಭಯದಿಂದ ಇದ್ರೀಸ್ ಪಾಷಾ ಠಾಣೆಗೆ ಹೋಗದೆ ಓಡಿಹೋಗಿರುತ್ತಾರೆ. ಮರುದಿನ ಬೆಳಿಗ್ಗೆ ಇದ್ರೀಸ್ ಪಾಷಾ ಅವರ ದೇಹವು ಹಲವಾರು ಗಾಯಗಳೊಂದಿಗೆ ಸಾತನೂರು ಪೊಲೀಸ್ ಠಾಣೆಯ ಸಮೀಪದಲ್ಲಿ ಪತ್ತೆಯಾಗಿದೆ. ಪಾಷಾ ಅವರ ದೇಹದ ಮೇಲೆ ಸುಟ್ಟ ಗಾಯದ ಗುರುತುಗಳಿದ್ದು, ಹತ್ಯೆಗೆ ಸ್ಟನ್ ಗನ್ ಬಳಸಿರುವ ಶಂಕೆ ವ್ಯಕ್ತವಾಗಿದೆ.

ಘಟನೆಯ ಸುಮಾರು ಐದು ದಿನಗಳ ನಂತರ, ಮತ್ತು ಪುನೀತ್ ಕೆರೆಹಳ್ಳಿ ತಮ್ಮ ಫೇಸ್‌ಬುಕ್‌ನಲ್ಲಿ ವೀಡಿಯೊವನ್ನು ಹಾಕಿ, ಅವರು ಅನುಭವಿಸಿದ ನಿರ್ಭಯವನ್ನು ಎತ್ತಿ ತೋರಿಸಿದ ನಂತರ, ಪುನೀತ್ ಕೆರೆಹಳ್ಳಿಯನ್ನು ರಾಜಸ್ಥಾನದಲ್ಲಿ ಬಂಧಿಸಲಾಯಿತು. ಇದೇ ವ್ಯಕ್ತಿ ಕೆಲವು ದಿನಗಳ ಹಿಂದೆ ಹೊಸೂರು ರಸ್ತೆಯಲ್ಲಿ ದನ ಸಾಗಾಟ ಮಾಡುತ್ತಿದ್ದಾಗ ಅಲೀಮುಲ್ಲಾ ಬೇಗ್ ಎಂಬ 30 ವರ್ಷದ ಯುವಕನ ಮೇಲೆ ಸ್ಟನ್ ಗನ್ ತೋರಿಸಿ ಹಲ್ಲೆ ನಡೆಸಿ ಚಿತ್ರಹಿಂಸೆ ನೀಡಿದ್ದರು ಎಂಬ ಮಾಹಿತಿಯೂ ಸಹ ಹೊರಬಿದ್ದಿದೆ.

ಈ ಹತ್ಯೆಯ ನಂತರ ಪುನೀತ್ ಕೆರೆಹಳ್ಳಿ ಎಂಬ ವ್ಯಕ್ತಿಯು ವಿವಿಧ ಧಾರ್ಮಿಕ ಉಗ್ರಗಾಮಿ ಸಂಘಟನೆಗಳಿಗೆ ಸಂಪರ್ಕವನ್ನು ಹೊಂದಿದ್ದಾರೆ ಎಂಬ ಹಲವಾರು ವರದಿಗಳು ಬಂದಿದ್ದು, ಕರ್ನಾಟಕ ರಾಜ್ಯ ಸಚಿವರು, ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ.ರವಿ ಸೇರಿದಂತೆ ಹಲವು ಬಿಜೆಪಿ ನಾಯಕರೊಂದಿಗಿನ ಅವರ ಜೊತೆ ತೆಗೆಸಿಕೊಂಡಿರುವ ಹಲವಾರು ಫೋಟೋಗಳು ಆನ್‌ಲೈನ್‌ನಲ್ಲಿ ಕಾಣಿಸಿಕೊಂಡಿವೆ. ಹಿಂದೆ, ಕೆರೆಹಳ್ಳಿ ಕರ್ನಾಟಕದಲ್ಲಿ ಹಲಾಲ್ ವಿರುದ್ಧ ಅಭಿಯಾನಗಳನ್ನು ಪ್ರಾರಂಭಿಸಿದ್ದನು ಮತ್ತು ಹಿಂದೂ ದೇವಾಲಯಗಳ ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳನ್ನು ನಿಷೇಧಿಸುವ ಅಭಿಯಾನದ ಮಂಚೂಣಿ ಕಾರ್ಯಕರ್ತನಾಗಿದ್ದನು.. ಈತನ ವಿರುದ್ಧ ಹಲವು ಪ್ರಕರಣಗಳು ಬಾಕಿ ಇವೆ ಎಂದು ವರದಿಯಾಗಿದೆ. ಒಂದೆಡೆ ಪೋಲೀಸರು ಇವನ ನಿರಂತರವಾಗಿ ನಡೆಸುತ್ತಿರುವ ಅಪರಾಧಗಳಿಗೆ ಕಣ್ಣು ಮುಚ್ಚಿ ಕೂರುವ ಮೂಲಕ ಅವರನ್ನು ಬೆಂಬಲಿಸಿದರಲ್ಲದೇ ಮತ್ತು ಅಧಿಕಾರದಲ್ಲಿದ್ದವರು ಸಹಚರತನಿಗೆ ಪ್ರೋತ್ಸಾಹಿಸಿರುತ್ತಾರೆ.

ಇದ್ರೀಸ್ ಪಾಷಾ ಅವರ ಕ್ರೂರ ಹತ್ಯೆಯನ್ನು ತಡೆಯುವಲ್ಲಿ, ಕಾನೂನನ್ನು ಕೈಗೆತ್ತಿಕೊಂಡು ಗುಂಪು ಹಿಂಸಾಚಾರ ಮತ್ತು ದ್ವೇಷದ ಅಪರಾಧಗಳಲ್ಲಿ ತೊಡಗಿರುವ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ರಾಜ್ಯ ವಿಫಲವಾಗಿದೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸುಪ್ರೀಂ ಕೋರ್ಟ್ ತನ್ನ ತೆಹ್ಸೀನ್ ಪೂನವಲ್ಲ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು. [AIR 2018 SC 3354], ಆದೇಶದಲ್ಲಿ ಹೆಚ್ಚುವರಿ ನ್ಯಾಯಾಂಗ ಅಂಶಗಳು ಮತ್ತು ಕಾನೂನು ಅಥವಾ ಕಾನೂನು ಜಾರಿಗೊಳಿಸುವ ಏಜೆನ್ಸಿಯ ಸ್ಥಾನವನ್ನು ತೆಗೆದುಕೊಳ್ಳುವ ರಾಜ್ಯದ ಅಂಶಗಳ ಮೇಲೆ ತೀವ್ರವಾಗಿ ಖಂಡಿಸಿದೆ "ಅಪರಾಧಗಳನ್ನು ಅಸಹಿಷ್ಣುತೆ, ಸೈದ್ಧಾಂತಿಕ ಪ್ರಾಬಲ್ಯ ಮತ್ತು ಪೂರ್ವಾಗ್ರಹದ ಉತ್ಪನ್ನವಾಗಿ ವರ್ಗೀಕರಿಸಿಬಾರದು ಇದರಿಂದ ಭಯೋತ್ಪಾದನೆಯ ಆಳ್ವಿಕೆಗೆ ಕಾರಣವಾಗದಂತೆ. ಹೆಚ್ಚುವರಿ ನ್ಯಾಯಾಂಗ ಅಂಶಗಳು ಮತ್ತು ರಾಜ್ಯೇತರ ಅಂಶಗಳು ಕಾನೂನು ಅಥವಾ ಕಾನೂನು ಜಾರಿಗೊಳಿಸುವ ಏಜೆನ್ಸಿಯ ಸ್ಥಾನವನ್ನು ತೆಗೆದುಕೊಳ್ಳಲು ಅನುಮತಿಸಲಾಗುವುದಿಲ್ಲ. ಬಹುತ್ವ ಮತ್ತು ವೈವಿಧ್ಯತೆಯ ಸ್ವೀಕಾರವನ್ನು ಹೊಂದಿರದ ಮತಾಂಧ ವಿಧಾನದೊಂದಿಗೆ ಒಂದು ಕಟ್ಟುಕಟ್ಟಾದ ಗುರುತು ಪ್ರಚೋದನಕಾರಿ ಭಾವನೆಗಳನ್ನು ಉಂಟುಮಾಡುತ್ತದೆ ಮತ್ತು ಪ್ರತಿಗಾಮಿ ಪ್ರತೀಕಾರದ ಮನೋಭಾವದ ಪ್ರದರ್ಶನವು ಮನುಷ್ಯರ ಅಮಾನವೀಯತೆಗೆ ರೂಪಾಂತರಗೊಳ್ಳುತ್ತದೆ. ಅಂತಹ ವಾತಾವರಣವು

**ಏಜೆನ್ಸಿಯ ಸ್ಥಾನವನ್ನು ತೆಗೆದುಕೊಳ್ಳಲು ಅನುಮತಿಸಲಾಗುವುದಿಲ್ಲ. ಬಹುತ್ವ ಮತ್ತು ವೈವಿಧ್ಯತೆಯ ಸ್ವೀಕಾರವನ್ನು ಹೊಂದಿರದ ಮತಾಂಧ ವಿಧಾನದೊಂದಿಗೆ ಒಂದು ಕಟ್ಟುಕಟ್ಟಾದ ಗುರುತು ಪ್ರಚೋದನಕಾರಿ ಭಾವನೆಗಳನ್ನು ಉಂಟುಮಾಡುತ್ತದೆ**

ತರ್ಕಬದ್ಧ ಚರ್ಚೆ, ತಾರ್ಕಿಕ ಚರ್ಚೆ ಮತ್ತು ಕಾನೂನಿನ ಸರಿಯಾದ ಆಡಳಿತವನ್ನು ತಪ್ಪಿಸುವುದಲ್ಲದೆ, ಇದರಿಂದಾಗಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಸೇರಿದಂತೆ ವಿವಿಧ ಸ್ವಾತಂತ್ರ್ಯಗಳಿಗೆ ಧಕ್ಕೆ ಬರುತ್ತದೆ ಎಂಬ ತನ್ನ ನಿಲುವನ್ನು ತೋರಿದೆ.

ಇಂತಹ "ಜಾಗರೂಕತೆ" ಕ್ರಿಯೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯವು ನಿರ್ದೇಶನಗಳನ್ನು ನೀಡಿರುತ್ತದೆ, ಈ ತರಹದ ಘಟನೆಗಳಿಗೆ ರಾಜ್ಯವು ತಡೆಗಟ್ಟುವ, ಪರಿಹಾರ ಮತ್ತು ದಂಡನಾತ್ಮಕ ಕ್ರಮಗಳನ್ನು ಒಳಗೊಂಡಂತೆ ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲರಾದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುತ್ತದೆ. ಆದರೂ, ಈ ನಿರ್ದೇಶನಗಳನ್ನು ಅವುಗಳ ಉಲ್ಲಂಘನೆಯಲ್ಲಿ ಮಾತ್ರ ಅನುಸರಿಸಲಾಗುತ್ತದೆ. ಕರ್ನಾಟಕದಲ್ಲಿ ಚುನಾವಣೆ ನಡೆಯಲಿರುವ ಸಮಯದಲ್ಲಿ ಈ ಭೀಕರ ಕೊಲೆ ನಡೆದಿರುವುದು ಹಾಗೂ ರಾಜ್ಯದಲ್ಲಿ ಧಾರ್ಮಿಕ ಉಗ್ರಗಾಮಿ ಗುಂಪುಗಳ ಹಿಂಸಾಚಾರ ದಿನೇ ದಿನೇ ಹೆಚ್ಚುತ್ತಿದೆ. ಸಮಾಜದ ಸ್ವಾಸ್ಥ್ಯ ಹಾಳು ಮಾಡುವುದು ಮತ್ತು ವಿಭಜಿತ ಮತ್ತು ಸಾಮಾಜಿಕ ವರ್ಣಭೇದ ನೀತಿಯ ಸ್ಥಿತಿಯನ್ನು ಸೃಷ್ಟಿಸುವಲ್ಲಿ ಆರ್‌ಎಸ್‌ಎಸ್ ಮತ್ತು ಅದರ ಅಂಗಸಂಸ್ಥೆಗಳ ಕಾಣದ ಕೈಗಳ ಪ್ರಭಾವವನ್ನು ಗುರುತಿಸುವುದು ಮತ್ತು ಈ ಫ್ಯಾಸಿಸ್ಟ್ ದಾಳಿಯ ವಿರುದ್ಧ ಹೋರಾಡಲು ಒಂದುಗೂಡಿ ತುರ್ತಾಗಿ ಕಾರ್ಯನಿರ್ವಹಿಸುವುದು ಇಂದಿನ ನಮ್ಮ ಕರ್ತವ್ಯವಾಗಿದೆ. ★ **ಮೈತ್ರೇಯಿ | ಅನುವಾದ: ರಾಘವೇಂದ್ರ**

# ಧಾರ್ಮಿಕ ಹಬ್ಬಗಳನ್ನು ಕೋಮು ದ್ವೇಷದ ಮತ-ಸುಗ್ಗಿಯ ರಂಗಭೂಮಿಯನ್ನಾಗಿಸುವ ಬಿಜೆಪಿಯ ತಂತ್ರವನ್ನು ಸೋಲಿಸಿ!

ಮತ್ತೊಮ್ಮೆ, ರಾಮ ನವಮಿಯ ಹಬ್ಬವು ರಾಜ್ಯದ ನಂತರ ರಾಜ್ಯಗಳಲ್ಲಿ ಉದ್ದೇಶಿತ ಮುಸ್ಲಿಂ ವಿರೋಧಿ ಹಿಂಸಾಚಾರ ಮತ್ತು ವಿಧ್ವಂಸಕತೆಯಿಂದ ಗುರುತಿಸಲ್ಪಟ್ಟಿದೆ. ಬಿಜೆಪಿ ಆಡಳಿತವಿರುವ ಮಹಾರಾಷ್ಟ್ರ, ಗುಜರಾತ್, ಉತ್ತರ ಪ್ರದೇಶ ಮತ್ತು ಚುನಾವಣೆಗೆ ಒಳಪಟ್ಟಿರುವ ಕರ್ನಾಟಕ ಹಾಗೂ ಬಿಹಾರ ಮತ್ತು ಪಶ್ಚಿಮ ಬಂಗಾಳದಂತಹ ಬಿಜೆಪಿಯೇತರ ರಾಜ್ಯಗಳಿಂದ ಹಿಂಸಾಚಾರದ ಪ್ರಮುಖ ಘಟನೆಗಳು ವರದಿಯಾಗಿವೆ. ಶಾಂತಿ, ಸೌಹಾರ್ದತೆ ಮತ್ತು ಸಂತೋಷದ ವಾತಾವರಣದಲ್ಲಿ ಆಚರಿಸಬೇಕಾದ ಹಬ್ಬಗಳು ಹೆಚ್ಚೆಚ್ಚು ವಿಧ್ವಂಸಕತೆ ಮತ್ತು ಹಿಂಸಾಚಾರದ ಥಿಯೇಟರ್‌ಗಳಾಗಿ ಬದಲಾಗುತ್ತಿವೆ, ಇದು ಪ್ರಧಾನವಾಗಿ ಭಾರತದ ಅತಿ ದೊಡ್ಡ ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಮರನ್ನು ಗುರಿಯಾಗಿಸುತ್ತದೆ.

ಕಳೆದ ವರ್ಷ ರಾಮನವಮಿ ಮತ್ತು ಹನುಮ ಜಯಂತಿಯಂದು ನಡೆದ ವ್ಯಾಪಕ ಹಿಂಸಾಚಾರದ ಹಿನ್ನೆಲೆಯಲ್ಲಿ ನಾಗರಿಕರು ಮತ್ತು ವಕೀಲರ ಒಂದು ಗುಂಪು ಈ ಮಾದರಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ 176 ಪುಟಗಳ ವರದಿಯನ್ನು ತಯಾರಿಸಿತ್ತು. ವರದಿಯ ಶೀರ್ಷಿಕೆಯು 'ಕ್ರೋಧದ ಮಾರ್ಗಗಳು - ಧಾರ್ಮಿಕ ಮೆರವಣಿಗೆಗಳನ್ನು ಆಯುಧಗೊಳಿಸುವುದು - ರಾಮ ನವಮಿ ಮತ್ತು ಹನುಮಾನ್ ಜಯಂತಿ (ಏಪ್ರಿಲ್ 2022) ಸಮಯದಲ್ಲಿ ಕೋಮು ಹಿಂಸಾಚಾರ'. ಮಸೀದಿಗಳ ಬಳಿ ಮತ್ತು ಪ್ರಧಾನವಾಗಿ ಮುಸ್ಲಿಮರು ವಾಸಿಸುವ ನೆರೆಹೊರೆಗಳಲ್ಲಿ ದ್ವೇಷ ತುಂಬಿದ ಘೋಷಣೆಗಳು, ಹಾಡುಗಳು ಮತ್ತು ಭಾಷಣಗಳೊಂದಿಗೆ ಕತ್ತಿ ಝಳಪಿಸುತ್ತಿರುವ ರಾಮನವಮಿ ಮೆರವಣಿಗೆಗಳನ್ನು ಅನುಮತಿಸುವುದು ಈ ವರದಿಯಲ್ಲಿ ಅತ್ಯಂತ ಸಾಮಾನ್ಯ ಸಕ್ರಿಯಗೊಳಿಸುವ ಅಂಶವೆಂದು ಗುರುತಿಸಲಾಗಿದೆ. ಇದರ ಹೊರತಾಗಿ ಆಡಳಿತಾತ್ಮಕ ಲೋಪಗಳು ಮತ್ತು ಸಹವಾಸಕ್ಕೆ ಹೆಚ್ಚು ಲಜ್ಜೆಗೆಟ್ಟ ಉದಾಹರಣೆಗಳಿವೆ. ಈ ವರ್ಷ ಈ ಮಾದರಿಯನ್ನು ಮತ್ತೊಮ್ಮೆ ನೋಡಬಹುದಾಗಿದೆ, ಮತ್ತು ಹೆಚ್ಚು ವಿಸ್ತಾರವಾಗಿ ರಾಮ ನವಮಿಯು ದಿನಗಟ್ಟಲೆ ಹರಡಿದ ಒಂದು ಸುದೀರ್ಘವಾದ ಹಬ್ಬವಾಗಲು ಅವಕಾಶ ನೀಡಲಾಯಿತು. ಬಿಹಾರಶರೀಫ್‌ನ (ನಳಂದಾ, ಬಿಹಾರ) ಅಜೀಜಿಯಾ ಮದರಸಾ ಮತ್ತು ಗ್ರಂಥಾಲಯದ ಆಘಾತಕಾರಿ ಧ್ವಂಸ ಮತ್ತು ರಿಶ್ರಾದಲ್ಲಿ (ಹೂಗ್ಲಿ ಜಿಲ್ಲೆ, ಪಶ್ಚಿಮ ಬಂಗಾಳ) ಹಿಂಸಾಚಾರದಂತಹ ಹಲವಾರು ವಿಧ್ವಂಸಕ ಮತ್ತು ಹಿಂಸಾಚಾರದ ಪ್ರಕರಣಗಳು ನಿಜವಾಗಿ ರಾಮ ನವಮಿ ಮುಗಿದ ನಂತರ ನಡೆದಿವೆ.

ಅಜೀಜಿಯಾ ಮದ್ರಸಾ ಮತ್ತು ಗ್ರಂಥಾಲಯದ ಉದ್ದೇಶಿತ ನಾಶವು ವಿಶೇಷ ಗಮನಕ್ಕೆ ಅರ್ಹವಾಗಿದೆ. 110 ವರ್ಷಗಳಷ್ಟು ಹಳೆಯದಾದ ಮದರಸಾವು ಪಾಟ್ನಾದ ಐಕಾನಿಕ್ ಖುದಾ ಬಕ್ಷ್ ಗ್ರಂಥಾಲಯದ ಪಕ್ಕದಲ್ಲಿ ಬಲವಾದ ಗ್ರಂಥಾಲಯವನ್ನು ಹೊಂದಿತ್ತು. ಅನೇಕ ಅಪರೂಪದ ಪುಸ್ತಕಗಳು ಸೇರಿದಂತೆ 4,500 ಪುಸ್ತಕಗಳ ಗ್ರಂಥಾಲಯದ ಸಂಪೂರ್ಣ ಸಂಗ್ರಹವು ಈಗ ಬೂದಿಯಾಗಿದೆ. 1857 ರ ಮಹಾನ್ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೇರಲು ತನ್ನ ಸರ್ಕಾರಿ ಕೆಲಸವನ್ನು ತ್ಯಜಿಸಿದ ಪತಿ ಮೌಲವಿ ಅಬ್ದುಲ್ ಅಜೀಜ್ ಅವರ ನೆನಪಿಗಾಗಿ ಹೆಸರಾಂತ ಲೋಕೋಪಕಾರಿ ಮತ್ತು ಶಿಕ್ಷಣತಜ್ಞ ಬೀಬಿ ಸೊಘ್ರಾ ಅವರು ಮದ್ರಸಾವನ್ನು ಸ್ಥಾಪಿಸಿದರು. ಇದು ಪಾರಂಪರಿಕ ಸಾಂಸ್ಕೃತಿಕ ಕೇಂದ್ರ ಮಾತ್ರವಲ್ಲ, ಸುಮಾರು ಐದು ನೂರು ಹುಡುಗರು ಮತ್ತು ಹುಡುಗಿಯರಿಗೆ ಆಧುನಿಕ ಶಿಕ್ಷಣವನ್ನು ನೀಡುವ ಮಾದರಿ ಮದರಸಾವಾಗಿಯೂ ಕಾರ್ಯನಿರ್ವಹಿಸಿತು. ಮದರಸಾಗಳನ್ನು ಭಯೋತ್ಪಾದಕರ ತರಬೇತಿ ಕೇಂದ್ರವನ್ನಾಗಿ ರೂಪಿಸುವುದು ಸಂಘ ಬ್ರಿಗೇಡ್‌ನ ಇಸ್ಲಾಮೋಫೋಬಿಕ್ ಪ್ರಚಾರದ ಕೇಂದ್ರವಾಗಿದೆ. ಅಝೀಝಿಯಾ ಮದ್ರಸಾದ ನಾಶವು ಈ ಮದರಸಾ ವಿರೋಧಿ ಅಭಿಯಾನವನ್ನು ಹೊಸ ಮಟ್ಟಕ್ಕೆ ಕೊಂಡೊಯ್ಯುತ್ತದೆ.

ಧಾರ್ಮಿಕ ಹಬ್ಬಗಳ ಆಯುಧೀಕರಣವು ಭಾರತದಲ್ಲಿ ಕೋಮುವಾದಿ ಫ್ಯಾಸಿಸ್ಟ್ ಉನ್ಮಾದ ಮತ್ತು ಆಕ್ರಮಣಶೀಲತೆಯ ಪ್ರಮುಖ ಲಕ್ಷಣವಾಗಿದೆ. ನಾವು ಎಲ್ಲಾ ವಿಧಾನಗಳಿಂದ ಈ ವಿನ್ಯಾಸವನ್ನು ವಿಫಲಗೊಳಿಸಬೇಕಾಗಿದೆ.

ವರ್ಷಗಳ ಹಿಂದೆ ಕ್ರಾಂತಿಕಾರಿ ಕವಿ ಗೋರಖ್ ಪಾಂಡೆ ಈ ಪ್ರವಾದಿಯ ಸಾಲುಗಳನ್ನು ಬರೆದಿದ್ದರು: "ಈ ಬಾರಿ ಗಲಭೆಗಳು ಭೀಕರವಾಗಿವೆ / ರಕ್ತದ ಮಳೆ ಜೋರಾಗಿತ್ತು / ಮುಂಬರುವ ವರ್ಷ ಸಾಕ್ಷಿಯಾಗಲಿದೆ / ಮತಗಳ ಬಂಪರ್ ಸುಗ್ಗಿ."

ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಆವರ್ತನದೊಂದಿಗೆ ಇದು ಸಂಭವಿಸುವುದನ್ನು ನಾವು ನೋಡಿದ್ದೇವೆ. ಗುಜರಾತ್‌ನಲ್ಲಿ 2002ರ ನರಮೇಧವನ್ನು ಬಿಜೆಪಿಯ ಸತತ ಚುನಾವಣಾ ಗೆಲುವಿಗಾಗಿ ಪೀಠವನ್ನಾಗಿ ಪರಿವರ್ತಿಸಲಾಗಿದೆ. ಇಪ್ಪತ್ತು ವರ್ಷಗಳ ನಂತರವೂ ಅಮಿತ್ ಶಾ ಇತ್ತೀಚಿನ ಗುಜರಾತ್ ಚುನಾವಣೆಯಲ್ಲಿ ಇದನ್ನು 'ಗಲಭೆಕೋರರಿಗೆ ಸೂಕ್ತವಾದ ಪಾಠ, ದೀರ್ಘಾವಧಿಯ ಶಾಂತಿಯ ಕೀಲಿಕೈ' ಎಂದು ಕರೆದರು. 2013ರ ಮುಜಫರ್‌ನಗರದ ಹತ್ಯಾಕಾಂಡವು 2014ರಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿಯ ಅದ್ಭುತ ಚುನಾವಣಾ ಪ್ರದರ್ಶನಕ್ಕೆ ನಾಂದಿ ಹಾಡಿತು.

ಈ ವರ್ಷದ ರಾಮನವಮಿ ಹಿಂಸಾಚಾರದ ಹಿಂದೆ ಬಿಜೆಪಿಯ ಚುನಾವಣಾ ಲೆಕ್ಕಾಚಾರಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಯಾವುದೇ ಸುಳಿವು ಬೇಕಿದ್ದರೆ, ಅದನ್ನು ಅಮಿತ್ ಶಾ ಅವರು ಹೇರಳವಾಗಿ ಸ್ಪಷ್ಟಪಡಿಸಿದ್ದಾರೆ. ಬಿಹಾರ್‌ಷರೀಫ್ ಹಿಂಸಾಚಾರದ ಕೆಲವೇ ಗಂಟೆಗಳಲ್ಲಿ (ಎಚ್ಚರದ ನಾಗರಿಕರಿಂದ ಹಿಂಸಾಚಾರವನ್ನು ಹೊರಹಾಕುವ ಪ್ರಯತ್ನಗಳನ್ನು ವಿಫಲಗೊಳಿಸಬಹುದಾದ ಹಲವಾರು ಸ್ಥಳಗಳಿವೆ) ಅಮಿತ್ ಶಾ ಹತ್ತಿರದ ನವಾಡ ಜಿಲ್ಲೆಯ ಸಭೆಯಿಂದ ಈ ಜೋರಾಗಿ ಚುನಾವಣಾ ಕರೆ ನೀಡಿದರು: 'ನೀವು ನಮಗೆ ಎಲ್ಲಾ 40 ಲೋಕಸಭಾ ಸ್ಥಾನಗಳನ್ನು ನೀಡಿ 2024ರ ಚುನಾವಣೆಯಲ್ಲಿ ಮೋದಿಜಿಯನ್ನು ಮತ್ತೆ ಅಧಿಕಾರಕ್ಕೆ ತನ್ನಿ; ಮತ್ತು 2025 ರ ವಿಧಾನಸಭಾ ಚುನಾವಣೆಯಲ್ಲಿ ನಮಗೆ ಸ್ಪಷ್ಟ ಬಹುಮತವನ್ನು ನೀಡಿ. ನಾವು ಎಲ್ಲಾ ಗಲಭೆಕೋರರನ್ನು ತಲೆಕೆಳಗಾಗಿ ಇಡುತ್ತೇವೆ'!

ಬಿಹಾರವು ಬಹುಶಃ ಸ್ಪಷ್ಟವಾದ ನರಮೇಧದ ಬೆದರಿಕೆಯನ್ನು ಮತ್ತು ಕೋಮುಗಲಭೆಯ ಆಧಾರದ ಮೇಲೆ ಮತಕ್ಕಾಗಿ ಹೆಚ್ಚು ನೇರವಾದ ಕರೆಯನ್ನು ಕೇಳಿಲ್ಲ. ಬಿಹಾರವು 1990 ರಲ್ಲಿ ಅಡ್ವಾಣಿಯವರ ಗಲಭೆ ರಥವನ್ನು ನಿಲ್ಲಿಸಿತ್ತು, 2004 ರಲ್ಲಿ ಬಿಹಾರವು 2002 ರ ಗುಜರಾತ್ ನರಮೇಧದ ನಂತರ ಕೇಂದ್ರದಲ್ಲಿ ಬಿಜೆಪಿ ಸರ್ಕಾರವನ್ನು ಸೋಲಿಸಲು ನಿರ್ಣಾಯಕವಾಗಿ ಮತ ಹಾಕಿತು. ಊಳಿಗಮಾನ್ಯ-ಕೋಮು ಹಿಂಸೆಯ ರಾಜಕಾರಣವನ್ನು ತಿರಸ್ಕರಿಸಿದರು. ಕೋಮುವಾದಿ ಫ್ಯಾಸಿಸ್ಟ್ ಆಕ್ರಮಣದ ಸಂಘ-ಬಿಜೆಪಿ ಪ್ರಚಾರವನ್ನು ಹಿಮ್ಮೆಟ್ಟಿಸಲು ಕೋಮು ವಿರೋಧಿ ಪರಂಪರೆಯನ್ನು ಪ್ರತಿಪಾದಿಸಬೇಕಾಗಿದೆ. "ಪ್ರಜಾಪ್ರಭುತ್ವ ಉಳಿಸಿ, ಭಾರತ ಉಳಿಸಿ" ಎಂಬ ಕರೆಯನ್ನು ವಿಜಯದತ್ತ ಮುನ್ನಡೆಸಬೇಕು. ★

# ಕರ್ನಾಟಕದ ಜನತೆಯು ಎಚ್ಚೆತ್ತು, ಮುಂಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಿ

ಹಿಂದೆಂದೂ ಇಲ್ಲದಂತಹ ಭ್ರಷ್ಟಾಚಾರ, ಜನಸಾಮಾನ್ಯರ ಬದುಕನ್ನು ಹಿಂಡಿರುವ ಅಗತ್ಯ ವಸ್ತುಗಳ ಬೆಲೆ ಏರಿಕೆ, ರಾಜ್ಯದಲ್ಲಿ ಶೈಕ್ಷಣಿಕ ಮತ್ತು ವೈದ್ಯಕೀಯ ಮೂಲಸೌಕರ್ಯಗಳ ನಾಶ, ಕಾರ್ಮಿಕ ವರ್ಗವನ್ನು ನಿರ್ಗತಿಕ ಸ್ಥಿತಿಗೆ ತಳ್ಳಿದ ಕಾನೂನುಗಳು, ಯುವಜನತೆಯ ಕನಸುಗಳನ್ನು ಕೊಂದ ಬೃಹತ್ ನಿರುದ್ಯೋಗ, ಸಂಕಷ್ಟದಲ್ಲಿರುವ ಮಾರುಕಟ್ಟೆ, ಕುಸಿದಿರುವ ಆರ್ಥಿಕತೆ, ಗಗನಕ್ಕೇರುತ್ತಿರುವ ಸಾಲ, ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ, ಜಾತಿ ದೌರ್ಜನ್ಯಗಳು, 'ಆಪರೇಷನ್ ಕಮಲ', ಕೋಮುವಾದ - ಇವೆಲ್ಲವೂ ಈ ಸರ್ಕಾರದ ಆಡಳಿತದ ಫಲ.

ಕೋವಿಡ್‌ನ ಎರಡನೇ ಅಲೆಯ ಸಮಯದಲ್ಲಿ ಈ ಬಿಜೆಪಿ ಸರ್ಕಾರವು ನಮ್ಮ ಜೀವಗಳನ್ನು ರಕ್ಷಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂಬುದನ್ನು ನಾವು ಎಂದಾದರೂ ಮರೆಯಬಹುದೇ? ಕರ್ನಾಟಕದಾದ್ಯಂತ 40,000+ ಜನರು ಕೋವಿಡ್‌ನಿಂದ ಸಾವನ್ನಪ್ಪಿದ್ದಾರೆ. ಚಾಮರಾಜನಗರದ ಸರ್ಕಾರಿ ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕ ಪೂರೈಕೆಯಿಲ್ಲದೆ ಸಾವನ್ನಪ್ಪಿದ 24 ಅಮಾಯಕ ಕೋವಿಡ್ ರೋಗಿಗಳನ್ನು ಮರೆಯಲು ಸಾಧ್ಯವೇ? ಸರ್ಕಾರ ಸರಿಯಾದ ಯೋಜನೆಗಳನ್ನು ರೂಪಿಸಿದ್ದರೆ ಅನಗತ್ಯವಾಗಿ ಜೀವಗಳನ್ನು ಕಳೆದುಕೊಳ್ಳಬೇಕಾಗಿರಲಿಲ್ಲ. ಇಂತಹ ಕೆಟ್ಟ ಈ ಬಿಜೆಪಿ ಸರ್ಕಾರವನ್ನು ಕ್ಷಮಿಸಬಹುದೇ?

**1. ಭ್ರಷ್ಟಾಚಾರ:** ಬಿಜೆಪಿ ಸರ್ಕಾರದ ಜನಪ್ರಿಯ ಹೆಸರು 40% ಕಮಿಷನ್ ಸರ್ಕಾರ! ಗುತ್ತಿಗೆದಾರರ ಸಂಘವು ಪ್ರಧಾನಿ ಮೋದಿಯವರಿಗೆ ಪತ್ರ ಬರೆದು ಶೇ.40ರಷ್ಟು ಭ್ರಷ್ಟಾಚಾರದ ಬಗ್ಗೆ ದೂರು ನೀಡಿದ್ದರೂ ಮೋದಿ ಸುಮ್ಮನಿದ್ದರು. ಇತ್ತೀಚೆಗೆ ಬಿಜೆಪಿಯ ಹಾಲಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಹಾಗೂ ಅವರ ಪುತ್ರ ಲಂಚ ಕೇಳುತ್ತಿದ್ದ ವೇಳೆ ಸಿಕ್ಕಿಬಿದ್ದು ಬಂಧನಕ್ಕೊಳಗಾಗಿದ್ದಾರೆ. ಹೀಗಿದ್ದರೂ ಸಹ ಮೋದಿಯವರು ತಮ್ಮ ಸರ್ಕಾರ ಭ್ರಷ್ಟಾಚಾರ-ಮುಕ್ತ ಸರ್ಕಾರ ಎಂದು ಕರೆದುಕೊಳ್ಳುತ್ತಾರೆ!

**2. ಹೆಚ್ಚುತ್ತಿರುವ ನಿರುದ್ಯೋಗದ ಪ್ರಮಾಣ:** ಉದ್ಯೋಗವನ್ನು ನೀಡುವುದರಲ್ಲಿ ಬಿಜೆಪಿ ವಿಫಲವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಉದ್ಯೋಗ ಖಾತ್ರಿ ಅಡಿಯಲ್ಲಿ ಉದ್ಯೋಗ ನೀಡುವುದು ಕಡ್ಡಾಯವಾಗಿದ್ದರೂ ಕೆಲಸವನ್ನು ನೀಡುತ್ತಿರುವುದಿಲ್ಲ ಅಥವಾ ವೇತನವನ್ನು ಸಮಯಕ್ಕೆ ಸರಿಯಾಗಿಯಾಗಲಿ ಅಥವಾ ಸಂಪೂರ್ಣ ವೇತನವನ್ನಾಗಲಿ ನೀಡಿರುವುದಿಲ್ಲ. ಯುವಕರಿಗೆ ಘನತೆಯುತ್ತ ಕೆಲಸ ಸಿಗುವುದು ಕಷ್ಟವಾಗಿದೆ. ಕರ್ನಾಟಕದ ರಾಜ್ಯ ಸರ್ಕಾರೀ ಹುದ್ದೆಗಳಲ್ಲಿ ಮೂರನೇ ಒಂದು ಭಾಗದಷ್ಟು ಹುದ್ದೆಗಳು ಖಾಲಿ ಇದ್ದಾವೆ, ಮತ್ತು ಬಿಜೆಪಿ ಸರ್ಕಾರವು ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಖಾಸಗೀಕರಣ ಹೆಚ್ಚಾಗುತ್ತಿದ್ದು, ಕೆಲಸದ ಲಭ್ಯತೆಯನ್ನು ಇದು ಕಡಿಮೆ ಮಾಡುತ್ತಿದೆ. ರಸ್ತೆ ಮತ್ತು ಸಾರಿಗೆ ಸಂಸ್ಥೆಗಳನ್ನು ಸಹ ಖಾಸಗೀಕರಣ ಮಾಡಲು ಹೊರಟಿದೆ ಈ ಬಿಜೆಪಿ ಸರ್ಕಾರ. ಇದರಿಂದ ಲಕ್ಷಾಂತರ ಕಾರ್ಮಿಕರು ತಮ್ಮ ಕೆಲಸಗಳನ್ನು ಕಳೆದುಕೊಳ್ಳುತ್ತಾರೆ.

**3. "ತಾರತಮ್ಯ ಮಾಡುವುದು":** ಮನುಷ್ಯ ವಿನಾಶದ ಜಾತಿವಾದ ಮತ್ತು ಕೋಮುವಾದವನ್ನು ಜಾರಿಗೊಳಿಸುವುದರಲ್ಲಿ ಮಾತ್ರ ಬಿಜೆಪಿ ಸರ್ಕಾರವು ಯಶಸ್ವಿಯಾಗಿದ್ದು, ಅಭಿವೃದ್ಧಿಯಲ್ಲಲ್ಲ. ಮುಸಲ್ಮಾನರ ವಿರುದ್ಧದ ದಾಳಿಗಳು, ಆರ್ಥಿಕ ಬಹಿಷ್ಕಾರಕ್ಕೆ ಕರೆ ಮತ್ತು ದ್ವೇಷ ಪ್ರೇರಿತ ಆಂದೋಲನಗಳು ಸಾಮಾನ್ಯವಾಗಿದೆ. ಮುಸಲ್ಮಾನರ ವಿರುದ್ಧದ ದಾಳಿಯಲ್ಲಿ ಇತ್ತೀಚಿನ ಸುದ್ದಿ ಎಂದರೆ ಶ್ರೀ । ಇದ್ರೀಸ್ ಪಾಶ ಅವರ ಕೋಮುವಾದಿ-ಪ್ರೇರಿತ ಸಾಮೂಹಿಕ ಹತ್ಯೆ. ಬಿಜೆಪಿ ಶಾಸಕರು ಮತ್ತು ಸಂಸದೀಯರ ಪ್ರಚೋದನೆ ಮತ್ತು ಆರ್ ಎಸ್ ಎಸ್, ಬಜರಂಗ ದಳ, ಶ್ರೀ ರಾಮ ಸೇನೆ, ಇತ್ಯಾದಿ ಸಂಘಗಳ ಜೊತೆಗೆ ಮಾಧ್ಯಮದವರ ಕುಮ್ಮಕ್ಕಿನಿಂದಾಗಿ ರಾಜ್ಯಾದ್ಯಂತ ಭಯದ ವಾತಾವರಣವನ್ನು ಸೃಷ್ಟಿಸಲಾಗಿದೆ. ಹಿಜಾಬ್ ನಿಷೇಧದ ನಂತರ ಈಗ ಲಿಂಗಾಯತ/ಒಕ್ಕಲಿಗ ಸಮುದಾಯದವರನ್ನು ಮುಸಲ್ಮಾನರ ವಿರುದ್ಧ ಎತ್ತಿಕಟ್ಟುವ ಪ್ರಯತ್ನದಲ್ಲಿ ಮುಸಲ್ಮಾನರಿಗಿದ್ದ ಶೇಖಡಾ 4ರಷ್ಟು ಮೀಸಲಾತಿಯನ್ನು ಹಿಂಪಡೆದಿದ್ದಾರೆ. ಸಮಾಜವನ್ನು ವಿಭಜಿಸಲು ಬಿಜೆಪಿಯ ಮತ್ತೊಂದು ಪ್ರಯತ್ನ ಇದಾಗಿದೆ.

**4. ಜಾತಿ ದೌರ್ಜನ್ಯ ಮತ್ತು ದಲಿತ ವಿರೋಧಿ ಯೋಜನೆಗಳು ಹೆಚ್ಚುತ್ತಿರುವುದು:** ಕೊಲೆ, ಅತ್ಯಾಚಾರ, ದೇವಸ್ಥಾನ ಪ್ರವೇಶ ನಿಷೇಧ, ಅಸ್ಪೃಶ್ಯತೆ, ಇತ್ಯಾದಿ ಘಟನೆಗಳು ಹೆಚ್ಚುತ್ತಿದ್ದು, ಇದು ಬಿಜೆಪಿಯ ಜಾತಿ ರಾಜಕಾರಣವನ್ನು ಬಹಿರಂಗ ಮಾಡುತ್ತದೆ. ಗೋ ರಕ್ಷಣೆಯ ನೆಪದಲ್ಲಿ ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗುತ್ತಲೇ ಇದೆ. ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಮಾಲೂರು ತಾಲೂಕಿನಲ್ಲಿ ದಲಿತ ಹುಡುಗನೊಬ್ಬ ದೇವಸ್ಥಾನದೊಳಗೆ ಪ್ರವೇಶಿಸಿದ ಎಂಬ ನೆಪದಲ್ಲಿ ಅವನ ಕುಟುಂಬಕ್ಕೆ ರೂ. 60,000/- ದಂಡ ವಿಧಿಸಿದರು. ಪರಿಶಿಷ್ಟ ಜಾತಿ ಮತ್ತು ಪಂಗಡದ ಉಪ ಯೋಜನೆಗಳಡಿಯಲ್ಲಿದ್ದ ಹಣಕಾಸನ್ನು ಮೂಲಸೌಕರ್ಯಗಳನ್ನು ಕಲ್ಪಿಸುವ ನೆಪದಲ್ಲಿ ದಲಿತ ಮತ್ತು ಆದಿವಾಸಿ ಸಮುದಾಯದವರಿಗೆ ಮೋಸ ಮಾಡಲಾಗುತ್ತಿದೆ. ಹಾಗೆಯೇ ಒಳಮೀಸಲಾತಿಯ ಹೆಸರಿನಲ್ಲಿ ಸಹ ಜನರನ್ನು ದಿಕ್ಕುತಪ್ಪಿಸಲಾಗುತ್ತಿದೆ.

**5. ರೈತ ವಿರೋಧಿ ನೀತಿ:** 2018ರಿಂದ ಕರ್ನಾಟಕದಲ್ಲಿ 4,257 ರೈತರು ಆತ್ಮಹತ್ಯೆಗೀಡಾಗಿದ್ದಾರೆ. ರೈತ ವಿರೋಧಿ ಕಾನೂನುಗಳು ಗ್ರಾಮೀಣ ಕೃಷಿ ಸಮುದಾಯಗಳ ನಿರ್ಗತಿಕತೆಗೆ ಕಾರಣವಾಗಿವೆ. ರೈತರ ಖಾತೆಗೆ ಒಂದಿಷ್ಟು ಹಣ ಜಮಾ ಮಾಡಿದ್ದನ್ನು ಬಿಟ್ಟರೆ ಬಿಜೆಪಿ ಸರ್ಕಾರ ರೈತರನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಈ ಹಣವೂ ರೈತರ ಕೋಪವನ್ನು ತಣಿಸಲು ಮತ್ತು ಅವರು ಸಹ ಸರ್ಕಾರದ ಫಲಾನುಭವಿಗಳಂತೆ ತೋರಿಸುವುದಕ್ಕಾಗಿ ನೀಡಿದ್ದಾಗಿದೆ. ರಿಯಾಲ್ ಎಸ್ಟೇಟ್ ಮಾಫಿಯಾದವರು ಗ್ರಾಮೀಣ ಪ್ರದೇಶಗಳಿಗೆ ಲಗ್ಗೆ ಹಿಟ್ಟಿದ್ದಾರೆ. ಆಹಾರ ಬೆಳೆಗಳನ್ನು ಬೆಳೆಯವಂತಹ ಭೂ ವಿಸ್ತೀರ್ಣ ಕಡಿಮೆಯಾಗಿದ್ದು, ಇದರಿಂದಾಗಿ ನಮ್ಮ ರಾಜ್ಯದ ಆಹಾರ ಭದ್ರತೆಗೆ ಧಕ್ಕೆಯಾಗಿದೆ. ಬಜೆಟ್‌ನಲ್ಲಿ ಕೃಷಿಯನ್ನು ಕಡೆಗಣಿಸಲಾಗಿದೆ.

**6. ಕಾರ್ಮಿಕರ ವಿರೋಧಿ ನೀತಿ:** ಸರಕಾರವು ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ನಿರಾಕರಿಸುವ ಪ್ರಕ್ರಿಯೆಯಲ್ಲಿ ಮುಂಚೂಣಿಯಲ್ಲಿದೆ. ಬಿಜೆಪಿಯು ಕಾರ್ಖಾನೆಗಳ ಕಾಯಿದೆಗೆ ತಿದ್ದುಪಡಿ ಮಾಡುವ ಕಾನೂನನ್ನು ಅಂಗೀಕರಿಸಿತು, ಕೆಲಸದ ಅವಧಿಯನ್ನು ದಿನಕ್ಕೆ 9 ಗಂಟೆಗಳಿಂದ 12 ಗಂಟೆಗಳವರೆಗೆ ಹೆಚ್ಚಿಸಿತು ಮತ್ತು ಮಹಿಳೆಯರಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅನುಮತಿ ನೀಡಿತು. ಬಿಜೆಪಿ ಸರಕಾರ ಕಾರ್ಪೊರೇಟ್ ಲಾಬಿಗೆ ಮಣಿದು ಕಾರ್ಮಿಕರಿಗೆ ದೊರಕಬೇಕಾದ ಯೋಗ್ಯ ವೇತನವನ್ನು ನಿರಾಕರಿಸಿದೆ. ಡೈಯಿಂಗ್ ಮತ್ತು ಪ್ರಿಂಟಿಂಗ್, ರೇಷ್ಮೆ ಮತ್ತು ಜವಳಿ ಉದ್ಯಮಗಳಲ್ಲಿ ಪಾವತಿಸಬೇಕಾದ ಕನಿಷ್ಠ ವೇತನವನ್ನು ದಿನಕ್ಕೆ ರೂ. 130/-

ನಿಗಧಿಗೊಳಿಸಿದೆ. ಆಶಾ, ಅಂಗನವಾಡಿ, ಮಧ್ಯಾಹ್ನದ ಊಟ ಸೇರಿದಂತೆ ಎಲ್ಲಾ ಯೋಜನಾ ಕಾರ್ಯಕರ್ತರಿಗೆ ಇನ್ನೂ ಕಡಿಮೆ ವೇತನ ನೀಡುತ್ತಿದ್ದಾರೆ ಮತ್ತು ಇವರಿಗೆ ಕಾರ್ಮಿಕರ ಸ್ಥಾನಮಾನವನ್ನು ನಿರಾಕರಿಸಲಾಗಿದೆ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸಿರುವುದಿಲ್ಲ. ಲಕ್ಷಾಂತರ ಗುತ್ತಿಗೆ ಕಾರ್ಮಿಕರು, ಅದರಲ್ಲೂ ಪೌರಕಾರ್ಮಿಕರು, ಅರೋಗ್ಯ ಕಾರ್ಮಿಕರು ಮತ್ತು ಇತರರು ಸತತವಾಗಿ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕೆಂದು ಹೋರಾಟಗಳನ್ನು ಮಾಡಿದ್ದರೂ ಸಹ, ಈ ಕಾರ್ಮಿಕರನ್ನು ಲೆಕ್ಕಿಸದೆ, ಬಿಜೆಪಿ ಸರ್ಕಾರವು ಎಲ್ಲಾ ಸರ್ಕಾರೀ ಇಲಾಖೆಗಳಲ್ಲಿ ಗುತ್ತಿಗೆ ಪದ್ಧತಿಯನ್ನು ಹೆಚ್ಚಿಸಿ, ಈ ಶೋಷಿತ ಪದ್ಧತಿಯನ್ನು ಕೊನೆಗಾಣಿಸುವಲ್ಲಿ ವಿಫಲವಾಗಿದೆ.

**7. ಬಿಜೆಪಿ ಸರ್ಕಾರ ತನ್ನ ಪಕ್ಷಕ್ಕಾಗಿ ಕರ್ನಾಟಕವನ್ನು ಬಲಿಕೊಟ್ಟಿದೆ:** ಡಬಲ್ ಎಂಜಿನ್ ಎಂದು ಕರೆಯಲ್ಪಡುವ ಬಿಜೆಪಿ ಸರ್ಕಾರ, ಬಿಜೆಪಿ ಹೈಕಮಾಂಡ್‌ಗೆ ಕುರುಡಾದ ವಿಧೇಯತೆಯನ್ನು ತೋರುವು ಮೂಲಕ ಕರ್ನಾಟಕದ ಜನರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಕೆಲಸ ಮಾಡಿದೆ. ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಸಾವಿರಾರು ಕೋಟಿ ರೂಪಾಯಿಗಳು ಜಿಎಸ್‌ಟಿ ನಷ್ಟಭರ್ತಿಯನ್ನು ನೀಡಬೇಕಾಗಿರುತ್ತದೆ. ಕರ್ನಾಟಕವು ಈಗ ತಾನು ಕೊಡುವ ತೆರಿಗೆ ವಂತಿಗೆಯಲ್ಲಿ ಪ್ರತಿ ರೂ.100/- ಗಳಿಗೆ ಪ್ರತಿಯಾಗಿ ರೂ.40/-ವನ್ನು ಪಡೆಯುತ್ತದೆ. ಇದು ಮೊದಲಿದ್ದ ರೂ.53/-ರಿಂದ ಕಡಿಮೆಯಾಗಿದೆ. ಕಳೆದ ಐದು ವರ್ಷಗಳಲ್ಲಿ ಕೇಂದ್ರೀಯ ತೆರಿಗೆಗಳು ಮತ್ತು ಜಿಎಸ್‌ಟಿ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ರಾಜ್ಯದ ಪಾಲು ಗಣನೀಯವಾಗಿ ಕುಸಿದಿದೆ. ರಾಜ್ಯಗಳಿಗೆ ತೆರಿಗೆ ಹಂಚಿಕೆಯ ಬದಲಾದ ಸೂತ್ರದ ಅಡಿಯಲ್ಲಿ, ಕರ್ನಾಟಕದ ಪಾಲು 4.71% (14 ನೇ ಹಣಕಾಸು ಆಯೋಗದ ಅಡಿಯಲ್ಲಿ) ರಿಂದ 3.64% ಗೆ (2021-26ರ 15 ನೇ ಹಣಕಾಸು ಆಯೋಗದ ಅಡಿಯಲ್ಲಿ) ಇಳಿದಿದೆ. 2021ರ ಪ್ರವಾಹದ ಕಾರಣ ಉಂಟಾದ ನಷ್ಟಕ್ಕೆ ಪರಿಹಾರವನ್ನು ಮೂರು ತಿಂಗಳು ತಡವಾಗಿ ಪರಿಹಾರಧನವನ್ನು ಬಿಡುಗಡೆ ಮಾಡಲಾಯಿತು ಮತ್ತು ಈ ಹಣವು ನಗಣ್ಯವಾಗಿತ್ತು. ಕರ್ನಾಟಕದ 25 ಬಿಜೆಪಿ ಸಂಸದರು ಸಂಸತ್ತಿನಲ್ಲಿ ಇದರ ವಿರುದ್ಧ ಧ್ವನಿ ಎತ್ತಲು ವಿಫಲರಾಗಿದ್ದು, ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಲು ಮುಂದಾಗಿದ್ದಾರೆ. ಇದರಿಂದಗಿ ಕರ್ನಾಟಕಕ್ಕೆ ದೊಡ್ಡ ಅನ್ಯಾಯವಾಗಿದೆ.

**8. ಹಿಂದಿ ಹೇರಿಕೆ:** ಕರ್ನಾಟಕದಲ್ಲಿ ಹಿಂದಿ ಹೇರಿಕೆ ವಾಸ್ತವಾಗಿದ್ದು, ಇದನ್ನು ನೋಡಿಯು ಮೌನವಾಗಿರುವ ಬಿಜೆಪಿ ರಾಜ್ಯ ಸರಕಾರಕ್ಕೆ ಧಿಕ್ಕಾರ. ಕರ್ನಾಟಕ ಹಾಲು ಮಹಾಮಂಡಳಿಯು ಹಿಂದಿಯ ದಹಿ ಪದ ಬಳಸಿ ಮೊಸರು ಎಂಬ ಪದವನ್ನು ಬ್ರಾಕೆಟ್‌ನಲ್ಲಿ ಬಳಸುವಂತೆ ಒತ್ತಾಯಿಸಿ ಹಿಂದಿ ಹೇರುವ ಪ್ರಯತ್ನ ನಡೆದಾಗಲೂ ಬಿಜೆಪಿ ಸರಕಾರ ಸುಮ್ಮನಿತ್ತು. ಹಲವಾರು ವಿರೋಧ ಪಕ್ಷಗಳು ಮಾಡಿದ ವಿರೋಧದಿಂದಾಗಿ ಇದನ್ನು ಹಿಂಪಡೆಯಲಾಗಿದೆ.

**9. ರಾಜ್ಯದಲ್ಲಿ ಕುಸಿಯುತ್ತಿರುವ ಮೂಲಸೌಕರ್ಯಗಳು:** ರಸ್ತೆಗಳು, ಆಸ್ಪತ್ರೆಗಳು, ಶಾಲೆಗಳು, ಮತ್ತು ಇತರೆ ಮೂಲಸೌಕರ್ಯಗಳು ರಾಜ್ಯದಲ್ಲಿ ಶೋಚನೀಯವಾಗಿದ್ದಾವೆ. 2019ರ ಭಾರಿ ಮಳೆಯಿಂದಾಗಿ ಉಂಟಾದ ಪ್ರವಾಹದಲ್ಲಿ ನಾಶವಾಗಿದ್ದ ರಸ್ತೆ ಮತ್ತು ಇತರೆ ಗ್ರಾಮೀಣ ಮೂಲಸೌಕರ್ಯಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಜಾರಿಗೊಳಿಸಿದ್ದ 'ನಮ್ಮ ಗ್ರಾಮ, ನಮ್ಮ ರಸ್ತೆ' ಯೋಜನೆಯಡಿಯಲ್ಲಿ ಒದಗಿಸಿದ್ದ ಹಣಕಾಸನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡಿರುವುದಿಲ್ಲ. ಜಲ್ ಜೀವನ್ ಯೋಜನೆಯ ದೊಡ್ಡ ಭರವಸೆಗಳು ನೀಡಿದ್ದರೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ಮತ್ತು ಬರದ ಸಮಯದಲ್ಲಿ ನೀರಿನ ಸರಬರಾಜು ಒದಗಿಸಿರುವುದಿಲ್ಲ. ಪ್ರಾಥಮಿಕ ಅರೋಗ್ಯ ಕೇಂದ್ರಗಳಲ್ಲಿ ಮೂಲಸೌಕರ್ಯಗಳು ಮತ್ತು ಔಷಧಿಗಳು ಒದಗಿಸಲು ಹಣಕಾಸು ನೀಡುತ್ತಿಲ್ಲ. ರಾಜ್ಯದ 9 ಸರ್ಕಾರೀ ಜಿಲ್ಲಾ ಆಸ್ಪತ್ರೆಗಳನ್ನು ಖಾಸಗೀಕರಣ ಮಾಡಲು ಹೊರಟಿದೆ ಈ ಬಿಜೆಪಿ ಸರ್ಕಾರ.

**10. ಶಾಲೆಗಳ ಅಭಿವೃದ್ಧಿಗೆ ಹಣ ನೀಡದೆ ಇರುವುದು :** ದಲಿತ, ಆದಿವಾಸಿ, ಅಲ್ಪಸಂಖ್ಯಾತ ಮತ್ತು ಇತರೆ ಸಾಮಾಜಿಕವಾಗಿ ತಳಮಟ್ಟದಲ್ಲಿರುವ ವರ್ಗಗಳ ಮಕ್ಕಳ ಭವಿಷ್ಯವನ್ನು ಬಿಜೆಪಿ ಸರ್ಕಾರವು ಅಪಾಯಕ್ಕೊಳಪಡಿಸುತ್ತಿದೆ. ಶಿಕ್ಷಣಕ್ಕಾಗಿ ಮೀಸಲಿಟ್ಟ ಹಣವನ್ನು ಸತತವಾಗಿ 2019ರಿಂದ ಕಡಿಮೆಯಾಗಿಸಿಕೊಂಡು ಬಂದಿದೆ. ಸರ್ಕಾರೀ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ ಮಾಡದೇ ಶೇಖಡಾ 57.7ರಷ್ಟು ಹುದ್ದೆಗಳು ಖಾಲಿ ಇರುತ್ತದೆ. ಇದು ದೇಶದಲ್ಲೇ ಅತಿ ಹೆಚ್ಚು ಖಾಲಿ ಹುದ್ದೆಗಳ ಪ್ರಮಾಣವಾಗಿದೆ. ಕರ್ನಾಟಕದ ಶೇಖಡಾ 23ರಷ್ಟು ಸರ್ಕಾರೀ ಶಾಲೆಗಳಲ್ಲಿ ಮಾತ್ರ ಮೂಲಭೂತ ಸೌಕರ್ಯಗಳು ಇರುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಇತರೆ ಹಿಂದುಳಿದ ವರ್ಗದ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪಾವತಿ ಮಾಡದೆ ಇರುವುದರಿಂದ ವಿದ್ಯಾರ್ಥಿಗಳು ಸಂಕಷ್ಟವನ್ನು ಎದುರಿಸುತ್ತಿದ್ದಾರೆ.

**ನಮ್ಮ ಹಕ್ಕೊತ್ತಾಯಗಳು:**

- ರಾಜ್ಯದಲ್ಲಿ ಶಾಂತಿ ಮತ್ತು ಕೋಮುಸೌಹಾರ್ದತೆಯನ್ನು ಕಾಪಾಡಬೇಕು ಮತ್ತು ಭ್ರಷ್ಟಾಚಾರವನ್ನು ಕೊನೆಗಾಣಿಸಬೇಕು
- ನಿರುದ್ಯೋಗವನ್ನು ಕೊನೆಗಾಣಿಸಬೇಕು ಮತ್ತು ರಾಜ್ಯ ಸರ್ಕಾರದಲ್ಲಿ ಇರುವ 2.5 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು
- ಎಲ್ ಪಿ ಜಿ, ಇಂಧನ ಮತ್ತು ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳನ್ನು ಕಡಿಮೆ ಮಾಡಬೇಕು
- ಎಲ್ಲಾ ವಸತಿ ನಿರತ ಕಾರ್ಮಿಕರಿಗೆ ಮನೆಗಳನ್ನು ಉಚಿತವಾಗಿ ನಿರ್ಮಿಸಿಕೊಡಬೇಕು
- ಎಲ್ಲಾ ರೈತ ವಿರೋಧಿ ಕಾನೂನುಗಳನ್ನು ಹಿಂಪಡೆಯಬೇಕು ಮತ್ತು ಕನಿಷ್ಠ ಬೆಂಬಲ ಬೆಲೆಯನ್ನು ಖಚಿತ ಪಡಿಸಲು ಕಾನೂನನ್ನು ಜಾರಿಗಳಿಸಬೇಕು
- ಎಲ್ಲಾ ಕಾರ್ಮಿಕ-ವಿರೋಧಿ ಕಾಯ್ದೆಗಳನ್ನು ಹಿಂಪಡೆಯಬೇಕು, ಕಾರ್ಮಿಕರಿಗೆ ರೂ. 30,000/- ಕನಿಷ್ಠ ವೇತನವನ್ನು ಖಚಿತಪಡಿಸಬೇಕು
- ಆಶಾ, ಅಂಗನವಾಡಿ, ಬಿಸಿ ಊಟ ಕಾರ್ಮಿಕರನ್ನು 'ಕಾರ್ಮಿಕರು' ಎಂದು ಪರಿಗಣಿಸಿ ಅವರಿಗೆ ಎಲ್ಲಾ ಸವಲತ್ತುಗಳನ್ನು ಒದಗಿಸಬೇಕು; ಪೌರಕಾರ್ಮಿಕರು ಮತ್ತು ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ವಾಹನ ಚಾಲಕರು, ಸಹಾಯಕರು ಮತ್ತು ಇತರೆ ಎಲ್ಲಾ ಕಾರ್ಮಿಕರನ್ನು ಖಾಯಂಗೊಳಿಸಬೇಕು, ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕು
- ಉದ್ಯೋಗ ಖಾತರಿ ಸಮರ್ಪಕ ಜಾರಿಗೊಳಿಸಬೇಕು, ಉದ್ಯೋಗ ಇಲ್ಲದವರಿಗೆ ನಿರುದ್ಯೋಗ ಭತ್ಯೆ ನೀಡಬೇಕು. ಪ್ರತಿ ಗ್ರಾಮವಾರು ಸರ್ವೆ ನಡೆಸಿ, ಮನೆ, ನಿವೇಶನ ಹಾಗೂ ಭೂಮಿ ಇಲ್ಲದವರಿಗೆ ನಿವೇಶನ, ಭೂಮಿ ಹಂಚಬೇಕು.
- ಮುಸಲ್ಮಾನರಿಗೆ ಇದ್ದ ಶೇಖಡಾ 4 ರಷ್ಟು ಮೀಸಲಾತಿಯನ್ನು ಮರುಸ್ಥಾಪಿಸಬೇಕು
- 'ಗೋ ರಕ್ಷಣಾ ಪಡೆಗಳನ್ನು' ಕಾನೂನು ಬಾಹಿರವೆಂದು ಪರಿಗಣಿಸಿ, ಅವುಗಳನ್ನು ರದ್ದುಗೊಳಿಸಬೇಕು
- ಜಾತಿ ಆಧಾರಿತ ದೌರ್ಜನ್ಯಗಳನ್ನು ಕೊನೆಗಾಣಿಸಬೇಕು ಮತ್ತು ದಲಿತ ಮತ್ತು ಆದಿವಾಸಿ ಸಮುದಾಯದವರ ಮೇಲೆ ಎಸಗುವ ಜಾತಿ ನಿಂದನೆ ಪ್ರಕರಣಗಳಲ್ಲಿ ಶೀಘ್ರವಾಗಿ ನ್ಯಾಯ ಒದಗಿಸಬೇಕು
- ಎಸ್ ಸಿ ಎಸ್ ಪಿ ಮತ್ತು ಎಸ್ ಟಿ ಎಸ್ ಪಿ ಹಣಕಾಸನ್ನು ಇತರೆ ಕಾರಣಗಳಿಗಾಗಿ ಉಪಯೋಗಿಸುವುದನ್ನು ನಿಲ್ಲಿಸಬೇಕು ★

# ನಂದಿನಿ - ಅಮುಲ್ ವಿವಾದ ಮತ್ತು ರೈತರ ಮೇಲಿನ ಪರಿಣಾಮ

ಏಪ್ರಿಲ್ 5 ರಂದು, ಡೈರಿ ಬ್ರಾಂಡ್ 'ಅಮುಲ್' ಬೆಂಗಳೂರಿನಲ್ಲಿ "ಹೊಸ ತಾಜಾತನದ ಅಲೆ" ಇರುತ್ತದೆ ಎಂದು ಟ್ವಿಟರ್‌ನಲ್ಲಿ ಘೋಷಿಸಿತು. ಅವರ ಹ್ಯಾಶ್‌ಟ್ಯಾಗ್ - #LaunchAlert - ಚುನಾವಣೆಗೆ ಒಳಪಟ್ಟಿರುವ ಕರ್ನಾಟಕದಲ್ಲಿ ಹೊಸ ವಿವಾದದ ಅಲೆಯನ್ನು ಆಹ್ವಾನಿಸಿದೆ. ಅಮುಲ್ ಅದನ್ನು ಘೋಷಿಸಿತು. ಆರು ತಿಂಗಳ ಅವಧಿಯಲ್ಲಿ ಬೆಂಗಳೂರಿನಲ್ಲಿ ತಾಜಾ ಹಾಲು ಮತ್ತು ಮೊಸರನ್ನು ಮಾರಾಟ ಮಾಡಲಾಗುವುದು. ಇದು 'ನಂದಿನಿ'ಯ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಸಮರ್ಥಿಸಿದ ಎಲ್ಲಾ ಮಧ್ಯಸ್ಥಗಾರರಿಂದ ವ್ಯಾಪಕ ಹಿನ್ನಡೆಯನ್ನು ಆಹ್ವಾನಿಸಿತು, ಮತ್ತು ದೇಶದ ಎರಡನೇ ಅತಿದೊಡ್ಡ ಹಾಲು ಸಹಕಾರಿ ಸಂಸ್ಥೆ. ಈ ವಿವಾದವು ರಾಜ್ಯದಲ್ಲಿ ಬಿಜೆಪಿಯನ್ನು ಹಿಮ್ಮೆಟ್ಟಿಸಿದೆ.

ಈ ವಿವಾದದ ಹಿನ್ನೆಲೆಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಗೃಹ ಸಚಿವ ಅಮಿತ್ ಶಾ ಅವರು ಮಾರ್ಚ್ 2023 ರಲ್ಲಿ ಗುಜರಾತ್‌ನಲ್ಲಿ ಭಾರತೀಯ ಡೈರಿ ಅಸೋಸಿಯೇಷನ್‌ನ ವಾರ್ಷಿಕ ಸಮಾರಂಭದಲ್ಲಿ ಹೇಳಿಕೆ ನೀಡಿದರು; ಬಿಜೆಪಿ ಸರ್ಕಾರವು ದೇಶದ 2 ಲಕ್ಷ ಪಂಚಾಯತ್‌ಗಳಲ್ಲಿ ಸ್ವತಂತ್ರ ಡೈರಿಗಳನ್ನು ಸ್ಥಾಪಿಸಲಿದೆ ಎಂದು ಅವರು ಘೋಷಿಸಿದರು, ಇದು ಅಮುಲ್ ನೇತೃತ್ವದ ಬಹು-ರಾಜ್ಯ ಸಹಕಾರ ಸಂಘಗಳೊಂದಿಗೆ ಸಂಯೋಜಿತವಾಗಿರುತ್ತದೆ. ಈ ಹಿಂದೆ ಡಿಸೆಂಬರ್ 2022 ರಲ್ಲಿ ಮಂಡ್ಯದಲ್ಲಿ, ಗೃಹ ಸಚಿವರು ಅಮುಲ್ ಮತ್ತು ನಂದಿನಿ ವಿಲೀನಕ್ಕೆ ಕರೆ ನೀಡಿದ್ದರು, ಇದು ತೀವ್ರ ಟೀಕೆಗಳು ಮತ್ತು ಹಿನ್ನಡೆಗಳನ್ನು ಎದುರಿಸಿತು. ಶಾ ಅವರ ಹೇಳಿಕೆಯ ನಂತರ, ಕರ್ನಾಟಕದ ಸಹಕಾರ ಸಚಿವ ಎಸ್‌ಟಿ ಸೋಮಶೇಖರ್ ಅವರು ಏಪ್ರಿಲ್ 9 ರಂದು ನಂದಿನಿ ಮತ್ತು ಅಮುಲ್ "ಒಟ್ಟಿಗೆ ಕೆಲಸ ಮಾಡುತ್ತಾರೆ" ಎಂದು ಸುಳಿವು ನೀಡಿದರು.

ಅಮುಲ್ ಮಾರುಕಟ್ಟೆಗೆ ಪ್ರವೇಶಿಸಿದರೆ ಸ್ಥಳೀಯ ರೈತರ ಜೀವನೋಪಾಯದ ಮೇಲೆ ಪರಿಣಾಮ ಬೀರುವುದರಿಂದ ವ್ಯಾಪಕ ಪ್ರತಿಭಟನೆಗಳನ್ನು ಎದುರಿಸಬೇಕಾಗುತ್ತದೆ ಎಂದು ಕನ್ನಡ ಪರ ಸಂಘಟನೆಗಳು ತಿಳಿಸಿವೆ. ಹಾಲು ಮತ್ತು ಡೈರಿ ಉತ್ಪನ್ನಗಳ ಕೊರತೆಯಿರುವ ರಾಜ್ಯಗಳಲ್ಲಿ ತಮ್ಮ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಅಮುಲ್‌ಗೆ ಎಲ್ಲಾ ಸ್ವಾತಂತ್ರ್ಯವಿದೆ ಎಂದು ಅವರು ಹೇಳಿದರು. ಬೆಂಗಳೂರಿನ ಹೋಟೆಲ್ ಅಸೋಸಿಯೇಷನ್‌ಗಳು ಅಮುಲ್ ಉತ್ಪನ್ನಗಳನ್ನು ಬಹಿಷ್ಕರಿಸಿ ನಂದಿನಿ ಉತ್ಪನ್ನಗಳನ್ನು ಮಾತ್ರ ಬಳಸಬೇಕೆಂದು ಕರೆ ನೀಡಿವೆ. ವಿಲೀನ ಎಂದು ಕರೆಯಲ್ಪಡುವ ವಿರುದ್ಧದ ಈ ಪ್ರತಿಭಟನೆಗಳು 'ನಂದಿನಿ' ಬ್ರಾಂಡ್ ಅನ್ನು ಕೇಂದ್ರೀಯವಾಗಿ ಆಳುವ ಪ್ರಯತ್ನಗಳ ವಿರುದ್ಧ ಮತ್ತು ಸಂಭಾವ್ಯ ಖಾಸಗಿ ಆಟಗಾರರ ಹಿತಾಸಕ್ತಿಗಳನ್ನು ಆಕರ್ಷಿಸುವ ಪ್ರಯತ್ನಗಳ ವಿರುದ್ಧ ನಡೆದವು. ಇದು ರಾಜ್ಯದ ಸ್ಥಳೀಯ ಕೃಷಿ ಆರ್ಥಿಕತೆಯ ಮೇಲೆ ಶಾಶ್ವತ ಪರಿಣಾಮ ಬೀರುತ್ತದೆ.

ವಿಲೀನದ ಕೂಗು ಒಕ್ಕೂಟ ವ್ಯವಸ್ಥೆಯ ಮೇಲಿನ ನೇರ ದಾಳಿಯಾಗಿದ್ದು, ಹೈನುಗಾರರು ಮತ್ತು ಹಾಲು ಉತ್ಪಾದಕರ ಶ್ರಮದಿಂದ ನಿರ್ಮಿಸಿದ ವ್ಯವಸ್ಥೆಯನ್ನು ಬಿಜೆಪಿ ಮತ್ತು ಸಹಕಾರಿ ಸಚಿವಾಲಯವು ಬಲವಂತವಾಗಿ ಒಡೆಯುತ್ತಿದೆ. ವಿಲೀನದ ಕರೆಯು ಹಾಲಿನ ಸಹಕಾರಿಗಳೆರಡಕ್ಕೂ ಪ್ರಯೋಜನವನ್ನು ನೀಡುತ್ತದೆ ಎಂದು ಹೇಳಲಾಗುತ್ತದೆ, ಇದು ಸ್ಥಳೀಯ ಆರ್ಥಿಕತೆಯನ್ನು ಸ್ವಾಧೀನಪಡಿಸಿಕೊಳ್ಳಲು ಶಕ್ತಿ ಮತ್ತು ಬಂಡವಾಳವನ್ನು ಹೊಂದಿರುವ ಏಕೈಕ ಬಹು-ರಾಜ್ಯ ಹಾಲು ಸಹಕಾರ ಸಂಘವಾಗಿರುವುದರಿಂದ ಅದು ಅಮುಲ್‌ಗೆ ಮಾತ್ರ ಪ್ರಯೋಜನವನ್ನು ನೀಡುತ್ತದೆ. ಕೇಂದ್ರ ಸರ್ಕಾರವು ಖಾಸಗಿ ಕಂಪನಿಗಳನ್ನು ಆಕರ್ಷಿಸಲು ಡೆನ್ಮಾರ್ಕ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಇತರ ಯುರೋಪಿಯನ್ ರಾಷ್ಟ್ರಗಳಿಗೆ ಹಾಲನ್ನು ರಫ್ತು ಮಾಡಲು ಯೋಜಿಸುತ್ತಿದೆ. ಆದ್ದರಿಂದ, ಕರ್ನಾಟಕದಲ್ಲಿ ಅಮುಲ್ ಕಣಕ್ಕಿಳಿಯುವುದು ಸ್ಥಳೀಯ ಆರ್ಥಿಕತೆಯ ಕೇಂದ್ರೀಕರಣವನ್ನು ಮಾತ್ರವಲ್ಲ, ಸ್ಥಳೀಯ ಮಾರುಕಟ್ಟೆಯ ಕಾರ್ಪೊರೇಟೀಕರಣ ಮತ್ತು ಖಾಸಗೀಕರಣವನ್ನು ಸಹ ಅರ್ಥೈಸುತ್ತದೆ.

ಮೇಲಾಗಿ ಹಾಲಿ ಹಾಲಿನ ಖರೀದಿ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ಅವರಿಗೆ ಲಾಭದಾಯಕ ದರದಲ್ಲಿ ಹಾಲಿನ ದರವನ್ನು ನಿಗದಿಪಡಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದ ಹೈನುಗಾರರು ಮತ್ತು ಹಾಲು ಉತ್ಪಾದಕರ ಬೇಡಿಕೆಗಳನ್ನು ಈಡೇರಿಸುವಲ್ಲಿ ಕರ್ನಾಟಕದ ಬಿಜೆಪಿ ಸರ್ಕಾರ ವಿಫಲವಾಗಿದೆ. ಆದರೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈ ಹೈನುಗಾರರ ಸಂಕಷ್ಟವನ್ನು ನಿರ್ಲಕ್ಷಿಸಿವೆ. ವಿವಿಧ ಜಿಲ್ಲೆಗಳಲ್ಲಿ ಕೆಎಂಎಫ್‌ನ ಸ್ಥಳೀಯ ಹಾಲಿನ ಮಾರುಕಟ್ಟೆಯನ್ನು ಕಸಿದುಕೊಳ್ಳಲು ಎರಡೂ ಸರ್ಕಾರಗಳು ನರಕಯಾತನೆ ಮಾಡಿ ಹೈನುಗಾರರನ್ನು ಬಡತನ, ಅಸಮಾನತೆ ಮತ್ತು ಸಂಕಷ್ಟಕ್ಕೆ ತಳ್ಳುತ್ತಿವೆ.

**ವಿವಿಧ ಜಿಲ್ಲೆಗಳಲ್ಲಿ ಕೆಎಂಎಫ್‌ನ ಸ್ಥಳೀಯ ಹಾಲಿನ ಮಾರುಕಟ್ಟೆಯನ್ನು ಕಸಿದುಕೊಳ್ಳಲು ಎರಡೂ ಸರ್ಕಾರಗಳು ನರಕಯಾತನೆ ಮಾಡಿ ಹೈನುಗಾರರನ್ನು ಬಡತನ, ಅಸಮಾನತೆ ಮತ್ತು ಸಂಕಷ್ಟಕ್ಕೆ ತಳ್ಳುತ್ತಿವೆ**

ಕರ್ನಾಟಕದಲ್ಲಿ ಕೃಷಿ ಬಿಕ್ಕಟ್ಟು ಕಡಿಮೆ ಮಳೆ, ಬೆಳೆ ನಷ್ಟ ಮತ್ತು ರಾಜ್ಯದಲ್ಲಿ ಜಾರಿಯಾಗುತ್ತಿರುವ ರೈತ ವಿರೋಧಿ ಕಾನೂನುಗಳಿಂದ ಯಾವುದೇ ಪರಿಹಾರವನ್ನು ಕಾಣದಿರುವಾಗ, ರೈತರು ಹೈನುಗಾರಿಕೆಯ ಮೂಲಕ ತಮ್ಮನ್ನು ತಾವು ಉಳಿಸಿಕೊಳ್ಳಲು ಸಾಧ್ಯವಾಯಿತು. ಈ ವಿಲೀನದ ಕರೆಯಿಂದ ನಿರುದ್ಯೋಗ, ಬಡತನ, ನಗರ ಪ್ರದೇಶಗಳಿಗೆ ವಲಸೆ ಮತ್ತು ಗ್ರಾಮೀಣ ಭಾಗದಲ್ಲಿ ರೈತರ ಆತ್ಮಹತ್ಯೆಗಳು ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ. ಇದಲ್ಲದೆ, ಕರ್ನಾಟಕ ಗೋಹತ್ಯೆ ತಡೆ ಮತ್ತು ಜಾನುವಾರು ಸಂರಕ್ಷಣೆ ಕಾಯಿದೆ, 2020 ಮತ್ತು ಬಹು-ರಾಜ್ಯ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ, 2022 ರ ಅನುಷ್ಠಾನವು ರೈತರನ್ನು ಅಂಚಿಗೆ ತಳ್ಳಿದೆ. ಕೆಎಂಎಫ್ ಬಿಕ್ಕಟ್ಟನ್ನು ಎದುರಿಸುತ್ತಿದೆ, ಇದರ ಪರಿಣಾಮವಾಗಿ ಹಾಲು ಮತ್ತು ಮೊಸರು ಬೆಲೆಯಲ್ಲಿ ಸ್ಥಿರವಾದ ಏರಿಕೆ ಕಂಡುಬಂದಿದೆ. ಅಪೌಷ್ಟಿಕತೆಯ ಬಿಕ್ಕಟ್ಟಿಗೆ ಸಿಲುಕಿರುವ ರಾಜ್ಯದಲ್ಲಿ ಹಾಲಿನ ಉತ್ಪನ್ನಗಳ ಬೆಲೆ ಏರಿಕೆ ಸಾಮಾನ್ಯ ಜನರ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಆದ್ದರಿಂದ ರಾಜ್ಯ ಸರ್ಕಾರವು ಹಾಲಿನ ಉತ್ಪನ್ನಗಳ ಕೈಗೆಟುಕುವ ಬೆಲೆಯನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಕೆಎಂಎಫ್ ಅನ್ನು ಬಲಪಡಿಸಬೇಕು. ಅಮುಲ್ ಜೊತೆ ವಿಲೀನದ ಎಲ್ಲಾ ಚರ್ಚೆಗಳು ನಿಲ್ಲಬೇಕು. ಕರ್ನಾಟಕದ ಬಿಜೆಪಿ ಸರ್ಕಾರವು ಅಮುಲ್ ಜೊತೆ ವಿಲೀನಕ್ಕೆ ಕರೆ ನೀಡುವ ಮೂಲಕ ರಾಜ್ಯದ ಒಕ್ಕೂಟದ ವ್ಯವಸ್ಥೆಯನ್ನು ನಾಶಪಡಿಸುತ್ತಿದೆ. ಇಂತಹ ವಿಲೀನವು ಕೃಷಿ ಆರ್ಥಿಕತೆಯನ್ನು ಹಾಳುಮಾಡುತ್ತದೆ, ಅಗತ್ಯ ವಸ್ತುಗಳ ಬೆಲೆಗಳನ್ನು ಹೆಚ್ಚಿಸುತ್ತದೆ ಮತ್ತು ಕಾನೂನುಗಳಲ್ಲಿ ಏಕಪಕ್ಷೀಯ ಬದಲಾವಣೆಯನ್ನು ತರುತ್ತದೆ, ಇದು ಸಾಮಾನ್ಯ ಜನರು ಮತ್ತು ದುಡಿಯುವ ಜನಸಾಮಾನ್ಯರನ್ನು ಸಂಕಷ್ಟಕ್ಕೆ ತಳ್ಳುತ್ತದೆ. ಇಂತಹ ದಾಳಿಗಳನ್ನು ಎಲ್ಲ ರೀತಿಯಿಂದಲೂ ತಡೆದು ನಿಲ್ಲಿಸಬೇಕು.

★ **ನಾಗರಾಜ್ ಪೂಜಾರ್**

# ಭಾರತೀಯ ಮೇ ದಿನದ ಒಂದು ಶತಮಾನ ಪೂರ್ಣಗೊಂಡಿದೆ!

1886 ರಲ್ಲಿ ಚಿಕಾಗೋ ಕಾರ್ಮಿಕರ ಬಲಿದಾನದ 37 ವರ್ಷಗಳ ನಂತರ ಭಾರತದಲ್ಲಿ ನಡೆದ ಮೊದಲ ಮೇ ದಿನದ ಒಂದು ಶತಮಾನವನ್ನು 2023 ರ ಮೇ ದಿನವು ಗುರುತಿಸುತ್ತದೆ. 1923 ರ ಮೇ ದಿನದಂದು ಚೆನ್ನೈನ ಮರೀನಾ ಬೀಚ್‌ನಲ್ಲಿ ಕಾಮ್ರೇಡ್ ಸಿಂಗರವೇಲರ್ ಅವರು ಮೊದಲ ಮೇ ದಿನದ ಧ್ವಜಾರೋಹಣ ಮಾಡಿದರು. ಮೇ ದಿನವು 8 ಗಂಟೆಗಳ ಕೆಲಸದ ದಿನವನ್ನು ಪಡೆಯಲು ಕಾರ್ಮಿಕ ವರ್ಗದ ತ್ಯಾಗದ ದಿನವನ್ನು ಗುರುತಿಸುತ್ತದೆ (1886). ಈ ದಿನವು ಇಡೀ ಪ್ರಪಂಚದ ಕಾರ್ಮಿಕ ವರ್ಗದ ದಿನವಾಯಿತು ಏಕೆಂದರೆ ಇದು 8 ಗಂಟೆಗಳ ಕೆಲಸದ ದಿನಕ್ಕಾಗಿ ಕಾರ್ಮಿಕರ ಯುದ್ಧ ಘೋಷಣೆಯ ದಿನವಾಗಿತ್ತು. ಕಾರ್ಮಿಕ ವರ್ಗವು ಅಂತಿಮವಾಗಿ 8 ಗಂಟೆಗಳ ಕೆಲಸದ ದಿನಕ್ಕಾಗಿ ತನ್ನ ವಿಜಯವನ್ನು ಸಾಧಿಸಿತು. ಆದರೆ, ಈ ಮೇ ದಿನವು ಕಾರ್ಮಿಕರ ಕಷ್ಟಪಟ್ಟು ಗಳಿಸಿದ ಹಕ್ಕುಗಳ ಹಿಮ್ಮುಖವನ್ನು ಸೂಚಿಸುತ್ತದೆ. ವಾಸ್ತವವಾಗಿ, ಪ್ರಧಾನಿ ಮೋದಿಯವರು ಕಾರ್ಮಿಕ ವಿರೋಧಿ, ಗುಲಾಮಗಿರಿಯ ಸಂಹಿತೆಗಳನ್ನು 2023 ರ ಮೇ ದಿನದಂದು "ಉಡುಗೊರೆ" ಯಾಗಿ ಅದನ್ನು ಏಪ್ರಿಲ್ 1 ರಿಂದ ಜಾರಿಗೊಳಿಸಲು ಬಯಸಿದ್ದರು. ಆದರೆ, 2024 ರಲ್ಲಿ ಲೋಕಸಭೆಗೆ ಸಾರ್ವತ್ರಿಕ ಚುನಾವಣೆಗಳು ನಡೆಯುವುದರಿಂದ, ದುಡಿಯುವ ಜನರು ಮತ್ತು ಕಾರ್ಮಿಕ ಸಂಘಗಳ ಹೋರಾಟದ ಭಯದಿಂದ ಅದನ್ನು ಮುಂದೂಡಲಾಯಿತು.

ಕಾರ್ಮಿಕ ವರ್ಗದ ಮೇಲೆ ಮೋದಿ ಸರ್ಕಾರದ ದ್ರೋಹ ಮತ್ತು ದಾಳಿಯ ನಿದರ್ಶನಗಳು ಹಲವು. ಕೊರೊನಾ ಹೆಸರಿನಲ್ಲಿ, ಬಿಜೆಪಿ ಸಂಸತ್ತಲ್ಲಿ ಯಾವುದೇ ಉಪಯುಕ್ತ ಚರ್ಚೆಗಳಿಲ್ಲದೆ ಎಲ್ಲಾ ನಾಲ್ಕು ಕಾರ್ಮಿಕ ವಿರೋಧಿ ಸಂಹಿತೆಹಳನ್ನು ಅಂಗೀಕರಿಸಿತು. ಒಂದೇ ಆದೇಶದ ಮೂಲಕ ದೇಶಾದ್ಯಂತ ಅದರ ಅನುಷ್ಠಾನಕ್ಕೆ ಇದು ಸೂಕ್ತ ಕ್ಷಣಕ್ಕಾಗಿ ಕಾಯುತ್ತಿದೆ. ಈ ಮಧ್ಯೆ, ಎಲ್ಲಾ ಬಿಜೆಪಿ ಆಡಳಿತದ ರಾಜ್ಯಗಳು ಈಗಾಗಲೇ 12 ಗಂಟೆಗಳ ಕೆಲಸ ಸೇರಿದಂತೆ ಅದರ ವಿವಿಧ ಅಂಶಗಳನ್ನು ಜಾರಿಗೆ ತರಲು ಪ್ರಾರಂಭಿಸಿವೆ, ಮಹಿಳೆಯರಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅವಕಾಶ ನೀಡುತ್ತವೆ. ಈ ಸುಧಾರಣೆಗಳಿಗಾಗಿ ಕಾರ್ಮಿಕರ ಬಲವನ್ನು 300 ಕ್ಕೆ ಹೆಚ್ಚಿಸುವ ಮೂಲಕ ಯಾವುದೇ ಕಾರ್ಮಿಕ ಕಾನೂನಿನ ವ್ಯಾಪ್ತಿಯಿಂದ ಹೆಚ್ಚಿನ ಕೈಗಾರಿಕೆಗಳನ್ನು ತೆಗೆದುಹಾಕಲು ಅವರು ಪ್ರಯತ್ನಿಸುತ್ತಿದ್ದಾರೆ. ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳೂ ಇದಕ್ಕೆ ಹೊರತಾಗಿಲ್ಲ. ಕೆಲವರನ್ನು ಹೊರತುಪಡಿಸಿ ಬಹುತೇಕರು ಈಗಾಗಲೇ ಕೇಂದ್ರದ ಮೋದಿ ಸರ್ಕಾರ ನಿಯಮಗಳನ್ನು ಅಧಿಸೂಚನೆ ಹೊರಡಿಸಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಈಗಾಗಲೇ ರಾಷ್ಟ್ರೀಯ ಕೆಳಮಟ್ಟದ ವೇತನಕ್ಕೆ ಶಾಸನಬದ್ಧ ಸ್ಥಾನಮಾನವನ್ನು ನೀಡಿದೆ (ಇದು ತಿಂಗಳಿಗೆ ಸುಮಾರು 5000 ರೂ.). ಈಗ, ಸಂಹಿತೆಹಳನ್ನು ಜಾರಿಗೆ ತಂದಾಗ ಮತ್ತು ಕನಿಷ್ಠ ವೇತನವನ್ನು ಕಡ್ಡಾಯವಲ್ಲದ ಅಂಶವಾಗಿ ಮಾಡುವ ಮೂಲಕ ವೇತನವನ್ನು ಕಡಿಮೆ ಮಾಡಲು ಅವರು ಬಯಸುತ್ತಾರೆ. D.M.K ನಂತಹ ವಿರೋಧ ಪಕ್ಷದ ನೇತೃತ್ವದ ರಾಜ್ಯಗಳು ಸಹ ಕಾರ್ಪೊರೇಟ್ ಕಂಪನಿಗಳ ಬೇಡಿಕೆಗೆ ಅನುಗುಣವಾಗಿ ಕಾರ್ಖಾನೆಗಳ ಕಾಯ್ದೆಯ ಅನುಷ್ಠಾನದಿಂದ ಕೆಲವು ಕೈಗಾರಿಕೆಗಳು ಅಥವಾ ಕೈಗಾರಿಕೆಗಳ ಸಮೂಹಕ್ಕೆ ವಿನಾಯಿತಿ ನೀಡುವ ಮಸೂದೆಗಳನ್ನು ಮಂಡಿಸಿವೆ. ಗ್ರಾಮೀಣ ಕಾರ್ಮಿಕರನ್ನು ನಗರ ಪ್ರದೇಶಗಳಿಗೆ ಧಾವಿಸಲು MNREGA ಯೋಜನೆಗೆ ಬಜೆಟ್ ಹಂಚಿಕೆಯನ್ನು ತೀವ್ರವಾಗಿ ಕಡಿತಗೊಳಿಸಲಾಗುತ್ತಿದೆ. ಇದು ಕಾರ್ಪೊರೇಟ್ ವರ್ಗಕ್ಕೆ ಹೇರಳವಾಗಿ ಅಗ್ಗದ ಕಾರ್ಮಿಕರ ಲಭ್ಯತೆಗೆ ಕಾರಣವಾಗುತ್ತದೆ.



ಪ್ರಸಿದ್ಧ ಅರ್ಥಶಾಸ್ತ್ರಜ್ಞ ಶ್ರೀ ಜೀನ್ ಡ್ರೆಜ್ ಅವರು 2014-15 ರಿಂದ 2021-22 ರವರೆಗೆ ನೈಜ ವೇತನದ ಬೆಳವಣಿಗೆಯಲ್ಲಿ ತೀವ್ರ ಕುಸಿತದ ಬಗ್ಗೆ ಆಶ್ಚರ್ಯಕರ ಅವಲೋಕನಗಳನ್ನು ಮಾಡಿದ್ದಾರೆ. ಅವರು ಹೇಳುತ್ತಾರೆ, "2014-15 ಮತ್ತು 2021-22 ರ ನಡುವಿನ ನೈಜ ವೇತನದ ಬೆಳವಣಿಗೆಯ ದರವು ಎಲ್ಲಾ ಕ್ಷೇತ್ರಗಳಲ್ಲಿ ವರ್ಷಕ್ಕೆ ಒಂದು ಶೇಕಡಾಕ್ಕಿಂತ ಕಡಿಮೆಯಾಗಿದೆ: ಹೆಚ್ಚು ನಿಖರವಾಗಿ, ಕೃಷಿ ಕಾರ್ಮಿಕರಿಗೆ 0.9 ಶೇಕಡಾ, ನಿರ್ಮಾಣ ಕಾರ್ಮಿಕರು 0.2 ಶೇಕಡಾ ಮತ್ತು ಕೃಷಿಯೇತರ ಕಾರ್ಮಿಕರಿಗೆ ಕ್ರಮವಾಗಿ 0.3 ಶೇಕಡಾ" . ಹಲವಾರು ರಾಜ್ಯಗಳಲ್ಲಿ, ಮೇಲೆ ತಿಳಿಸಿದ ಅವಧಿಯಲ್ಲಿ ಹರಿಯಾಣ, ಕೇರಳ, ಪಂಜಾಬ್, ರಾಜಸ್ಥಾನ ಮತ್ತು ತಮಿಳುನಾಡು ಮುಂತಾದ ರಾಜ್ಯಗಳಲ್ಲಿ ನೈಜ ವೇತನವು ವಾಸ್ತವವಾಗಿ ಕುಸಿದಿದೆ. ಉದ್ಯೋಗದ ಜೊತೆಗೆ, ಬಹುಪಾಲು ಕಾರ್ಮಿಕರಿಗೆ ನಿಜವಾದ ವೇತನವು ಒಂದು ಪ್ರಮುಖ ಸಮಸ್ಯೆಯಾಗಿದೆ. ಕಡಿಮೆ ಉದ್ಯೋಗ, ಕಡಿಮೆ ವೇತನ, ವೇತನ ಕಡಿತ, ಹಿಂಬಡ್ತಿ, ಲಾಕ್‌ಔಟ್‌ಗಳು, ಲೇ-ಆಫ್‌ಗಳು ಮತ್ತು ಮುಚ್ಚುವಿಕೆಗಳು ದಿನದ ಆದೇಶಗಳಾಗಿವೆ. ಕೆಲವು ಸಂದರ್ಭಗಳಲ್ಲಿ, ಯಾವುದೇ ಪ್ರತಿಭಟನೆಯಿಂದ ದೂರವಿರಲು ಕಾರ್ಮಿಕರನ್ನು ಒತ್ತಾಯಿಸಲು ಅವುಗಳನ್ನು ತಂತ್ರಗಳಾಗಿ ಬಳಸಲಾಗುತ್ತದೆ. ಕ್ಷಿಪ್ರ ಆರ್ಥಿಕ ಬೆಳವಣಿಗೆಯ ಹೊರತಾಗಿಯೂ, ವೇತನದ ಬೆಳವಣಿಗೆಯ ನಿಧಾನಗತಿಯು ಬಹಳ ಕಳವಳಕಾರಿಯಾಗಿದೆ. ಅಸಮಾನತೆ ಮತ್ತು ಬಡತನವು ಅಸಾಧಾರಣವಾಗಿ ಬೆಳೆಯುತ್ತಿದೆ ಎಂದರ್ಥ.

ಲಿಂಗ ಆಧಾರಿತ ವೇತನದ ಅಂತರವು ಅಪಾಯಕಾರಿ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಒಂದು ರೀತಿಯ ಕೆಲಸಕ್ಕೆ ಮಹಿಳೆಯರಿಗೆ ಕಡಿಮೆ ವೇತನ ನೀಡಲಾಗುತ್ತಿದೆ. ಮಹಿಳೆಯರಿಗೆ ಸರಿಯಾದ ಸುರಕ್ಷತಾ ಕಾರ್ಯವಿಧಾನಗಳನ್ನು ಹಾಕದೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಒತ್ತಾಯಿಸಲಾಗುತ್ತದೆ, ಹೀಗಾಗಿ ಅವರು ಲೈಂಗಿಕ ಕಿರುಕುಳ ಮತ್ತು ಹಿಂಸೆಗೆ ಗುರಿಯಾಗುತ್ತಾರೆ. RSS ಪ್ರಸ್ತಾಪಿಸಿದ "ಸಂವಿಧಾನ" ಮನು ಸ್ಮೃತಿಯು ಮಹಿಳೆಯರನ್ನು ಮನೆಯ ನಾಲ್ಕು ಗೋಡೆಗಳಿಗೆ ಸೀಮಿತಗೊಳಿಸಲು ಹೇಳುತ್ತಿದೆ. ಇವೆಲ್ಲವೂ ಕನಿಷ್ಠ ಮಹಿಳೆಯರನ್ನು ಹೊಂದಿರುವ ಉದ್ಯೋಗಿಗಳಿಗೆ ಕಾರಣವಾಗುತ್ತದೆ. ಹಳೆಯ ಪಿಂಚಣಿ ಯೋಜನೆಯ ಮರುಸ್ಥಾಪನೆ, ಮೂಲಭೂತವಾಗಿ ಮೂರನೇ ಪ್ರಯೋಜನವಾಗಿದೆ. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕರ ಪ್ರಮುಖ ಬೇಡಿಕೆಯಾಗಿದೆ. ಹೊಸ ಪಿಂಚಣಿ ಯೋಜನೆಯಲ್ಲಿ ಪಿಂಚಣಿ ಮಟ್ಟವನ್ನು ಹೆಚ್ಚಿಸುವ ಮೂಲಕ ಕಾರ್ಮಿಕರ ಹೆಚ್ಚುತ್ತಿರುವ ಹೋರಾಟಗಳನ್ನು ನಾಶಮಾಡಲು ಮೋದಿ ಸರ್ಕಾರ ಪ್ರಯತ್ನಿಸುತ್ತಿದೆ. NPS ಮೂಲತಃ ಕೊಡುಗೆ ಯೋಜನೆಯಾಗಿದೆ.

ಪಿಂಚಣಿದಾರರು ಮತ್ತು ಟ್ರೇಡ್ ಯೂನಿಯನ್‌ಗಳ ನಿರಂತರ ಪ್ರಚಾರ ಮತ್ತು ಹೋರಾಟದ ಹೊರತಾಗಿಯೂ, ಇಪಿಎಸ್ ಅಡಿಯಲ್ಲಿ ಪಿಂಚಣಿಯು ಹೆಚ್ಚಿನ ಸಂದರ್ಭಗಳಲ್ಲಿ ರೂ 1000 ದಾಟಿಲ್ಲ.

ಮೋದಿ ಸರ್ಕಾರವು ಲಾಭ ಗಳಿಕೆಯ ಹೆಸರಿನಲ್ಲಿ ಸರ್ಕಾರದ ಮತ್ತು ಸಾರ್ವಜನಿಕ ವಲಯದ ಎಲ್ಲಾ ಆಸ್ತಿಗಳನ್ನು ತನ್ನ ಕಾರ್ಪೊರೇಟ್ ಸ್ನೇಹಿತರಿಗೆ ಆಕ್ರಮಣಕಾರಿಯಾಗಿ ಮಾರಾಟ ಮಾಡುತ್ತಿದೆ. ರಸ್ತೆಗಳು, ಬಂದರುಗಳು ಮತ್ತು ವಿಮಾನ ನಿಲ್ದಾಣಗಳಂತಹ ಮೂಲಸೌಕರ್ಯಗಳನ್ನು ಸಹ ಹಣಗಳಿಕೆಯ ಹೆಸರಿನಲ್ಲಿ ಉಳಿಸಲಾಗಿಲ್ಲ. ರೈಲ್ವೇ ಶಾಲೆಗಳು, ಆಸ್ಪತ್ರೆಗಳಿಂದ ರೈಲುಗಳು, ಟ್ರ್ಯಾಕ್‌ಗಳು ಮತ್ತು ನಿಲ್ದಾಣಗಳವರೆಗೆ ರೈಲ್ವೆಯ ಬೃಹತ್ ಜಾಲವನ್ನು ವಿಂಗಡಿಸಲಾಗಿದೆ ಮತ್ತು ಕಾರ್ಪೊರೇಟ್‌ಗಳಿಗೆ ಮಾರಾಟ ಮಾಡಲಾಗುತ್ತಿದೆ. ಮೋದಿ ಸರ್ಕಾರ ಮಾರಾಟದ ಸುಳಿಯಲ್ಲಿದೆ.

ಕೈಗಾರಿಕೋದ್ಯಮಿಗಳು ಮತ್ತು ಸರ್ಕಾರದ ಕಡ್ಡಾಯ ಕರ್ತವ್ಯವಾಗಿರುವ ವಿಮಾ ಯೋಜನೆಯ ಮೂಲಕ ಸಾಮಾಜಿಕ ಭದ್ರತೆಯನ್ನು ಮಾಡುವಾಗ ಮೋದಿ ಸರ್ಕಾರವು ತನ್ನ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿಲ್ಲ. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಸವಲತ್ತುಗಳನ್ನು ನೀಡುವ ಹೆಸರಿನಲ್ಲಿ ಮೋದಿ ಸರಕಾರ ಕೇವಲ ವಿಮಾ ಏಜೆಂಟ್‌ನಂತೆ ಕಾರ್ಯನಿರ್ವಹಿಸುತ್ತಿದೆ, ಆದರೆ 'ವ್ಯವಹಾರವು ಸರ್ಕಾರದ ವ್ಯವಹಾರವಲ್ಲ' ಎಂದು ಗಟ್ಟಿಯಾಗಿ ಕೂಗುತ್ತಿದೆ. ಕಟ್ಟಡ ನಿರ್ಮಾಣ ಕಾರ್ಮಿಕ ಮಂಡಳಿ ಸೇರಿದಂತೆ ವಿವಿಧ ಕಾಯ್ದೆಗಳ ಅಡಿಯಲ್ಲಿರುವ ಕಲ್ಯಾಣ ಮಂಡಳಿಗಳನ್ನು ವ್ಯವಸ್ಥಿತವಾಗಿ ವಿಸರ್ಜಿಸಲಾಗುತ್ತಿದೆ. ಸಾಮಾಜಿಕ ಭದ್ರತಾ ಯೋಜನೆಗಳನ್ನು ಮರೀಚಿಕೆ, ಇ-ಶ್ರಮದಿಂದ ಬದಲಾಯಿಸಲಾಗುತ್ತಿದೆ. ಇ-ಶ್ರಮ್ ಎರಡು ಲಕ್ಷಗಳ ಮರಣದ ಲಾಭ ಮತ್ತು ಒಂದು ಲಕ್ಷದ ಶಾಶ್ವತ ಅಂಗವೈಕಲ್ಯ ಪ್ರಯೋಜನಕ್ಕಿಂತ ಹೆಚ್ಚೇನೂ ನೀಡುವುದಿಲ್ಲ. ಇ-ಶ್ರಮವನ್ನು ಕಲ್ಯಾಣ ಮಂಡಳಿಗಳು ಇಲ್ಲಿಯವರೆಗೆ ನೀಡುತ್ತಿದ್ದ ಯಾವುದೇ ಅಲ್ಪ ಪ್ರಯೋಜನಗಳನ್ನು ತೀವ್ರವಾಗಿ ಕಡಿತಗೊಳಿಸಲು ಮಾತ್ರ ಬಳಸಲಾಗುತ್ತಿದೆ.

2047 ರ ಮೋದಿಯವರ ದೃಷ್ಟಿ ಹತಾಶೆಯಲ್ಲಿರುವ ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕೆಲಸಗಾರರಂತೆಯೇ ಉದ್ಯೋಗಿಗಳನ್ನು ರಚಿಸುವುದು. ಇದು ಉದ್ಯೋಗದಾತರಿಂದ ಉದ್ಯೋಗ ಭದ್ರತೆ, ವೇತನ ಭದ್ರತೆ ಮತ್ತು ಸಾಮಾಜಿಕ ಭದ್ರತೆಯಂತಹ ಯಾವುದೇ ಕಾನೂನು ರಕ್ಷಣೆಯನ್ನು ಪಡೆಯಲು ಅರ್ಹರಲ್ಲದ ಕಾರ್ಮಿಕರ ವರ್ಗವಾಗಿದೆ. ಅತ್ಯುತ್ತಮವಾಗಿ, ಅವರು ಸಾಮಾಜಿಕ ಭದ್ರತಾ ಕೋಡ್ ಪ್ರಕಾರ ವಿಮಾ ಯೋಜನೆಯನ್ನು ಖರೀದಿಸಬಹುದು. ಇದು ಮೋದಿ ಕನಸು ಕಾಣುತ್ತಿರುವ ಕಾರ್ಮಿಕ ವರ್ಗ. ಭಾರತವು G20 ನ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ನಂತರ, ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕೆಲಸಗಾರರಂತಹ ಕಾರ್ಯಪಡೆಯನ್ನು ಅಭಿವೃದ್ಧಿಪಡಿಸಲು ಮತ್ತು ಅವರ ಸಾಮಾಜಿಕ ಭದ್ರತಾ ಯೋಜನೆಗಳಿಗೆ ನಿಧಿಯ ಸುಸ್ಥಿರತೆಯ ಮೇಲೆ ಕೆಲಸ ಮಾಡಲು ಕಾರ್ಯನಿರತ ಗುಂಪನ್ನು ರಚಿಸಲಾಗಿದೆ. ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಕಾರ್ಪೊರೇಟ್ ಕಂಪನಿಗಳ ತರಬೇತಿ ಕೇಂದ್ರಗಳನ್ನಾಗಿ ಮಾಡಲಾಗುತ್ತಿದೆ. ಧನಸಹಾಯ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಕಾರ್ಪೊರೇಟ್ ಅಗತ್ಯಗಳೊಂದಿಗೆ ಜೋಡಿಸಲಾಗುತ್ತಿದೆ. ಐಟಿಐಗಳ ಶಿಕ್ಷಕರಿಗೆ ಅದೇ ಕಾರ್ಪೊರೇಟ್ ಕಂಪನಿಗಳಿಂದ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಮೋದಿ, ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಕಾರ್ಪೊರೇಟ್ ನಿಷ್ಠೆಯೇ ಅಂಥದ್ದು.

ಕಾರ್ಮಿಕರನ್ನು ಹತಾಶರನ್ನಾಗಿ ಮಾಡುವ ಮೂಲಕ, ಮೋದಿ ಸರ್ಕಾರವು ತಮ್ಮ ದ್ವೇಷದ ಸೇನೆಗೆ ಕಾಲಾಳುಗಳನ್ನು ನೇಮಿಸಿಕೊಳ್ಳುವ ವಾತಾವರಣ ಮತ್ತು ಕಾರ್ಯಪಡೆಯನ್ನು ಹುಡುಕುತ್ತಿದೆ. "ಅಗ್ನಿಪಥ್" ನಿರ್ದಿಷ್ಟವಾಗಿ ಅಂತಹ ವಿನಾಶಕಾರಿ ಯೋಜನೆಯನ್ನು ಪೂರೈಸಲು ವಿನ್ಯಾಸಗೊಳಿಸಲಾಗಿದೆ.

ಹೆಚ್ಚು ಖಾಸಗೀಕರಣ ಮತ್ತು ಕಾರ್ಪೊರೇಟ್‌ಗಳಿಗೆ ಲಕ್ಷಗಟ್ಟಲೆ ರಿಯಾಯಿತಿಗಳು ಮತ್ತು ತೆರಿಗೆ ವಿನಾಯಿತಿಗಳ ಮೂಲಕ ಹೆಚ್ಚು ಉದ್ಯೋಗಗಳನ್ನು ಉತ್ಪಾದಿಸುವ ಮೋದಿ ಸರ್ಕಾರದ ಮಾದರಿಯ ಅಭಿವೃದ್ಧಿ ನಿರೂಪಣೆಯು ಕೇವಲ ಒಂದು ದೊಡ್ಡ ನೆಪ ಮತ್ತು ವಿನಾಶ ಎಂದು ಸಾಬೀತಾಗಿದೆ. ದೇಶವು ನಿರುದ್ಯೋಗ ಮತ್ತು ಉದ್ಯೋಗ ನಷ್ಟದ ಅತ್ಯಧಿಕ ಬೆಳವಣಿಗೆಯ ದರವನ್ನು ಎದುರಿಸುತ್ತಿದೆ. ಮೋದಿಯವರ ಸ್ನೇಹಿತರಾದ ಅದಾನಿ ಮತ್ತು ಅಂಬಾನಿ ನೇತೃತ್ವದ ಕೆಲವು ಆಯ್ದ ಕಾರ್ಪೊರೇಟ್ ಸಂಸ್ಥೆಗಳು ಅಭೂತಪೂರ್ವ ಸಂಪತ್ತನ್ನು ಸಂಗ್ರಹಿಸಿವೆ ಮತ್ತು ವಿಶ್ವದ ಶ್ರೀಮಂತ ವ್ಯಾಪಾರ ಸಂಸ್ಥೆಗಳ ಸ್ಥಾನಮಾನವನ್ನು ಪಡೆದಿವೆ. ಹಿಂಡೆನ್‌ಬರ್ಗ್ ವರದಿಯು ಕಾರ್ಪೊರೇಟ್ ಗುಂಪುಗಳು, ವಿಶೇಷವಾಗಿ ಅದಾನಿ ಸಮೂಹವು ಸಂಪತ್ತನ್ನು ಸಂಗ್ರಹಿಸುತ್ತಿರುವ ರೀತಿಯ ಕಥೆಗೆ ಕಣ್ಣು ತೆರೆಯುತ್ತದೆ. ಎಸ್‌ಬಿಐ (SBI) ಮತ್ತು ಎಲ್‌ಐಸಿ (LIC) ಯಂತಹ ಹಣಕಾಸು ಸಂಸ್ಥೆಗಳಿಂದ ತುಂಬಿದ ಅಪಾರ ಜನರ ಹಣವನ್ನು ಬಳಸಿಕೊಂಡು ಅದಾನಿ ದಿನದಿಂದ ದಿನಕ್ಕೆ ಶ್ರೀಮಂತರಾಗುತ್ತಿದ್ದಾರೆ.

ದೇಶದಲ್ಲಿ ಕಾರ್ಮಿಕ ವರ್ಗ ಮೋದಿ ಸರ್ಕಾರದ ಬಹುಮುಖ ದಾಳಿಗೆ ಒಳಗಾಗಿದೆ. ದೇಶದ ಮೇಲಿನ ಕಾರ್ಪೊರೇಟ್ ಹಿಡಿತವನ್ನು ಬಿಗಿಗೊಳಿಸಲಾಗುತ್ತಿದೆ. ಪ್ರಜಾಪ್ರಭುತ್ವ, ಅದರ ಮೌಲ್ಯಗಳು ಮತ್ತು ಅದರ ವಿವಿಧ ಸಂಸ್ಥೆಗಳನ್ನು ಬುಡಮೇಲು ಮಾಡಲಾಗುತ್ತಿದೆ. ನ್ಯಾಯಾಂಗವನ್ನೂ ಸರ್ಕಾರದ ಜಾಲಕ್ಕೆ ತರಲಾಗುತ್ತಿದೆ. ಬಿಜೆಪಿ-ಆರ್‌ಎಸ್‌ಎಸ್ ಸಂಯೋಜನೆಯು ತನ್ನ ದ್ವೇಷದ ರಾಜಕಾರಣವನ್ನು ಪೋಷಿಸಲು ಕೋಮು ಧ್ರುವೀಕರಣವನ್ನು ಚುರುಕುಗೊಳಿಸಲು ಮುಂದಾಗಿದೆ. ಆರೆಸ್ಸೆಸ್-ಬಿಜೆಪಿ ಸಂಯೋಜನೆಯು ಮುಸ್ಲಿಮರನ್ನು ವಿಶೇಷವಾಗಿ ಗುರಿಯಾಗಿಸಿಕೊಂಡು ಕೋಮು ದ್ವೇಷ ಮತ್ತು ವಿಷವನ್ನು ಹುಟ್ಟುಹಾಕಲು ತಮ್ಮ ಇತ್ಯರ್ಥಕ್ಕೆ ಎಲ್ಲವನ್ನೂ ಮಾಡುತ್ತಿದೆ. ಕಾರ್ಪೊರೇಟ್, ಕೋಮುವಾದಿ ಫ್ಯಾಸಿಸ್ಟ್‌ಗಳ ಪರವಾಗಿ ಮತಗಳನ್ನು ಕೊಯ್ಲು ಮಾಡಲು ಧಾರ್ಮಿಕ ಹಬ್ಬಗಳನ್ನು ಹಿಂದೂ ಬಹುಸಂಖ್ಯಾತ ಕೋಮುಗಲಭೆಯ ರಂಗಭೂಮಿಯಾಗಿ ಬಳಸಲಾಗುತ್ತಿದೆ. ವಲಸೆ ಕಾರ್ಮಿಕರ ಅವಸ್ಥೆಯನ್ನು ಸಹ ಕೋಮುವಾದ, ರಾಷ್ಟ್ರೀಯವಾದಿ ದ್ವೇಷ ಮತ್ತು ಹಿಂಸಾಚಾರವನ್ನು ಪ್ರಚೋದಿಸಲು ಬಳಸಲಾಗುತ್ತಿದೆ. ವಲಸೆ ಕಾರ್ಮಿಕರು ಆಹಾರ, ನೀರು ಮತ್ತು ಸಾರಿಗೆ ಇಲ್ಲದೆ ಸಾವಿರಾರು ಕಿಲೋಮೀಟರ್‌ಗಳಷ್ಟು ನಡೆಯಬೇಕಾಯಿತು. ಲಾಕ್‌ಡೌನ್ ಹೆಸರಿನಲ್ಲಿ ಅದೇ ಸರ್ಕಾರದಿಂದ ಅವರು ಊಹಿಸಲಾಗದ ದುಃಖ ಮತ್ತು ಕ್ರೌರ್ಯಕ್ಕೆ ಒಳಗಾಗಿದ್ದರು. ವಲಸೆ ಕಾರ್ಮಿಕರ ಸಂಕಷ್ಟದ ಬಗ್ಗೆ ಮೋದಿ ಸರಕಾರ ಮೊಸಳೆ ಕಣ್ಣೀರು ಸುರಿಸುತ್ತಿದೆ.

ಕಾರ್ಮಿಕ ವರ್ಗವು ತನ್ನ ಹೋರಾಟಗಳನ್ನು ಬಹುಮುಖವಾಗಿ ತೀವ್ರಗೊಳಿಸಬೇಕು ಮತ್ತು ಅದೇ ಸಮಯದಲ್ಲಿ ಶ್ರಮಜೀವಿಗಳ ಇತರ ವಿಭಾಗಗಳೊಂದಿಗೆ ಬಲವಾದ ಮತ್ತು ವಿಶಾಲವಾದ ಏಕತೆಯನ್ನು ನಿರ್ಮಿಸಬೇಕು. ಮೂರು ರೈತ-ವಿರೋಧಿ ಕರಾಳ ಕಾನೂನನ್ನು ಹಿಂಪಡೆಯಲು ನಿರಂಕುಶಾಧಿಕಾರದ ಮೋದಿ ಆಡಳಿತವನ್ನು ಒತ್ತಾಯಿಸಿದ ಐತಿಹಾಸಿಕ ರೈತರ ಚಳವಳಿಯ ಸಂದರ್ಭದಲ್ಲಿ ಸಾಕ್ಷಿಯಾಗಿರುವಂತೆ ಕಾರ್ಮಿಕ ವರ್ಗದ ಐಕ್ಯ ಹೋರಾಟಗಳು ಮಾತ್ರ ಈ ದಾಳಿಗಳನ್ನು ಹಿಮ್ಮೆಟ್ಟಿಸಬಹುದು. ಖಾಸಗೀಕರಣ, ಗುತ್ತಿಗೆ ವ್ಯವಸ್ಥೆ, ನಿರುದ್ಯೋಗ, ಕಾರ್ಮಿಕ ಸಂಹಿತೆಗಳು ಮತ್ತು ಕಠಿಣ ಕಾನೂನುಗಳ ವಿರುದ್ಧ ನಡೆಯುತ್ತಿರುವ ಚಳವಳಿಯನ್ನು ಮತ್ತಷ್ಟು ತೀವ್ರಗೊಳಿಸಲು ನಾವು ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತೇವೆ. ಕಾರ್ಮಿಕ ವಿರೋಧಿ, ಜನವಿರೋಧಿ, ದೇಶವಿರೋಧಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವ ಕಾರ್ಯವನ್ನು ಸಾಧಿಸಲು ಈ ಮೇ ದಿನದಂದು ಸಂಕಲ್ಪ ಮಾಡೋಣ! ★

# ಮೋದಿ ಆಡಳಿತದಿಂದ ಜನಿತವಾಗಿರುವ ಕಡಿವಾಣವಿಲ್ಲದ ತುರ್ತು ಪರಿಸ್ಥಿತಿಯನ್ನು ಪ್ರತಿರೋಧಿಸಿ

ತ್ರಿಪುರಾದಲ್ಲಿ ಸ್ವಲ್ಪಮಟ್ಟಿಗೆ ಅಧಿಕಾರವನ್ನು ಉಳಿಸಿಕೊಂಡ ಮೋದಿ ಸರ್ಕಾರವು ತನ್ನ ಫ್ಯಾಸಿಸ್ಟ್ ಆಡಳಿತದ ವಿಶಿಷ್ಟ ಲಕ್ಷಣವಾಗಿರುವ ಬೀದಿಬದಿ, ಪ್ರಚಾರ ಮತ್ತು ರಾಜ್ಯ ಅಧಿಕಾರದ ಮಾರಕ ಸಂಯೋಜನೆಯನ್ನು ಬಳಸಿಕೊಂಡು ಪ್ರತಿಪಕ್ಷಗಳ ವಿರುದ್ಧ ಸಂಪೂರ್ಣ ಆಕ್ರಮಣವನ್ನು ಪ್ರಾರಂಭಿಸಿದೆ. ತ್ರಿಪುರಾದಲ್ಲಿ ಹೆಚ್ಚು ಕಡಿಮೆ ಶಾಂತಿಯುತ ಚುನಾವಣೆಯ ನಂತರ, ಸಂಘ ಬ್ರಿಗೇಡ್ ರಾಜ್ಯದಲ್ಲಿ ಚುನಾವಣೋತ್ತರ ಭಯೋತ್ಪಾದನೆ, ಸೇಡು ಮತ್ತು ಹಿಂಸಾಚಾರದ ನವೀಕೃತ ಅಲೆಯನ್ನು ಹೊರಹಾಕುತ್ತಿದೆ, ಭಯೋತ್ಪಾದನೆ ಪೀಡಿತ ರಾಜ್ಯಕ್ಕೆ ಭೇಟಿ ನೀಡಿದ ವಿರೋಧ ಪಕ್ಷಗಳು, ಅವರ ಮತದಾರರು ಮತ್ತು ಎಡ ಮತ್ತು ಕಾಂಗ್ರೆಸ್ ಸಂಸದರು ಮತ್ತು ಶಾಸಕರ ಸತ್ಯಶೋಧನಾ ತಂಡವನ್ನು ಗುರಿಯಾಗಿರಿಸಿ ಹಿಂಸೆಯನ್ನು ನೀಡಲಾಗುತ್ತಿದೆ. ಅದೇ ಸಮಯದಲ್ಲಿ, ರಾಜ್ಯ ವಿಧಾನಸಭೆಯಲ್ಲಿ ಪ್ರಮುಖ ಬಿಜೆಪಿಯೇತರ ಪಕ್ಷವಾಗಿ ಚುನಾವಣೆಯಲ್ಲಿ ಹೊರಹೊಮ್ಮಿದ ಪ್ರಾದೇಶಿಕ ಪಕ್ಷವಾದ ಟಿಪ್ರಾ ಮೋಥವನ್ನು ಬೆಂಬಲಿಸುತ್ತಾ, ಪಕ್ಷದ ಬೇಡಿಕೆಗಳಿಗೆ ಸ್ಪಂದಿಸುತ್ತಾ ಮೋದಿ ಸರ್ಕಾರವು 'ಸಾಂವಿಧಾನಿಕ ಪರಿಹಾರ'ವನ್ನು ಕಂಡುಹಿಡಿಯಲು ಒಬ್ಬ ಸಂವಾದಕನನ್ನು, ನೇಮಿಸಲು ಸ್ಪಷ್ಟವಾಗಿ ಒಪ್ಪಿಕೊಂಡಿದೆ.

ಮೇಘಾಲಯದಲ್ಲಿ,ಈಗ ಬಿಜೆಪಿಯು ತನ್ನ ಪಾಲುದಾರನಾಗಿರುವ ನ್ಯಾಷನಲ್ ಪೀಪಲ್ಸ್ ಪಾರ್ಟಿ ನೇತೃತ್ವದ ಸರ್ಕಾರವನ್ನು ಅತ್ಯಂತ ಭ್ರಷ್ಟ ಸರ್ಕಾರ ಎಂದು ಖಂಡಿಸಿದ ನಂತರ ಬಿಜೆಪಿಯು ಪ್ರತ್ಯೇಕವಾಗಿ ಚುನಾವಣೆಗಳನ್ನು ಎದುರಿಸಿತು. ಚುನಾವಣೆಗಳು ಮುಗಿದು, ಕೇವಲ ಎರಡು ಸ್ಥಾನಗಳನ್ನು ಗೆಲ್ಲಬಲ್ಲ ಬಿಜೆಪಿ ಮತ್ತೊಮ್ಮೆ ಅದೇ ಎನ್‌ಪಿಪಿಗೆ ಸೇರಿಕೊಂಡು ಸರ್ಕಾರದ ಭಾಗವಾಗಿದೆ. ಹಿಂದೆ ತರುಣ್ ಗೊಗೊಯ್ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಹಿಮಂತ ಬಿಸ್ವಾ ಶರ್ಮಾರವರು ಎರಡನೇ ಸ್ಥಾನದಲ್ಲಿದ್ದಾಗ ಬಿಜೆಪಿಯ ಭ್ರಷ್ಟಾಚಾರ ಆರೋಪಗಳನ್ನು ಹೊರಿಸಿರುವುದನ್ನು ನಾವು ಮರೆತಿಲ್ಲ. ಹಿಮಂತ ಬಿಸ್ವಾ ಶರ್ಮಾರವರು ಬಿಜೆಪಿಗೆ ಸೇರ್ಪಡೆಯಾದ ನಂತರ, ಅವರ ವಿರುದ್ಧದ ಭ್ರಷ್ಟಾಚಾರದ ಆರೋಪದ ಬಗ್ಗೆ ಮಾಧ್ಯಮಗಳ ಪ್ರಶ್ನೆಗೆ ಅಮಿತ್ ಶಾ ಅವರು ಉತ್ತರಿಸದೆ ನಿರಾಕರಿಸಿದರು ಮತ್ತು ಅಂತಹ ಪ್ರಶ್ನೆಗಳನ್ನು ಕೇಳಬಾರದು ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು!.

ಇಂದು ಹಿಮಂತ ಬಿಸ್ವಾ ಶರ್ಮಾ ಅವರು ಅಸ್ಸಾಂನ ಪ್ರಸ್ತುತ ಬಿಜೆಪಿ ಸಿಎಂ ಮತ್ತು ಬಿಜೆಪಿ ನೇತೃತ್ವದ ಈಶಾನ್ಯ ಪ್ರಜಾಪ್ರಭುತ್ವ ಒಕ್ಕೂಟದ ಮುಖ್ಯಸ್ಥರಾಗಿ ಈಶಾನ್ಯದಲ್ಲಿ ಸಂಘ ಬ್ರಿಗೇಡ್‌ನ ಫ್ಯಾಸಿಸ್ಟ್ ಆಕ್ರಮಣದ ಕಾರ್ಯಗಳನ್ನು ನಡೆಸುವಲ್ಲಿ ಮುಂಚೂಣಿಯಲ್ಲಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಭ್ರಷ್ಟಾಚಾರ ಮತ್ತು ಇತರ ಅಪರಾಧಗಳ ಆರೋಪ ಹೊತ್ತಿರುವ ಪ್ರತಿಯೊಬ್ಬ ನಾಯಕನು ಬಿಜೆಪಿಗೆ ಸೇರುವುದು ಅತ್ಯಂತ ಲಾಭದಾಯಕ ವಿಮಾ ಯೋಜನೆಯಾಗಿದೆ. ವಾಸ್ತವವಾಗಿ, ಹಲವಾರು ಬಿಜೆಪಿ ನಾಯಕರು ಯಾವುದೇ ಕೇಂದ್ರೀಯ ಸಂಸ್ಥೆಯಿಂದ ತನಿಖೆಯಿಂದ ತಮ್ಮನ್ನು ಪಾರಾಗುವ ಬಗ್ಗೆ ಬಹಿರಂಗವಾಗಿ ಹೆಮ್ಮೆಪಡುತ್ತಾರೆ. ಕರ್ನಾಟಕದಲ್ಲಿ ಬಿಜೆಪಿಯ ಪ್ರಬಲ ಶಾಸಕರೊಬ್ಬರ ಪುತ್ರನ ಕಚೇರಿಯ ಮೇಲೆ ದಾಳಿ ನಡೆಸಿ 6 ಕೋಟಿ ರೂಪಾಯಿ ನಗದು ಪಡೆದಿರುವುದನ್ನು ಖಚಿತಪಡಿಸಿಕೊಳ್ಳಲು ಲೋಕಾಯುಕ್ತ ನೌಕರರಿಂದ ಒತ್ತಡ ಹೇರಬೇಕಾಯಿತು. ಮಧ್ಯಪ್ರದೇಶದಲ್ಲಿ, ತನಿಖೆಗಳು ಸಾಕಷ್ಟು ಪುರಾವೆಗಳನ್ನು ನೀಡಿದರೂ ಆರೋಪಗಳನ್ನು ರೂಪಿಸಲು ಸರ್ಕಾರವು ಅನುಮತಿ ನೀಡದ ಕಾರಣ ಲೋಕಾಯುಕ್ತವನ್ನು ನಿಷ್ಕ್ರಿಯಗೊಳಿಸಲಾಗುತ್ತಿದೆ. ಬಿಜೆಪಿಯು ಭ್ರಷ್ಟರಿಗೆ ಖಚಿತವಾದ ಆಶ್ರಯತಾಣವಾಗಿ ಮಾರ್ಪಟ್ಟಿರುವಾಗ, ಮೋದಿ ಸರ್ಕಾರವು ತನ್ನ ರಾಜಕೀಯ ಕಾರ್ಯಸೂಚಿಯನ್ನು ಪೂರೈಸಲು ಆಡಳಿತದಿಂದ ಸಂಪೂರ್ಣವಾಗಿ ಅಸ್ತ್ರಗೊಂಡಿರುವ ED ಮತ್ತು CBI ನಂತಹ ಕೇಂದ್ರೀಯ ಸಂಸ್ಥೆಗಳೊಂದಿಗೆ ಪ್ರತಿಪಕ್ಷಗಳನ್ನು ಬೇಟೆಯಾಡುತ್ತಲೇ ಇದೆ. ಬಹುತೇಕ ಎಲ್ಲಾ ವಿರೋಧ ಪಕ್ಷಗಳು, ವಿಶೇಷವಾಗಿ ಅಧಿಕಾರದಲ್ಲಿರುವವರು, ಸೇಡು ಮತ್ತು ಶೋಷಣೆಯ ಈ ಲಜ್ಜೆಗೆಟ್ಟ ಮೋದಿ ಆಡಳಿತದ ಅಭಿಯಾನದ ಅಂತ್ಯದಲ್ಲಿದ್ದಾರೆ.



2024 ರ ಚುನಾವಣೆಗೆ ಮುಂಚಿತವಾಗಿ, ಮೋದಿ ಆಡಳಿತವು ವಿಶೇಷವಾಗಿ ಬಿಹಾರದಲ್ಲಿ ರಾಜಕೀಯ ಮರುಜೋಡಣೆಯ ಬಗ್ಗೆ ಹೆಚ್ಚು ಚಿಂತಿತವಾಗಿದೆ. 2015 ರಲ್ಲಿ ನಿತೀಶ್ ಕುಮಾರ್ ಅವರ ಜೆಡಿಯು ಬೆಂಬಲವಿಲ್ಲದೆ ಬಿಜೆಪಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಬೇಕಾಗಿ ಬಂದಾಗ ಅದರ ಸಂಖ್ಯೆ 53 ಸ್ಥಾನಗಳಿಗೆ ಕುಸಿದಿತ್ತು. ನಂತರ ಆಡಳಿತವು ಆರ್‌ಜೆಡಿ ನಾಯಕತ್ವದ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಎತ್ತುವ ಮೂಲಕ ಜೆಡಿಯು-ಆರ್‌ಜೆಡಿ ಮೈತ್ರಿಯನ್ನು ಮುರಿಯಲು ಯಶಸ್ವಿಯಾಯಿತು ಮತ್ತು ಬಿಹಾರದಲ್ಲಿ 2019 ರ ಲೋಕಸಭೆ ಚುನಾವಣೆಯಲ್ಲಿ ಪುನಃ ಬಿಜೆಪಿ-ಜೆಡಿಯು-ಎಲ್‌ಜೆಪಿ ಒಗ್ಗೂಡಿಸಲಾಯಿತು. 2022 ರಲ್ಲಿ ಜೆಡಿಯು ಮತ್ತೆ ಆರ್‌ಜೆಡಿ-ಎಡ-ಕಾಂಗ್ರೆಸ್ ಮಹಾಮೈತ್ರಿಕೂಟಕ್ಕೆ ಸೇರುವುದರೊಂದಿಗೆ, ಬಿಹಾರ ಮೈತ್ರಿಯನ್ನು ಮುರಿಯಲು ಬಿಜೆಪಿ ಹೆಚ್ಚಿನ ಸಮಯವನ್ನು ವ್ಯರ್ಥಮಾಡಿತು. ಈ ತರಹದ ತ್ರಿಕೋನ ತಂತ್ರವು ಸರ್ಕಾರವನ್ನು ಅಸ್ಥಿರಗೊಳಿಸುವುದು, ಮೈತ್ರಿಯನ್ನು ಅಪಖ್ಯಾತಿ ಮಾಡುವುದು ಮತ್ತು ಪಕ್ಷಗಳನ್ನು ವಿಭಜಿಸುವ ಮೂಲಕ ಮತ್ತು ಹೊಸ ಮಿತ್ರರನ್ನು ಸೆಳೆಯುವ ಮೂಲಕ ಬಿಜೆಪಿ ಪರ ರಾಜಕೀಯ ಮರುಜೋಡಣೆಯನ್ನು ರೂಪಿಸುವ ಗುರಿಯನ್ನು ಹೊಂದಿದೆ. ಲಾಲು ಪ್ರಸಾದ್ ಯಾದವ್ ಅವರ ಇಡೀ ಕುಟುಂಬವನ್ನು ಗುರಿಯಾಗಿಸಿಕೊಂಡು ಅವರ ಹಳೆಯ ಪ್ರಕರಣಗಳನ್ನು ಮತ್ತೆ ತೆರೆಯಲಾಗಿದೆ. ಬಿಹಾರದ ಆಡಳಿತಾರೂಢ ಮೈತ್ರಿಕೂಟವು ತಮಿಳುನಾಡಿನ ಆಡಳಿತ ಪಕ್ಷದೊಂದಿಗೆ ಸ್ನೇಹ ಬೆಳೆಸುತ್ತಿರುವಾಗಲೂ ಸಹ ತಮಿಳುನಾಡಿನಲ್ಲಿ ಬಿಹಾರಿ ಕಾರ್ಮಿಕರನ್ನು ಹೊಡೆದು ಕೊಲ್ಲಲಾಗಿದೆ ಎಂಬ ಸುಳ್ಳು ಮಾಹಿತಿಗಳನ್ನು ಹರಡಲಾಗುತ್ತಿದೆ, ಇದೇ ಮಾಹಿತಿಯುಳ್ಳ ನಕಲಿ ವೀಡಿಯೊಗಳನ್ನು ಪಾಟ್ನಾದಲ್ಲಿ ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮದಲ್ಲಿ ಅವುಗಳನ್ನು ವೈರಲ್ ಮಾಡಲಾಗಿದೆ.

ನವೆಂಬರ್ 2016 ರ ನೋಟು ಅಮಾನ್ಯೀಕರಣದಂತೆಯೇ "ಕಪ್ಪು ಹಣದ ವಿರುದ್ಧದ ಯುದ್ಧ" ಎಂದು ಬಿಂಬಿಸಲಾದ ಭ್ರಷ್ಟಾಚಾರ ವಿರೋಧಿ ಹೋರಾಟದ ಚಮತ್ಕಾರವನ್ನು ರಚಿಸಲು ಸರ್ಕಾರವು ED ದಾಳಿಗಳನ್ನು ಬಳಸುತ್ತಿದೆ. ಈ ದಾಳಿಗಳು ವ್ಯಾಪಕವಾಗಿ ಪ್ರಚಾರಗೊಂಡಿವೆ ಮತ್ತು ದಾಳಿಯ ನಿಜವಾದ ಫಲಿತಾಂಶದ ಬಗ್ಗೆ ED ಯಾವುದೇ ಅಧಿಕೃತ ಹೇಳಿಕೆಯನ್ನು ನೀಡದಿದ್ದರೂ, ಹೆಸರಿಸದ 'ಮೂಲಗಳನ್ನು' ಉಲ್ಲೇಖಿಸಿ ವಶಪಡಿಸಿಕೊಂಡ ಆಸ್ತಿಗಳ ಪರಿಶೀಲಿಸದ ಹಕ್ಕುಗಳೊಂದಿಗೆ ಭ್ರಷ್ಟಾಚಾರದ ಗ್ರಹಿಕೆಯನ್ನು ಮಾಧ್ಯಮಗಳು ಸೃಷ್ಟಿಸುತ್ತವೆ. ಸಂಸತ್ತಿನಲ್ಲಿ ಸರ್ಕಾರದ ಸ್ವಂತ ಹೇಳಿಕೆಯ ಪ್ರಕಾರ, ED 31 ಮಾರ್ಚ್ 2022 ರವರೆಗೆ ಒಟ್ಟು 5422 ಅಕ್ರಮ ಹಣ ವರ್ಗಾವಣೆ ಪ್ರಕರಣಗಳಲ್ಲಿ 992 ಪ್ರಕರಣಗಳಲ್ಲಿ ಚಾರ್ಜ್‌ಶೀಟ್‌ಗಳನ್ನು ಮಾತ್ರ ಸಲ್ಲಿಸಲಾಗಿದೆ ಮತ್ತು 23 ಆರೋಪಿಗಳಿಗೆ ಮಾತ್ರ ಶಿಕ್ಷೆ ವಿಧಿಸಲಾಗಿರುವುದು ಸ್ಪಷ್ಟವಾಗಿ ಹೆಚ್ಚಿನ ED ದಾಳಿ ಕಸರತ್ತುಗಳು ಪ್ರಚಾರದ ಮೂಲಕ ಸಾರ್ವಜನಿಕ ಗ್ರಹಿಕೆಯನ್ನು ಕುಶಲತೆಯಿಂದ ನಿರ್ವಹಿಸುವ ಗುರಿಯನ್ನು ಹೊಂದಿದೆ. ರಾಜಕೀಯ ವಿರೋಧಿಗಳನ್ನು ಬೆದರಿಸುವುದು ಮತ್ತು ಅಪಖ್ಯಾತಿ ಮಾಡುವುದು ಮತ್ತು ಸರ್ಕಾರದ ವಿರುದ್ಧದ ಮಾಧ್ಯಮಗಳಲ್ಲಿನ ವಿಮರ್ಶಾತ್ಮಕ ಧ್ವನಿಗಳನ್ನು ಮೌನಗೊಳಿಸುವುದು. ಹೆಚ್ಚಿನ ಸಂಸ್ಥೆಗಳು ಮತ್ತು ಏಜೆನ್ಸಿಗಳಂತೆ, ED ಕೂಡ ಮೋದಿ ಆಡಳಿತದ ಕೈಗೊಂಬೆಯಂತೆ ಅಧಿಕಾರಶಾಹಿಯಿಂದ ನಡೆಸಲ್ಪಡುತ್ತಿದೆ ಎಂಬುದನ್ನು ಗಮನಿಸಬಹುದಾಗಿದೆ.

ಇದಕ್ಕೆ ಪೂರಕವೆಂಬಂತೆ ED ಮತ್ತು CBI ಮುಖ್ಯಸ್ಥರ ಎರಡು ವರ್ಷಗಳ ನಿಗದಿತ ಅಧಿಕಾರಾವಧಿಯನ್ನು ಐದು ವರ್ಷಗಳವರೆಗೆ ವಿಸ್ತರಿಸಲು ಸರ್ಕಾರವು ನವೆಂಬರ್ 2021 ರಲ್ಲಿ ಕಾನೂನನ್ನು ತಿದ್ದುಪಡಿ ತಂದಿತ್ತಲದೇ, ತದನಂತರ ಪ್ರಸ್ತುತ ಇಡಿ ಮುಖ್ಯಸ್ಥ ಸಂಜಯ್ ಮಿಶ್ರಾ ಅವರಿಗೆ ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿ ದಾಖಲೆಯ ಮೂರನೇ ಬಾರಿಗೆ ಅಧಿಕಾರ ವಿಸ್ತರಣೆಯನ್ನು ನೀಡಿರುತ್ತದೆ.

ಮೋದಿ ಸರಕಾರದ ಪ್ರತೀಕಾರ ಮತ್ತು ದಮನಕಾರಿ ಆಡಳಿತವನ್ನು ಅಘೋಷಿತ ತುರ್ತುಪರಿಸ್ಥಿತಿ ಎಂದು ವರ್ಣಿಸಲು ಈ ಮೇಲಿನ ಉದಾಹರಣೆಗಳು ಸಾಕಾಗುವುದಿಲ್ಲ. ಇದು ಕಡಿವಾಣವಿಲ್ಲದ ತುರ್ತು ಪರಿಸ್ಥಿತಿಯಾಗಿರುವುದರಿಂದ ಭಾರತದ ಜನರು ಮತ್ತು ವಿರೋಧ ಪಕ್ಷಗಳು ಅದನ್ನು ನಿಯಂತ್ರಿಸಲು ಸಾಧ್ಯವಾಗದಿದ್ದರೆ, ನಾವು ಲಜ್ಜೆಗೆಟ್ಟ ಸರ್ವಾಧಿಕಾರಿ ಆಡಳಿತದಡೆಗೆ ಸಾಗುತ್ತಿದ್ದೇವೆ.

1970 ರ ದಶಕದಲ್ಲಿ, ತುರ್ತು ಪರಿಸ್ಥಿತಿಯನ್ನು ತೊಡೆದುಹಾಕಿ ಮುಂದುವರಿಯಲು ಭಾರತಕ್ಕೆ ಅವಕಾಶವಿತ್ತು. ಆದರೆ 2020 ರ ದಶಕದಲ್ಲಿ ಸಂಸದೀಯ ಪ್ರಜಾಪ್ರಭುತ್ವದಡಿ ಬೆಳೆಯುತ್ತಿರುವ ಭಾರತವು ಮತ್ತೊಮ್ಮೆ ಫ್ಯಾಸಿಸ್ಟ್ ಧ್ವಂಸವನ್ನು ನಿಲ್ಲಿಸಲು ಪ್ರಜಾಸತ್ತಾತ್ಮಕ ಜನಪ್ರಿಯ ಇಚ್ಛೆಯನ್ನು ಸೃಷ್ಟಿಸಬೇಕು ಮತ್ತು ಪ್ರತಿಪಾದಿಸಬೇಕಾಗಿದೆ.

★ **ದೀಪಂಕರ್ ಭಟ್ಟಾಚಾರ್ಯ | ಅನುವಾದ: ರಾಘವೇಂದ್ರ**

# ಪಿತೃಪ್ರಭುತ್ವ ಕೊನೆಕೊಳ್ಳಲು ಮಹಿಳಾ ಮೀಸಲಾತಿ ಎಷ್ಟು ಮುಖ್ಯ?

ಮಹಿಳೆಯರು ಆಕಾಶದ ಅರ್ಧಭಾಗವನ್ನು ಎತ್ತಿ ಹಿಡಿದಿದ್ದಾರೆ ಎಂಬ ಕ್ರಾಂತಿಕಾರಿ ಕಾಮ್ರೇಡ್ ಮಾವೋ ಮಾತಿನ ಅಂತರ್ಗತ ಅರ್ಥ, ಸಮಾಜದ ಅರ್ಧ ಶಕ್ತಿ ಮಹಿಳೆಯರೇ ಆಗಿದ್ದು, ಅವರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆಯನ್ನು ಖಾತ್ರಿಪಡಿಸಬೇಕೆಂಬುವುದನ್ನು ಸೂಚಿಸುವುದೇ ಆಗಿರುತ್ತದೆ.

ಡಾ .ಬಿ. ಆರ್.ಅಂಬೇಡ್ಕರ್ ರವರು 'ಒಂದು ದೇಶದಲ್ಲಿ ಸಮುದಾಯದ ಅಭಿವೃದ್ಧಿ ಮತ್ತು ಪ್ರಗತಿಯನ್ನು ಅಳೆಯುವ ಏಕೈಕ ಮಾರ್ಗವೆಂದರೆ ಆ ಸಮುದಾಯದ ಮಹಿಳೆಯರ ಪ್ರಗತಿ ಮತ್ತು ಬೆಳವಣಿಗೆ ಮಾತ್ರ ದೇಶದ ನಿಜವಾದ ಪ್ರಗತಿಯಾಗಿದೆ ಎಂದು ಹೇಳಿದ್ದರು ಮತ್ತು ಮಹಿಳಾ ಶೋಷಣೆಯ ವಿಮೋಚನೆಗೆ ಪೂರಕವಾದ ಭಾರತದ ಸಂವಿಧಾನ ರಚಿಸಿಕೊಟ್ಟಿದ್ದಾರೆ. ಆಗಿದ್ದು ಮತ್ತು ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇಂದು ಸಹ ಭಾರತದಲ್ಲಿ ಮಹಿಳೆಯರ ಸ್ಥಿತಿ ಶೋಚನೀಯವಾಗಿರುವುದಕ್ಕೆ ಪಿತೃಪ್ರಭುತ್ವವನ್ನು ಬಲಪಡಿಸುತ್ತಿರುವ ಬ್ರಾಹ್ಮಣ್ಯ ನಿರ್ಮಿತವಾದ ಜಾತಿ, ವರ್ಗ, ಧರ್ಮ ಮತ್ತು ಬಂಡವಾಳದ ರಚನಾವ್ಯೂಹಗಳೇ ಕಾರಣಗಳಾಗಿವೇ ಎಂಬುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

ಮಹಿಳೆಯರ ರಾಜಕೀಯ ಪ್ರಾತಿನಿಧ್ಯದ ವಿಷಯದಲ್ಲಿ, ಭಾರತವು 193 ದೇಶಗಳಲ್ಲಿ 148 ನೇ ಸ್ಥಾನದಲ್ಲಿದೆ, ಸಂಸತ್ತಿನಲ್ಲಿ ಕೇವಲ 14% ಮಹಿಳೆಯರು ಮಾತ್ರ ಮತ್ತು ನಮ್ಮ ಕರ್ನಾಟಕ ವಿಧಾನಸಭೆಯಲ್ಲಿ ಕೇವಲ 4% ಮಹಿಳಾ ಶಾಸಕರಿದ್ದಾರೆ. ಇದಕ್ಕೆ ಮೂಲ ಕಾರಣ ಮಹಿಳಾ ವಿರೋಧಿ ಪಿತೃಪ್ರಭುತ್ವದ ಅಧಿಕಾರ. ಆಕ್ಸ್‌ಫ್ಯಾಮ್ ಇಂಡಿಯಾದ 'ಇಂಡಿಯಾ

ಡಿಸ್ಕ್ರಿಮಿನೇಷನ್ ರಿಪೆ್ಟೇರ್ಟ್ 2022' ಪ್ರಕಾರ ಭಾರತದಲ್ಲಿನ ಮಹಿಳೆಯರು, ಪುರುಷರµÉ್ಟೀ ಶೈಕ್ಷಣಿಕ ಅರ್ಹತೆ ಮತ್ತು ಕೆಲಸದ ಅನುಭವ ಹೊಂದಿರುವುದರ ಹೊರತಾಗಿಯೂ ವೇತನ ಸೇರಿದಂತೆ ಇತರೆ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ತಾರತಮ್ಯಕ್ಕೆ ಒಳಗಾಗಿದ್ದಾರೆಂದು ಮತ್ತು ಜನನದಲ್ಲಿನ ಲಿಂಗ ಅನುಪಾತ ಮತ್ತು ಮಹಿಳೆಯರ ಆರೋಗ್ಯ ಮತ್ತು ಬದುಕುಳಿಯುವಿಕೆಯ ವಿಷಯದಲ್ಲಿ ಭಾರತವು ಅತ್ಯಂತ ಕೆಳಮಟ್ಟದಲ್ಲಿದೆ ಎಂದು ತಿಳಿಸಿದೆ.

ಮಹಿಳೆಯರ ವಿರುದ್ಧದ ತಾರತಮ್ಯವು ರಾಜಕೀಯ ಒಳಗೊಂಡಂತೆ ಎಲ್ಲಾ ಕ್ಷೇತ್ರಗಳಲ್ಲೂ ಆವರಿಸಿಕೊಂಡಿದೆ. ಮಹಿಳಾ ರಾಜಕೀಯ ಪ್ರಜ್ಞೆಯನ್ನು ಕಸಿದುಕೊಳ್ಳುತ್ತಿರುವ ಈ ವ್ಯವಸ್ಥೆ ಸಮಾಜದ ಅರ್ಧದಷ್ಟು ಭಾಗವಿರುವ ಮಹಿಳೆಯರಿಗೆ ರಾಜಕೀಯ ಅಧಿಕಾರದ ನಿರಾಕರಣೆ ಮಾಡುವುದು ಮಾತ್ರವಲ್ಲ, ವಾಸ್ತವವಾಗಿ ಪ್ರಜಾಪ್ರಭುತ್ವದ ಪೆ್ಳ್ಳುತನವನ್ನು ಸೂಚಿಸುತ್ತದೆ. ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಇರುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸಂಸದೀಯ ವ್ಯವಸ್ಥೆಯಲ್ಲಿ ಅವರ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳುವಂತಹದ್ದು, ದಬ್ಬಾಳಿಕೆ ಮತ್ತು ಪಿತೃಪ್ರಭುತ್ವದ ವಿರುದ್ಧದ ಹೋರಾಟದ ಭಾಗವಾಗಿ ಮಾತ್ರವಲ್ಲದೆ ಸಂಸದೀಯ ಪ್ರಜಾಪ್ರಭುತ್ವವನ್ನು ಬಲಪಡಿಸುವ ಸಾಧನವಾಗಿಯೂ ಅತ್ಯಗತ್ಯವಾಗಿದೆ. ಆದ್ದರಿಂದ ಅಂತಹ ಭಾಗವಹಿಸುವಿಕೆಗೆ ಅಡ್ಡಿಯಾಗುವ ಪಿತೃಪ್ರಭುತ್ವ ಪ್ರಧಾನವಾದ ಅಧಿಕಾರದ ವ್ಯವಸ್ಥೆಯನ್ನು ನಿಭಾಯಿಸುವ ಅಗತ್ಯವಿದೆ ಮತ್ತು ಮಹಿಳೆಯರ ಪ್ರಾತಿನಿಧ್ಯವನ್ನು ಖಾತ್ರಿಪಡಿಸುವ ಅಗತ್ಯವಿದೆ.

**ಮಹಿಳಾ ಮೀಸಲು ಮಸೂದೆಯ ಬಗ್ಗೆ ಚರ್ಚಿಸುತ್ತಿರುವ ಈ ಸಂದರ್ಭದಲ್ಲಿ, ವಯಸ್ಕ ಮಹಿಳೆಯರು ಮತದಾನದ ಹಕ್ಕಿಗಾಗಿ ನಡೆಸಿದ ಹೋರಾಟದತ್ತ ಹಿಂತಿರುಗಿ ನೋಡಬೇಕಾಗಿದೆ.**

**ರಾಜಕೀಯ ಪ್ರಾತಿನಿಧ್ಯದಲ್ಲಿ ಮಹಿಳೆಯರಿಗೆ ಮೀಸಲಾತಿ:**
1993 ರಲ್ಲಿ, 73 ನೇ ಮತ್ತು 74 ನೇ ಸಂವಿಧಾನದ ತಿದ್ದುಪಡಿಗಳು ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರಿಗೆ ರಾಷ್ಟ್ರವ್ಯಾಪಿ ಮೂರನೇ ಒಂದು ಭಾಗದಷ್ಟು ಸೀಟುಗಳನ್ನು ಮೀಸಲಿಡಲು ಅವಕಾಶ ಒದಗಿಸಿದವು, ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಇದನ್ನು ಶೇ.50ಕ್ಕೆ ಹೆಚ್ಚಿಸಲಾಗಿದೆ.

ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯ ಈ ಹಂತವನ್ನು ಅನುಸರಿಸಿ, ರಾಜ್ಯ ಶಾಸಕಾಂಗಗಳು ಮತ್ತು ಸಂಸತ್ತುಗಳಲ್ಲಿ ಮೀಸಲಾತಿಯನ್ನು ಒದಗಿಸುವ ಮಹಿಳಾ ಮೀಸಲಾತಿ ಮಸೂದೆಯನ್ನು ಮೊದಲು ಸಂವಿಧಾನ (81 ನೇ ತಿದ್ದುಪಡಿ) ಮಸೂದೆ, 1996ರ ಮೂಲಕ ಪರಿಚಯಿಸಲಾಯಿತು. ಅದರಲ್ಲಿ ತಿಳಿಸಿರುವ ಉದ್ದೇಶ ಮತ್ತು ಕಾರಣಗಳ ಮುನ್ನುಡಿಯಲ್ಲಿ "ಮಹಿಳೆಯರ ರಾಜಕೀಯ ಸಬಲೀಕರಣವು ಲಿಂಗ ಅಸಮಾನತೆ ಮತ್ತು ತಾರತಮ್ಯವನ್ನು ತೊಡೆದುಹಾಕಲು ಪ್ರಬಲ ಮತ್ತು ಅನಿವಾರ್ಯ ಸಾಧನವೆಂದು" ಎಂದು ಉಲ್ಲೇಖಿಸಲಾಗಿದೆ. ಈ ಗ್ರಹಿಕೆ ಅರ್ಥಗರ್ಭಿತವಾಗಿರುವುದೇನೋ ನಿಜ, ಆದರೆ ಮಸೂದೆ ಏಕೆ ಇನ್ನೂ ಅಂಗೀಕರವಾಗಿಲ್ಲವೆನ್ನುವುದು ಗ್ರಹಿಕೆಗೆ ವ್ಯತಿರಕ್ತವಾಗಿರುವುದು ದುರದುಷ್ಟಕರ ಸಂಗತಿ.


1996 ರಲ್ಲಿ ಮಂಡಿಸಲಾದ ಮಸೂದೆಯು ಲೋಕಸಭೆಯಲ್ಲಿ ಅಂಗೀಕಾರಗೊಳ್ಳಲು ವಿಫಲವಾಯಿತು ಮತ್ತು ಜಂಟಿ ಸಂಸದೀಯ ಸಮಿತಿಗೆ ಕಳುಹಿಸಿಕೊಡಲಾಯಿತು. ಮುಂದುವರಿದು, 2009 ರಲ್ಲಿ ಸಲ್ಲಿಸಲಾದ ಸಂಸದೀಯ ಸ್ಥಾಯಿ ಸಮಿತಿಯ ವರದಿಯು "ವಿವಿಧ ಸಾಮಾಜಿಕ ಮತ್ತು ಸಾಂಸ್ಕøತಿಕ ಕಾರಣಗಳು ಮತ್ತು ಪಿತೃಪ್ರಭುತ್ವದ ಸಂಪ್ರದಾಯಗಳಿಂದಾಗಿ ರಾಜಕೀಯದಿಂದ ಮಹಿಳೆಯರನ್ನು ಐತಿಹಾಸಿಕವಾಗಿ ಹೊರಗಿಡಲಾಗಿದೆ" ಎಂದು ಮತ್ತು "ಮಹಿಳೆಯರ ಅರ್ಥಪೂರ್ಣ ಸಬಲೀಕರಣವನ್ನು ಶಾಸಕಾಂಗ ಅಥವಾ ಸಂಸದೀಯ ವ್ಯವಸ್ಥೆಯಲ್ಲಿ ಮಹಿಳೆಯರು ಸಮರ್ಪಕವಾಗಿ ಭಾಗವಹಿಸುವುದರೊಂದಿಗೆ ಮಾತ್ರ ಸಾಧಿಸಬಹುದು"ಎಂದು ಮತ್ತು "ಮಹಿಳೆಯರಿಗೆ ಸಂಸತ್ ಸ್ಥಾನಗಳಲ್ಲಿ ಮೀಸಲಾತಿಯನ್ನು ನೀಡುವುದು, ಕಾನೂನುಗಳನ್ನು/ನಿಯಮಗಳನ್ನು ಮಾಡುವ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಸೂಕ್ತ ಮತ್ತು ಅಗತ್ಯ ಕಾರ್ಯತಂತ್ರವಾಗಿದೆ" ಎಂದು ತಿಳಿಸಿದೆ. ಹಾಗೂ "ನಿಜವಾದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಯಾವುದೇ ವರ್ಗ/ ಸಮುದಾಯವನ್ನು ಕಾನೂನು ನಿಯಮಗಳನ್ನು ರೂಪಿಸುವ ಪ್ರಕ್ರಿಯೆಯಿಂದ ಹೊರಗಿಡಬಾರದು" ಮತ್ತು "ಮೀಸಲಾತಿ' ಎಂಬುದು ಸಾಮಾಜಿಕ ವ್ಯವಸ್ಥೆಯನ್ನು ಸರಿಯಾದ ಕ್ರಮದಲ್ಲಿ ಪುನರ್ನಿರ್ಮಾಣ ಮಾಡವುದಕ್ಕಾಗಿ ವಿಕಸನಗೊಂಡಿರುವ ಒಂದು ಸಮಾಜಶಾಸ್ತ್ರೀಯ ಪರಿಕಲ್ಪನೆಯಾಗಿದೆ ಮತ್ತು ಅದರ ಮೂಲಕ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಮಹಿಳೆಯರಿಗೆ ಮೀಸಲಾತಿ ಅಗತ್ಯವಿದೆ" ಎಂಬುದನ್ನು ಸಮಿತಿಯು ಗುರುತಿಸಿದೆ.

ಮಾರ್ಚ್ 9, 2010 ರಂದು, ಧೀರ್ಘಾ ಚರ್ಚೆಯ ನಂತರ 186-1 ಮತಗಳಿಂದ ರಾಜ್ಯಸಭೆಯಲ್ಲಿ 108 ನೇ ಸಂವಿಧಾನ ತಿದ್ದುಪಡಿ ಮಸೂದೆ (ಮಹಿಳಾ ಮೀಸಲಾತಿ ತಿದ್ದುಪಡಿ)ಯನ್ನು ಅಂಗೀಕರಿಸಲಾಯಿತು. ನಂತರ ಮಸೂದೆಯನ್ನು ಲೋಕಸಭೆಗೆ ಕಳುಹಿಸಲಾಯಿತು, ಅಲ್ಲಿ ಸಮಯ ಮೀರಿದ್ದರಿಂದಾಗಿ ಅಮಾನ್ಯವಾಯಿತು. ಆದರೆ ಲೋಕಸಭೆಯ ವಿಸರ್ಜನೆಯೊಂದಿಗೆ ಮಸೂದೆ ಅಮಾನ್ಯಗೊಂಡಿತು. ಇದೇ ರೀತಿಯಲ್ಲಿ ಸಾಕಷ್ಟು ಬಾರಿ ಈ ಮಸೂದೆಯನ್ನು ಪುನಃ ಪುನಃ ಮಂಡಿಸಲಾಗಿದೆ ಮತ್ತು ವಿನಾಕಾರಣ ಅನೇಕ ಸಂದರ್ಭಗಳಲ್ಲಿ ರದ್ದುಗೊಳಿಸಲಾಗಿದೆ.

2021 ರಲ್ಲಿ, ನ್ಯಾಷನಲ್ ಫೆಡರೇಶನ್ ಆಫ್ ಇಂಡಿಯನ್ ವುಮೆನ್ಸ್ ಸಂಘನಟನೆಯು ಮಸೂದೆಯನ್ನು ಸಂಸತ್ತಿನಲ್ಲಿ ಮರು-ಮಂಡಿಸುವಂತೆ ಕೋರಿ ಸರ್ವೋಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿತ್ತು, ಆ ಪ್ರಕರಣದಲ್ಲಿ ನ್ಯಾಯಾಲಯವು ಕೇಂದ್ರ ಸರ್ಕಾರದಿಂದ ಪ್ರತಿಕ್ರಿಯೆಯನ್ನು ಕೋರಿದೆ. ಕಳೆದ 25 ವರ್ಷಗಳಿಂದ ಮಹಿಳಾ ಮೀಸಲಾತಿಗೆ ಸಂಬಂಧಿಸಿದಂತೆ ಇಷ್ಟು ಹಗ್ಗ-ಜಗ್ಗಟಾ ನಡೆಯಲು ಪಿತೃಪ್ರಭುತ್ವದ ಕೃಪಾ ಕಟಾಕ್ಷವೇ ಕಾರಣವೆಂಬುವುದನ್ನು ಮರೆಮಾಚಲು ಸಾಧ್ಯವಿಲ್ಲ.

ಮಹಿಳಾ ಮೀಸಲು ಮಸೂದೆಯ ಬಗ್ಗೆ ಚರ್ಚಿಸುತ್ತಿರುವ ಈ ಸಂದರ್ಭದಲ್ಲಿ, ವಯಸ್ಕ ಮಹಿಳೆಯರು ಮತದಾನದ ಹಕ್ಕಿಗಾಗಿ ನಡೆಸಿದ ಹೋರಾಟದತ್ತ ಹಿಂತಿರುಗಿ ನೋಡಬೇಕಾಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ದುಡಿಯುವ ಮಹಿಳೆಯರ ಮತದಾನದ ಹಕ್ಕುಗಳಿಗಾಗಿ ಕಾರ್ಮಿಕ ವರ್ಗವು ಹೋರಾಡಿತು, ಇದನ್ನು ಬೂರ್ಜ್ವಾ ವ್ಯವಸ್ಥೆ ಸಂಪೂರ್ಣವಾಗಿ ವಿರೋಧಿಸಿತು. ಸಂಸಧೀಯ ವ್ಯವಸ್ಥೆಯಲ್ಲಿ ಕಾರ್ಮಿಕ ವರ್ಗದ ಮತವನ್ನು ಬಲಪಡಿಸುವುದು ಬೂರ್ಜ್ವಾಗಳ ಹಿತಾಸಕ್ತಿಯಲ್ಲ ಮತ್ತು ಪ್ರತಿ ದೇಶದಲ್ಲಿ ಅವರು ದುಡಿಯುವ ಮಹಿಳೆಯರಿಗೆ ಹಕ್ಕನ್ನು ನೀಡುವ ಕಾನೂನುಗಳ ಅಂಗೀಕಾರಕ್ಕೆ ಅಡ್ಡಿಪಡಿಸುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ, 1910 ರಲ್ಲಿ ನಡೆದ ದುಡಿಯುವ ಮಹಿಳೆಯರ ಎರಡನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ, ಜರ್ಮನಿಯ ಮಾರ್ಕ್ಸ್‌ವಾದಿ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಕ್ಲಾರಾ

ಝೆಟ್ಕಿನ್‌ರವರು ನೀಡಿದ "ಮಹಿಳೆಯರ ಮತದಾನವು ಸಮಾಜವಾದದ ಹೋರಾಟದಲ್ಲಿ ನಮ್ಮ ಶಕ್ತಿಯನ್ನು ಒಗ್ಗೂಡಿಸುತ್ತದೆ" ಎಂಬ ಘೋಷ ವಾಕ್ಯದೊಂದಿಗೆ ದುಡಿಯುವ ಮಹಿಳಾ ಕಾರ್ಮಿಕರ ಹೋರಾಟ ಮತದಾನದ ಹಕ್ಕಿಗಾಗಿ ಪ್ರಾರಂಭವಾಯಿತು.



ಚಿತ್ರ: ಹಿಂದೂಸ್ತಾನ್ ಟೈಮ್ಸ್

ಇತರೆ ದೇಶಗಳಿಗೆ ಹೋಲಿಸದರೆ, ಸಂವಿಧಾನದ ಜಾರಿಯಿಂದಾಗಿ ಭಾರತದಲ್ಲಿನ ಮಹಿಳೆಯರಿಗೆ ಮತದಾನದ ಹಕ್ಕು ಬೇಗ ಲಭಿಸಿದೆ. ಇವತ್ತಿಗೂ ಸಹ ಮಹಿಳೆ ತನ್ನ ಮತವನ್ನು ಯಾರಿಗೆ ಚಲಾಯಿಸಬೇಕೆಂಬ ನಿರ್ಧಾರ ತೆಗೆದುಕೊಳ್ಳುವಲ್ಲಿ ಸ್ವತಂತ್ರಳಾಗಿದ್ದಾಳೆಯೇ ಎಂಬುವುದು ಮಾತ್ರ ಪ್ರಶ್ನಾರ್ಹವಾಗಿದೆ, ಬಿಹಾರದಲ್ಲಿ ತಳ ಸಮುದಾಯಗಳ ಮಹಿಳೆಯರು ಮತದಾನದ ಹಕ್ಕು ಚಲಾಯಿಸುವುದಕ್ಕೆ ಎಷ್ಟು ಸಂಕಷ್ಟಪಟ್ಟಿದ್ದಾರೆ ಎಂಬುವುದು ನಮ್ಮ ಕಣ್ಮುಂದೆ ಇರುವ ಸತ್ಯ ಸಂಗತಿ. ರಾಜಕೀಯ ವಿಷಯಲ್ಲಿನ ಸ್ವತಂತ್ರದ ಪ್ರಶ್ನೆ ಕೇವಲ ಮತದಾನಕ್ಕೆ ಸಂಬಂಧಪಟ್ಟದ್ದು ಮಾತ್ರವಲ್ಲ, ಹೀಗಿರುವ ನಗರ ಸ್ಥಳೀಯ ಮತ್ತು ಗ್ರಾಮ ಪಂಚಾಯಿತಿಗಳಲ್ಲಿರುವ ಮೀಸಲಾತಿ ವ್ಯವಸ್ಥೆಯಲ್ಲಿ ಆಯ್ಕೆಯಾಗಿ ಬರುವ ಮಹಿಳಾ ಜನ ಪ್ರತಿನಿಧಿಗಳ ವಿಷದಯಲ್ಲೂ ಉದ್ಭವಿಸುತ್ತದೆ. ಇದೆಲ್ಲಾವನ್ನು ಮೀರಿ ಒಬ್ಬ ಮಹಿಳೆ ಮತದಾರಳಾಗಿ ಮತ್ತು ಜನಪ್ರತಿನಿಧಿಯಾಗಿ ತನ್ನ ಸ್ವತಂತ್ರಕ್ಕೆ ಧಕ್ಕೆಯಾಗದಂತೆ ಕೆಲಸ ನಿರ್ವಹಿಸ ಬೇಕಾದರೆ ಬ್ರಾಹ್ಮಣ್ಯ ಪೋಷಿತ ಪಿತೃಪ್ರಭುತ್ವ ರಾಜಕೀಯ ಕೊನೆಗೊಳ್ಳಲೇ ಬೇಕು ಮತ್ತು ಇದಕ್ಕಾಗಿ ಉನ್ನತ ಮಟ್ಟದ ಸಂಸಧೀಯ ವ್ಯವಸ್ಥೆಯಲ್ಲಿ ಮೀಸಲಾತಿ ಇರಲೇ ಬೇಕು.

108 ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆ ಅಥವಾ ಮಹಿಳಾ ಮೀಸಲಾತಿ ಮಸೂದೆ ಈ ಸಂದರ್ಭದಲ್ಲಿ, ಮಹಿಳಾ ಮೀಸಲಾತಿ ಮಸೂದೆಯು ಒಳಗೊಂಡಿರುವ ಮುಖ್ಯ ಅಂಶಗಳನ್ನು ತಿಳಿದುಕೊಳ್ಳುವುದು ಅವಶ್ಯಕ, ಅದರಲ್ಲಿ;

1. ಮಸೂದೆಯು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಎಲ್ಲಾ ಸ್ಥಾನಗಳ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿಡಬೇಕೆಂದು ಹೇಳಿದೆ.
2. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾದ ಒಟ್ಟು ಸ್ಥಾನಗಳ ಮೂರನೇ ಒಂದು ಭಾಗವನ್ನು ಆ ಗುಂಪುಗಳ ಮಹಿಳೆಯರಿಗೆ ಲೋಕಸಭೆ ಮತ್ತು ಶಾಸನ ಸಭೆಗಳಲ್ಲಿ ಮೀಸಲಿಡಬೇಕೆಂದು ಹೇಳಿದೆ.
3. ಎಲ್ಲಾ ಕ್ಷೇತ್ರಗಳಿಗೂ ಸರದಿಯಾಧಾರದಲ್ಲಿ ಮೀಸಲು ಸ್ಥಾನಗಳನ್ನು ಹಂಚಲಾಗುವುದು ಎಂದು ಹೇಳಿದೆ
4. ಈ ತಿದ್ದುಪಡಿ ಕಾಯಿದೆ ಪ್ರಾರಂಭವಾದ 15 ವರ್ಷಗಳ ನಂತರ ಮಹಿಳೆಯರಿಗೆ ಸ್ಥಾನಗಳ ಹಂಚಿಕೆಯಲ್ಲಿ ಮೀಸಲಾತಿ ಅಸ್ತಿತ್ವದಲ್ಲಿರುವುದಿಲ್ಲವೆಂದು ಹೇಳಿದೆ.

ಕುತೂಹಲಕಾರಿ ಅಂಶವೆಂದರೇ, ಮಹಿಳಾ ಮೀಸಲಾತಿ ಮಸೂದೆಗೆ ಸಂಬಂಧಿಸಿದಂತೆ ವಿವಿಧ ಪರ್ಯಾಯ ಮಾರ್ಗಗಳನ್ನು ಪ್ರಸ್ತಾಪಿಸಲಾಗಿತ್ತು. ಅಂತಹ ಒಂದು ಪರ್ಯಾಯವೆಂದರೆ ಪಕ್ಷಗಳು ತಮ್ಮ ಮಹಿಳಾ ಅಭ್ಯರ್ಥಿಗಳಿಗೆ ಸ್ಥಾನಗಳನ್ನು ಮೀಸಲಿಡಲು ಕಡ್ಡಾಯಗೊಳಿಸಬೇಕು ಮತ್ತು ಹಾಗೆ ಮಾಡಲು ವಿಫಲವಾದರೆ ಚುನಾವಣಾ ಆಯೋಗವು ಅಂತಹ ಪಕ್ಷದ ಮಾನ್ಯತೆ ರದ್ದು ಮಾಡಬಾಹುದಂತಹ ದಂಡನಾ ಕ್ರಮವನ್ನು ತೆಗೆದುಕೊಳ್ಳಬಹುದು ಎಂಬುವುದಾಗಿತ್ತು. ಈ ಪರ್ಯಾಯವು ಪ್ರಜಾಪ್ರಭುತ್ವ ವಿರೋಧಿ ಮತ್ತು ರಾಜಕೀಯ ಪಕ್ಷಗಳು ಚುನಾವಣಾ ಆಯೋಗದ ಹಿಡಿತದಲ್ಲಿರುವುದಕ್ಕೆ ಅವಕಾಶ ಕಲ್ಪಿಸುತ್ತದಯೇ ವಿನಃ, ಮಹಿಳೆಯರು ಚುನಾಯಿತರಾಗುವುದನ್ನು ಖಚಿತಪಡಿಸುವುದಿಲ್ಲ. ಮತ್ತೊಂದು ಪರ್ಯಾಯವೆಂದರೆ, ಬಹು-ಸ್ಥಾನಗಳ ಕ್ಷೇತ್ರಗಳು, ಈ ಮಾದರಿಯಲ್ಲಿ ಎಲ್ಲಾ ಕ್ಷೇತ್ರಗಳು ಬಹು-ಪಕ್ಷದ ಪ್ರಾತಿನಿಧ್ಯವನ್ನು ಹೊಂದಿರಬೇಕು ಮತ್ತು ಮೂವರಲ್ಲಿ ಒಬ್ಬ ಮಹಿಳೆ ಚುನಾಯಿತರಾಗಿರಬೇಕು. ಆದರೆ, ಈ ಮಾದರಿಯು ಮಹಿಳಾ ಪ್ರತಿನಿಧಿಯನ್ನು ಪುರುಷ ಪ್ರತಿನಿಧಿಗೆ ಕೇವಲ ಸಹಾಯಕರನ್ನಾಗಿ ಮಾಡುತ್ತದೆ ಎಂಬ ಆತಂಕವನ್ನು ಸೃಷ್ಟಿಸಿತ್ತು.

ಮಹಿಳೆಯರೆಲ್ಲಾರನ್ನು ಒಂದೇ ರೀತಿಯ ಸಮನಾದ ವರ್ಗವಾಗಿ ಪರಿಗಣಿಸುವುದು ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ಒದಗಿಸುವುದರಿಂದ ಮಹಿಳೆಯರಿಗೆ ಪ್ರಜಾಸತ್ತಾತ್ಮಕ ಪ್ರಾತಿನಿಧ್ಯವನ್ನು ಒದಗಿಸದಂತಾಗುತ್ತದೆಯೇ, ಎಂಬುದು ಮಾತ್ರ ಪ್ರಶ್ನೆಯಾಗಿದೆ. ಭಾರತೀಯ ಸಮಾಜದಲ್ಲಿ, ಮಹಿಳೆಯರನ್ನು ಒಂದೇ ರೀತಿಯ ಸಮನಾದ ವರ್ಗವೆಂದು ಪರಿಗಣಿಸುವುದು ಕಷ್ಟ, ಏಕೆಂದರೆ ಇಲ್ಲಿ ಜಾತಿ, ವರ್ಗ ಮತ್ತು ಧರ್ಮದ ಅಸಮಾನತೆಗಳು ಮಹಿಳೆಯರನ್ನು ಒಳಗೊಂಡಂತೆ ಎಲ್ಲಾ ಸಾಮಾಜಿಕ ಗುಂಪುಗಳನ್ನು ವಿಭಜಿಸುವ ಮತ್ತು ವಿಭಜಿಸುವುದನ್ನು ಮುಂದುವರೆಸುವ ವ್ಯವಸ್ಥಿತ ಕಾರ್ಯವಿಧಾನವಿದೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು. ಆದರೆ ಮಸೂದೆಯು ಎಸ್‌ಸಿ/ಎಸ್‌ಟಿಗಾಗಿ ಅಸ್ತಿತ್ವದಲ್ಲಿರುವ 22% ಮೀಸಲಾತಿಯಲ್ಲಿ ಆ ಸಮುದಾಯಗಳ ಮಹಿಳೆಯರಿಗೆ 33% ಸ್ಥಾನವನ್ನು ಮೀಸಲಿಡಬೇಕೆಂದು ಹೇಳುತ್ತದೆ. ಎಸ್/ಎಸ್‌ಟಿಗಾಗಿ ಅಸ್ತಿತ್ವದಲ್ಲಿರುವ 22% ಮೀಸಲಾತಿಯನ್ನು ಹೊರತು ಪಡಿಸಿ, ಮಹಿಳೆಯರಿಗಾಗಿ ಉದ್ದೇಶಿಸಲಾಗಿರುವ 33% ಮೀಸಲಾತಿಯು ಪ್ರತ್ಯೇಕವಾಗಿದ್ದು, ಅದರಲ್ಲಿ ಜಾತಿ ಮತ್ತು ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡಬೇಕೆಂಬ ಚರ್ಚೆ ಈಗ ವ್ಯಾಪಕವಾಗಿ ನಡೆಯುತ್ತಿರುವುದು ಸೂಕ್ತವೆಂದು ಭಾವಿಸಬಹುದಾದ ಸಂಗತಿಯಾಗಿದೆ.

**ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನು ಖಚಿತಪಡಿಸಬೇಕು:**
ಪ್ರಸ್ತುತ ಕಾಲಮಾನದಲ್ಲಿ, ಆರ್.ಎಸ್.ಎಸ್ ತನ್ನ ಮನುವಾದದ ಕಾರ್ಯಸೂಚಿಯನ್ನು ಮುಂದಿಟ್ಟು ಬೆಳೆಯುತ್ತಿರುವಾಗ, ನಾವು ಸಾಕಷ್ಟು ಸವಾಲುಗಳನ್ನು ಎದುರಿಸಬೇಕಾಗಿದೆ. ರಾಜ್ಯದ ನವ-ಉದಾರವಾದಿ ಕಾರ್ಯಸೂಚಿಯೊಂದಿಗೆ ಸೇರಿಕೊಂಡಿರುವ ಹಿಂದುತ್ವ ಕಾರ್ಯಸೂಚಿಯು ಅಸಮಾನತೆಯನ್ನು ಹೆಚ್ಚುಮಾಡುವಂತಹ ಜಾತಿ, ಪಿತೃಪ್ರಭುತ್ವ ಮತ್ತು ಬಂಡವಾಳಶಾಯಿ ವ್ಯವಸ್ಥೆಯನ್ನು ಬಲಪಡಿಸಲು ನೋಡುತ್ತಿದೆ. ಒಕ್ಕೂಟ ಸರ್ಕಾರದ ಮೇಲೆ ಜಾಗತಿಕ ಬಂಡವಾಳ ಹೊಂದಿರುವ ನಿಯಂತ್ರಣದಿಂದಾಗಿ ಕನಿಷ್ಠ ಮಟ್ಟದಲ್ಲಿರುವ ರಾಜಕೀಯ ಪ್ರಜಾಪ್ರಭುತ್ವವು ಸಹ ಜಾಗತಿಕ ಬಂಡವಾಳದ ಹಿಡಿತಕ್ಕೆ ಸಿಲುಕಿರುವುದು ದುರದುಷ್ಟಕರ ಸಂಗತಿಯಾಗಿದೆ.

ಡಾ. ಬಿ.ಆರ್ ಅಂಬೇಡ್ಕರ್ ಅವರು ಸಂವಿಧಾನದ ಕರಡನ್ನು ಸದನದ ಮುಂದೆ ಮಂಡಿಸಿವಾಗ, "...ರಾಜಕೀಯ ಪ್ರಜಾಪ್ರಭುತ್ವವು ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯಲ್ಲಿ ಇರದ ಹೊರತು ಅದು ಉಳಿಯುವುದಿಲ್ಲ". ಹಾಗದರೆ ಸಾಮಾಜಿಕ ಪ್ರಜಾಪ್ರಭುತ್ವದ ಅರ್ಥವೇನು? ಇದರರ್ಥ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಜೀವನದ ತತ್ವಗಳಾಗಿ ಗುರುತಿಸುವ ಜೀವನ ವಿಧಾನ", ಎಂಬುವುದು ನಮಗೆ ಎಚ್ಚರಿಕೆಯ ಘಂಟೆಯಾಗಿದೆ ಮತ್ತು ನಮ್ಮ ಚಿಂತನ ಲಹರಿಯನ್ನು ಸಾಮಾಜಿಕ ಪ್ರಜಾಪ್ರಭುತ್ವದಡೆಗೆ ಕೊಂಡೊಯ್ಯುತ್ತದೆ.

ಹೀಗಾಗಿ, ನಮ್ಮ ಮುಂದಿರುವ ನಿಜವಾದ ಕಾರ್ಯವೆಂದರೆ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವಕ್ಕಾಗಿ ಹೋರಾಡುವುದು, ಇದು ಆರೋಗ್ಯಕರ ರಾಜಕೀಯ ಪ್ರಜಾಪ್ರಭುತ್ವದ ಅಡಿಪಾಯವಾಗಿದೆ. ಆದರೆ ಇದು ಇಂದು ದೊಡ್ಡ ಗಂಡಾಂತರದಲ್ಲಿದೆ. ಹಾಗಾಗಿ ಮಹಿಳೆಯರ ವಿಮೋಚನೆ ಮತ್ತು ಸಮಾಜದ ಪ್ರಜಾಪ್ರಭುತ್ವೀಕರಣವನ್ನು ಖಚಿತಪಡಿಸಿಕೊಳ್ಳಲು, ಸಂಸದೀಯ ವ್ಯವಸ್ಥೆಯಲ್ಲಿ ಮಹಿಳೆಯರಿಗೆ 33% ಸ್ಥಾನಗಳ ಮೀಸಲಾತಿ ಇರಬೇಕಾಗಿರುವುದು ಬಹಳ ಮುಖ್ಯವಾದದ್ದಾಗಿದೆ. ಮಸೂದೆ ಅಂಗೀಕರವಾಗುವವರೆಗೆ ಎಲ್ಲಾ ರಾಜಕೀಯ ಪಕ್ಷಗಳು ನೈತಿಕ ಹೊಣೆ ಹೊತ್ತು, ತಮ್ಮ ಪಕ್ಷದಲ್ಲಿ 33% ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕಾಗಿದೆ.

ಮೀಸಲಾತಿಯ ಹೊರತಾಗಿ ನಾವೆಲ್ಲಾರು, ಅಸಮಾನತೆಯನ್ನು ರಕ್ಷಿಸುತ್ತಿರುವ, ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವದ ಬೆಳವಣಿಗೆಗೆ ತಡೆಯೊಡ್ಡುತ್ತಿರುವ ಹಾಗೂ ಸಂವಿಧಾನ ಮೇಲೆ ನಿರಂತರವಾಗಿ ದಾಳಿನಡೆಸುತ್ತಿರುವ ಬ್ರಾಹ್ಮಣ್ಯ ಪೋಷಿತ ಬೂಷ್ರ್ವಾ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಬೇಕಾಗಿರುವುದು ನಮ್ಮ ಗುರಿಯಾಗಬೇಕಾಗಿದೆ. ನಮ್ಮ ಹೋರಾಟವು ಪಿತೃಪ್ರಭುತ್ವದ ನಿರ್ಮೂಲನೆಗಾಗಿ, ಜಾತಿ ವಿನಾಶಕ್ಕಾಗಿ ಮತ್ತು ಬಂಡವಾಳಶಾಹಿಯ ವಿರುದ್ಧ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವವನ್ನು ಆಧಾರಿಸಿದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾ ಸಮಾಜದ ಕಡೆಗೆ ಮುನ್ನುಗ್ಗಬೇಕಾಗಿದೆ. ಇದಕ್ಕಾಗಿ ಮಹಿಳಾ ವಿಮೋಚನೆಗಾಗಿ ಹೋರಾಡಿದ ಡಾ.ಬಿ.ಆರ್ ಅಂಬೇಡ್ಕರ್, ಜ್ಯೋತಿಬಾ ಫುಲೆ, ಸಾವಿತ್ರಿ ಭಾಯಿ ಫುಲೆ ಮತ್ತು ಫಾತಿಮಾ ಶೇಖ್ ಅವರ ಹೋರಾಟವನ್ನು ನಾವು ಒಪ್ಪಿಕೊಂಡು ಅಪ್ಪಿಕೊಳ್ಳಬೇಕಾಗಿದೆ.

★ **ಮೈತ್ರೇಯಿ/ರಘು | ಈ ಲೇಖನವು 'ಸಂವಾದ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು**

# ಹಾವೇರಿಯ ದಲಿತರ ಮೇಲಿನ ದೌರ್ಜನ್ಯದ ಕುರಿತು ವರದಿ

ಕರ್ನಾಟಕದ ಹಾವೇರಿ ಜಿಲ್ಲೆಯ ದಲಿತ ಸಮುದಾಯವು ದಿನನಿತ್ಯ ಜಾತಿ ತಾರತಮ್ಯಕ್ಕೆ ಒಳಗಾಗುತ್ತಿರುವುದು ವಾಸ್ತವ ಪರಿಸ್ಥಿತಿಯಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರ ಹಾಕುವುದೂ ಸೇರಿದಂತೆ ಅವರಿಗೆ ಸಾರ್ವಜನಿಕ ಸೌಲಭ್ಯಗಳಾದ ಸಾರ್ವಜನಿಕ ನಲ್ಲಿಯ ಬಳಕೆ, ದೇವಸ್ಥಾನ ಪ್ರವೇಶ ಹಾಗೂ ಸ್ಮಶಾನಗಳ ಬಳಕೆಯನ್ನು ನಿರಾಕರಿಸಲಾಗುತ್ತಿದೆ. ಈ ಪ್ರದೇಶದ ದಲಿತ ಸಮುದಾಯಕ್ಕೆ ಸಂವಿಧಾನವು ಖಾತ್ರಿಪಡಿಸಿರುವ ಸಮಾನತೆ ಹಾಗೂ ಸ್ವಾತಂತ್ರವನ್ನು ಬಹುಹಿಂದಿನಿAದಲೂ ತಡೆಹಿಡಿಯಲಾಗಿದೆ.

ದಲಿತರ ವಿರುದ್ಧದ ಹಲವಾರು ಹಲ್ಲೆಗಳಲ್ಲಿ ಈಗ ಇತ್ತೀಚೆಗೆನಡೆದ ಹಲ್ಲೆಯು ಅತ್ಯಂತ ಹಿಂಸಾತ್ಮಕವಾಗಿದೆ. ನಂದಿಹಳ್ಳಿ ಗ್ರಾಮದ ದಲಿತರು ಬಸವೇಶ್ವರ ಜಾತ್ರೆಯಲ್ಲಿ ಭಾಗವಹಿಸಿದ್ದಕ್ಕೆ ಅಲ್ಲಿನ ಲಿಂಗಾಯತ ಸಮುದಾಯವು ಅವರ ಮೇಲೆ ಹಲ್ಲೆ ನಡೆಸಿದೆ. ಮಾರ್ಚ್ ೩ ರಂದು ಮಾದಿಗ ಸಮುದಾಯಕ್ಕೆ ಸೇರಿದ ರಮೇಶ್ ಹಾಗೂ ಅವರ ತಾಯಿ ಹೇಮವ್ವ ಜಾತ್ರೆಯ ಆಚರಣೆಯ ಭಾಗವಾಗಿ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಮಾಡಲು ಯತ್ನಿಸಿದ್ದರು. ಆ ಸಮಯದಲ್ಲಿ ಲಿಂಗಾಯತ ಮತ್ತು ಇತರ ಮೇಲ್ಜಾತಿ ಸಮುದಾಯದವರು, ಅವರು ದೇವಸ್ಥಾನದೊಳಗೆ ಪ್ರವೇಶಿಸಿದರೆ ದೇವಸ್ಥಾನ ಅಪವಿತ್ರವಾಗುತ್ತದೆ ಎಂದು ಅವರನ್ನು ದೇವಸ್ಥಾನದ ಬಾಗಿಲಲ್ಲೇ ತಡೆಹಿಡಿದರು. ರಮೇಶ್ ಹಾಗೂ ಅವರ ತಾಯಿ ಇದನ್ನು ಪ್ರಶ್ನಿಸಿದಾಗ ಅವರ ಮೇಲೆ ಜಾತಿನಿಂದನೆ, ಹಿಂಸೆಯ ಬೆದರಿಕೆ ಹಾಗೂ ದೈಹಿಕ ಹಲ್ಲೆಗಳನ್ನು ನಡೆಸಲಾಯಿತು. ನಂತರ ರಾತ್ರಿ ರಮೇಶ್ ಹಾಗೂ ಇತರರು ಮೆರವಣಿಗೆಯಲ್ಲಿ ಭಾಗವಹಿಸಲು ಯತ್ನಿಸಿದಾಗಲೂ ಇದೇರೀತಿ ನಡೆಸಿಕೊಳ್ಳಲಾಗಿತ್ತು. ಇದನ್ನು ಕೊನೆಗಾಣಿಸಬೇಕೆಂದು ರಮೇಶ್ ಮತ್ತು ಇತರ ಕೆಲವರು ಸ್ಥಳೀಯ ಪೊಲೀಸ್ ಠಾಣೆಗೆ ದೂರು ಕೊಡಲು ಹೋದರು. ಈ ಸಮಯದಲ್ಲಿ ರಮೇಶ್ ಅವರ ಮನೆಗೆ ನುಗ್ಗಿದ ಲಿಂಗಾಯತ ಸಮುದಾಯದವರು ಅಲ್ಲಿದ್ದ ಹೆಣ್ಣುಮಕ್ಕಳನ್ನು ನಿಂದಿಸಿ, ಲೈಂಗಿಕವಾಗಿ ದುರ್ಬಳಕೆ ಮಾಡಿ ಮನೆಗೆ ಬೆಂಕಿ ಹಚ್ಚಿದ್ದರು. ನಂತರ ಆ ಉದ್ರಿಕ್ತ ಗುಂಪು ಅಕ್ಕಪಕ್ಕದ್ದಲ್ಲಿದ್ದ ದಲಿತರ ಮನೆಗಳನ್ನೂನುಗ್ಗಿ ಹಾನಿ ಮಾಡಿ, ಅಲ್ಲಿದ್ದ ಬೈಕ್ ಒಂದಕ್ಕೆ ಬೆಂಕಿ ಹಚ್ಚಿ ಡಾ.ಅಂಬೇಡ್ಕರ್ ಅವರ ಭಿತ್ತಿಚಿತ್ರಗಳನ್ನು ಹಾಳುಗೆಡವಿತ್ತು.

ನಂತರ, ಮೇಲ್ಜಾತಿ ಲಿಂಗಾಯತ ಸಮುದಾಯಕ್ಕೆ ಸೇರಿದ ೩೦ ಮಂದಿಯ ಮೇಲೆ ಎಫ್.ಐ.ಆರ್ ದಾಖಲಾಯಿತು. ಗಲಭೆಯೂ ಸೇರಿದಂತೆ ಅಕ್ರಮವಾಗಿ ಗುಂಪು ಗೂಡಿ ೧೯೮೯ ರ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆಯ ಅಡಿಯಲ್ಲಿ ದಲಿತ ಸಮುದಾಯವರನ್ನು ಅವಮಾನ, ಅಪಮಾನಗೊಳಿಸಿದ ಭಾರತೀಯ ಅಪರಾಧ ಸಂಹಿತೆಯ ಆರೋಪಗಳನ್ನು ಇವರ ಮೇಲೆ ಹೊರಿಸಲಾಗಿತ್ತು. ಆದರೆ ಇಲ್ಲಿಯವರೆಗೂ ಹಲ್ಲೆಗೊಳಗಾದ ಮತ್ತು ಹಾನಿಗೊಳಗಾದ ದಲಿತರಿಗೆ ಯಾವುದೇ ಪರಿಹಾರವಾಗಲೀ ಅಥವಾ ದಲಿತರ ದೌರ್ಜನ್ಯ ತಡೆ ಕಾಯಿದೆಯು ಹೇಳುವ ಸಾರಿಗೆ ಮತ್ತು ಆಹಾರ ಭತ್ಯೆಗಳಾಗಲೀ ದೊರಕಿಲ್ಲ. ಹೊಣೆಗಾರಿಕೆ ಹೊರಬೇಕಾದ ಎಲ್ಲ ಪ್ರಾಧಿಕಾರಗಳೂ ಈ ಬಗ್ಗೆ ಸುಮ್ಮನಾಗಿಬಿಟ್ಟಿವೆ. ಪೊಲೀಸರು ತನಿಖೆ ಎಲ್ಲಿಯವರೆಗೂ ಬಂದಿದೆ ಎಂಬುದನ್ನು ಕುಟುಂಬಕ್ಕೆ ತಿಳಿಸಿಲ್ಲ, ಜೊತೆಗೆ ಈ ಪ್ರಕರಣಕ್ಕೆ ನೇಮಕವಾಗಿರುವ ಸರ್ಕಾರೀ ವಕೀಲರು ಕುಟುಂಬದವರನ್ನು ಸಂಪರ್ಕಿಸಿಲ್ಲ. ದಲಿತರಿಗಿರುವ ಯೋಜನೆ ಸೌಲಭ್ಯಗಳ

ಮಾಹಿತಿಯು ತಮಗೆ ಇಲ್ಲ, ಸ್ಥಳೀಯ ಗ್ರಾಮಸಭೆಗಳು ದೇವಸ್ಥಾನಗಳಲ್ಲಿ ನಡೆಯುವುದರಿಂದ ತಮಗೆ ಅಲ್ಲಿ ಪ್ರವೇಶವಿರುವುದಿಲ್ಲ ಎಂದು ಇತರ ದಲಿತ ನಿವಾಸಿಗಳುಹೇಳಿದರು.

ಪ್ರಕರಣಕ್ಕೆ ಸಂಬAಧ ಪಟ್ಟಂತೆ ಹಾಗೂ ಆ ಗ್ರಾಮದಲ್ಲಿನ ಜಾತಿ ತಾರತಮ್ಯದ ಬಗ್ಗೆ ಅಲ್ಲಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಿಂದ ಹಿಡಿದು, ಹಲಗೇರಿ ಪೊಲೀಸ್ ಠಾಣೆಯ ಡೆಪ್ಯುಟಿ ಸೂಪರ್‌ಇನ್‌ಟೆಂಡೆAಟ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರವರೆಗೂ, ಸಂಬAಧ ಪಟ್ಟ ಹಲವರೊಂದಿಗೆ ಚರ್ಚೆಗಳು ನಡೆದವು. ಬರಿ ಕೈಯಿಂದ ಮಲವನ್ನು ಸ್ವಚ್ಛಗೊಳಿಸಲು ದಲಿತರನ್ನು ಒತ್ತಾಯಿಸಲಾಗುತ್ತಿದೆ ಎಂಬ ವಿಷಯವನ್ನು ಹೇಳಿದಾಗ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಅದನ್ನು ಸಾರಾಸಗಟಾಗಿ ನಿರಾಕರಿಸಿದರು. ಈ ಸ್ವಚ್ಛತೆಗೆ ಮನುಷ್ಯರನ್ನು ಬಳಸುವಂತಿಲ್ಲ ಎಂಬಕಾನೂನಿನ ಅಂಶವನ್ನು ಎತ್ತಿ ಹೇಳಿದಾಗ, ಯಂತ್ರಗಳನ್ನು ಕೊಳ್ಳಲು ಪಂಚಾಯತಿಯಲ್ಲಿ ಹಣವಿಲ್ಲ ಎಂದು ಹೇಳಿದರು. ನಂತರವೂ ಇಲ್ಲಿ ಕಾನೂನುಗಳು ಉಲ್ಲಂಘನೆಯಾಗುತ್ತಿರುವ ಬಗ್ಗೆ ಮತ್ತು ಸಾಕಷ್ಟು ಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿಲ್ಲ ಎಂದು ಪದೇ ಪದೇ ಒತ್ತಿ ಹೇಳಿದಾಗ ಅವರು ಮನುಷ್ಯರಿಂದ ಮಲ ಸ್ವಚ್ಛಗೊಳಿಸುವ ಕಾರ್ಯ ನಡೆಯುತ್ತಿದ್ದಲ್ಲಿ ಅದನ್ನು ತಡೆಯಲು ಬೇಕಾದ ಕ್ರಮವನ್ನು ತಮ್ಮ ಕಚೇರಿಯಿಂದ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದರು. ಆದರೆ ಎಷ್ಟು ಸಮಯದ ಒಳಗೆ ಈ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂಬುದನ್ನು ನಿಗದಿಪಡಿಸಲಿಲ್ಲ.

ದೂರು ಕೊಟ್ಟವರಿಗೆ ಪ್ರಕರಣದ ಬೆಳವಣಿಗೆ ಕುರಿತು ಏಕೆ ಮಾಹಿತಿ ನೀಡಲಿಲ್ಲ ಎಂಬ ಬಗ್ಗೆ ಡೆಪ್ಯುಟಿ ಪೊಲೀಸ್ ಕಮಿಶನರ್ ಅವರಿಗೆ ಪ್ರಶ್ನೆಗಳನ್ನು ಕೇಳಿದಾಗ, ಅವರು, ಅದು ದೂರುದಾರರ ಕರ್ತವ್ಯ, ಅವರೇ ಪೊಲೀಸ್ ಸ್ಟೇಶನ್‌ಗೆ ಬಂದು ಮಾಹಿತಿ ಪಡೆದುಕೊಳ್ಳÀಬೇಕಾಗಿತ್ತು ಎಂದು ಉತ್ತರಿಸಿದರು. ನಮ್ಮ ಕೆಲಸ ನಾವು ಮಾಡಿದ್ದೇವೆ, ಇನ್ನುಳಿದ ಸಮಸ್ಯೆಗಳ ಬಗ್ಗೆ ಸಮಾಜಕಲ್ಯಾಣ ಇಲಾಖೆಯನ್ನು ಕೇಳಿ ಎಂದು ಅವರು ಹೇಳಿದರು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರನ್ನು ಈ ಬಗ್ಗೆ ಕೇಳಿದಾಗ ಅವರು, ತಮ್ಮ ಕಚೇರಿಯಿಂದು ಸ್ಥಳ ಪರಿಶೀಲನೆ ನಡೆಸಿ ಅಗತ್ಯ ವರದಿಗಳನ್ನು ಇಲಾಖೆಯ ಉನ್ನತಾಧಿಕಾರಿಗಳಿಗೆ ಸಲ್ಲಿಸಲಾಗಿದೆ, ಜಿಲ್ಲಾಧಿಕಾರಿಗಳು ತಮ್ಮ ವರದಿಯನ್ನು ಸಲ್ಲಿಸಿದ ಮೇಲೆಯೇ ಸಂತ್ರಸ್ತರಿಗೆ ಪರಿಹಾರವನ್ನು ಬಿಡುಗಡೆ ಮಾಡಲು ಸಾಧ್ಯ ಎಂದು ಅವರು ಹೇಳಿದರು. ಹಾವೇರಿ ಜಿಲ್ಲಾಧಿಕಾರಿ ಶ್ರೀ ರಘುರಾಮಮೂರ್ತಿಯವನ್ನು ಸಂಪರ್ಕಿಸಿದಾಗ ಅವರು ಗ್ರಾಮದಲ್ಲಿ ಈ ಹಿಂದೆ ಜಾತಿ ತಾರತಮ್ಯಗಳು ನಡೆಯುತ್ತಿದ್ದವು, ಕಡೆಯ ಪ್ರಕರಣ ನಡೆದದ್ದು ಎರಡು ವರ್ಷಗಳ ಹಿಂದೆ ಎಂದು ಹೇಳಿದರು. ಇಷ್ಟರ ನಡುವೆ ಜಾತಿ ದೌರ್ಜನ್ಯದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಸ್ವಾಭಿಮಾನಿ ದಲಿತ ಶಕ್ತಿಸಂಘಟನೆಯ ನಾಯಕರೂ ಸೇರಿದಂತೆ ಹಲವಾರು ದಲಿತ ನಾಯಕರಿಗೆ ಜೀವಬೆದರಿಕೆಯ ಕರೆಗಳು ಬಂದಿದ್ದವು.

ಹಾವೇರಿ ಜಿಲ್ಲೆಯಾದ್ಯಂತ ಅದರಲ್ಲೂ ನಂದಿಹಳ್ಳಿಗ್ರಾಮದಲ್ಲಿ ಕಾನೂನನ್ನು ವ್ಯವಸ್ಥಿತವಾಗಿ ಮುರಿಯಲಾಗುತ್ತಿದೆ ಹಾಗೂ ದಲಿತರ ಹಕ್ಕುಗಳ ಉಲ್ಲಂಘನೆಯು ವ್ಯಾಪಕವಾಗಿದೆ. ಸಂವಿಧಾನದ ಆರ್ಟಿಕಲ್ ೨೧ ರ ಅಡಿಯಲ್ಲಿ ದಲಿತರಿಗೆ ನೀಡಲಾದ ಬದುಕುವ ಹಕ್ಕು, ಸ್ವಾತಂತ್ರ್ಯ ಮತ್ತು ಸಮಾನತೆಯ ಹಕ್ಕುಗಳ ಭರವಸೆಯು ನಿಷ್ಫಲಗೊಂಡಿವೆ. ಇದಲ್ಲದೆ ಸಂವಿಧಾನದ ಆರ್ಟಿಕಲ್ ೧೫ ಮತ್ತು ೧೭ ರ ಅಡಿಯಲ್ಲಿ ಹೇಳಿರುವ ಜಾತಿಯಾಧಾರಿತ ತಾರತಮ್ಯ ನಿಷೇಧ ಹಾಗೂ ಅಸ್ಪೃಶ್ಯತೆಯ ನಿವಾರಣೆ ಈ ಎಲ್ಲವೂ ಉಲ್ಲಂಘನೆಯಾಗಿವೆ.



ಈ ರೀತಿಯ ಘಟನೆಗಳಾಗದಂತೆ ತಡೆಯುವ ಸಲುವಾಗಿ ರಚನೆಯಾದ SC/ST ದೌರ್ಜನ್ಯ ಕಾಯಿದೆ ಮತ್ತು ೧೯೯೫ ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ನಿಯಮಗಳ ಅನುಷ್ಠಾನವು ತೀರಾ ಕಳಪೆಯಾಗಿದೆ ಮತ್ತು ನಿಷ್ಪ್ರಯೋಜಕವಾಗಿದೆ. ಮೊದಲನೆಯದಾಗಿ, ಈ ಪ್ರಕರಣದಲ್ಲಿ ದೌರ್ಜನ್ಯ ಕಾಯಿದೆಯ ನಿಯಮಗಳನ್ವಯ ಸೂಕ್ತವಾದ ರೀತಿಯಲ್ಲಿ ದಾಖಲಾಗಿಲ್ಲ. ಮಹಿಳೆಯನ್ನು ಅವಳ ಅನುಮತಿಯಿಲ್ಲದೆ ಉದ್ದೇಶಪೂರ್ವಕವಾಗಿ ಸ್ಪರ್ಶಿಸಿರುವುದು, ದೇವಸ್ಥಾನವೂ ಸೇರಿದಂತೆ ಪಾರಂಪರಾನುಗತವಾಗಿ ನಡೆದುಕೊಂಡು ಬಂದ ಸಾಂಸ್ಕೃತಿಕ/ಧಾರ್ಮಿಕ ಉತ್ಸವಗಳಲ್ಲಿ ಭಾಗವಹಿಸುವುದನ್ನು ನಿರಾಕರಿಸಿರುವುದು ಎರಡನೆಯದಾಗಿ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವುದು ಮತ್ತು ಈ ಕಾನೂನಿನಡಿಯಲ್ಲಿ ಸಿಗಬೇಕಾದ ಪರಿಹಾರ ಮತ್ತು ಇತರ ಸೌಲಭ್ಯಗಳಾದ ಸಾರಿಗೆ, ಆಹಾರ, ಮತ್ತು ದಿನಭತ್ಯೆಗಳನ್ನು ದೊರಕುವಂತೆ ಖಾತ್ರಿಪಡಿಸಿಕೊಳ್ಳಲು ಸರ್ಕಾರವು ಸ್ಪಷ್ಟವಾಗಿ ವಿಫಲವಾಗಿದೆ. ಮೂರನೆಯದಾಗಿ ಈ ಪ್ರದೇಶದಲ್ಲಿ ನಿರಂತರವಾಗಿ ಜಾತಿ ದೌರ್ಜನ್ಯಗಳು ನಡೆಯುತ್ತಿದ್ದಾಗ್ಯೂ ಸರ್ಕಾರವು ಇದನ್ನು ಗುರುತಿಸಿ ತಡೆಗಟ್ಟುವಲ್ಲಿ ದೌರ್ಜನ್ಯ ನಿಯಮಗಳ ಅನ್ವಯ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ.

ಇದಲ್ಲದೆ ೧೯೯೩ ರ ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತಿ ಕಾಯಿದೆಯ ಅನುಷ್ಠಾನವೂ ಸಂಪೂರ್ಣವಾಗಿ ವಿಫಲವಾಗಿದೆ. ಈ ಕಾಯಿದೆಯ ಪ್ರಕಾರ ಗಾಮ ಸಭೆಗಳು ಗ್ರಾಮದಲ್ಲಿ ಜಾತಿಯಾಧಾರಿತ, ಧರ್ಮಾಧಾರಿತ ಹಾಗೂ ಲಿಂಗಾಧಾರಿತ ತಾರತಮ್ಯಗಳು ನಡೆಯದಂತೆ ತಡೆಗಟ್ಟಲುಸಕ್ರಿಯ ಪಾತ್ರ ವಹಿಸಬೇಕು. ಆದರೆ ಜಿಲ್ಲೆಯ ಗ್ರಾಮ ಸಭೆಗಳು ಈ ನಿಟ್ಟಿನಲ್ಲಿ ಯಾವುದೇ ಕ್ರಮ ತೆಗೆದುಕೊಂಡಿರುವುದು ಕಂಡುಬAದಿಲ್ಲ. ಇದೆಲ್ಲದರ ಜೊತೆಗೆ ೨೦೧೩ರ ಮ್ಯಾನ್ಯುವಲ್ ಸ್ಕಾವೆಂಜಿAಗ್ ನಿಷೇಧ ಹಾಗೂ ಅವರ ಪುನರ್ವಸತಿ ಕಾಯಿದೆಯು ಮ್ಯಾನ್ಯುವಲ್ ಸ್ಕಾವೆಂಜಿAಗ್ ಕೆಲಸಕ್ಕೆ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳುವುದು ಯಾವುದೇ ಅಡೆತಡೆಯಿಲ್ಲದಂತೆ ನಡೆಯುತ್ತಿದೆ. ಸರ್ಕಾರವು ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಸೋತಿರುವುದು ಮತ್ತು ದಲಿತ ಸಮುದಾಯದ ಬಹುತೇಕ ಹಕ್ಕುಗಳು ಉಲ್ಲಂಘನೆಯಾಗಿರುವುದನ್ನು ಗಮನಿಸಿದರೆ ಈ ತಕ್ಷಣವೇ ತುರ್ತು ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯವಶ್ಯಕವಾಗಿದೆ. ಈ ಎಲ್ಲ ಕ್ರಮಗಳ ಜೊತೆಗೆ, ೧೯೮೯ ರ ಜಾತಿ ದೌರ್ಜನ್ಯ ಕಾಯಿದೆ, ೧೯೯೫ ರ ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಸರ್ಕಾರ ಈ ತಕ್ಷಣವೇ ಜಾಗೃತ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸಬೇಕು ಮತ್ತು ಈ ಪ್ರಕರಣದ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಬೇಕು ಮತ್ತು ಅವರಿಗೆ ಸಿಗಬೇಕಾದ ಪರಿಹಾರ ಮತ್ತು ಇತರ ಭತ್ಯೆಗಳನ್ನು ವಿತರಿಸಬೇಕು. ★

# ನಾವೆದ್ದು ನಿಲ್ಲದಿದ್ದರೆ ???

ನಾವು ಮೌನವಾಗಿದ್ದರೆ
ಅವರು ಕೈ ಎತ್ತುತ್ತಾರೆ
ಚಾಟಿ ಬೀಸುತ್ತಾರೆ
ಬಳಸಿ ಬಸವಳಿಸುತ್ತಾರೆ
ಅವರ ಬೈಗುಳಗಳಿಗೆ
ಪ್ರತಿಮೆ ರೂಪಕಗಳಾಗುತ್ತೇವೆ
ನಾವೆದ್ದು ನಿಲ್ಲದಿದ್ದರೆ ????

ನಾವು ನಿಷ್ಕ್ರಿಯರಾಗಿದ್ದರೆ
ಬೆತ್ತಲೆ ಮಾಡುತ್ತಾರೆ
ದೇಹಗಳ ಮಾರುತ್ತಾರೆ
ಘನತೆಯ ಒತ್ತೆ ಇಡುತ್ತಾರೆ
ಅವರ ಮಾರುಕಟ್ಟೆಗಳಿಗೆ
ನಾವು ಸರಕುಗಳಾಗುತ್ತೇವೆ
ನಾವೆದ್ದು ನಿಲ್ಲದಿದ್ದರೆ ????

ನಾವು ನಿರ್ಲಿಪ್ತರಾಗಿದ್ದರೆ
ಸಹನಶೀಲೆ ಎನ್ನುತ್ತಾರೆ
ಅಗ್ನಿಪರೀಕ್ಷೆಗೆ ಒಡ್ಡುತ್ತಾರೆ
ದಕ್ಷಿಣೆಗಾಗಿ ಖರೀದಿಸುತ್ತಾರೆ
ಅವರ ಯಜಮಾನಿಕೆಗೆ
ನಾವು ಅಡಿಯಾಳಾಗುತ್ತೇವೆ
ನಾವೆದ್ದು ನಿಲ್ಲದಿದ್ದರೆ ????

ನಾವು ದನಿ ಎತ್ತದಿದ್ದರೆ
ನಡುರಾತ್ರಿ ಸುಡುತ್ತಾರೆ
ದೇಹ ತುಂಡರಿಸುತ್ತಾರೆ
ಅಧ್ಯಾತ್ಮದಲಿ ತೇಲಿಸುತ್ತಾರೆ
ಅವರ ಬಲಿಪೀಠಗಳಲಿ
ನಾವು ಕುರಿಗಳಾಗುತ್ತೇವೆ
ನಾವೆದ್ದು ನಿಲ್ಲದಿದ್ದರೆ ????

ನಾವೆದ್ದು ನಿಲ್ಲದಿದ್ದರೆ !!!
ಭೂತ್ ಮಾಂಗೆ ಶಪಿಸುತ್ತಾಳೆ
ನಿರ್ಭಯ ರೋದಿಸುತ್ತಾಳೆ
ಬಿಲ್ಕಿಸ್ ಪರಿತಪಿಸುತ್ತಾಳೆ
ಫೂಲನ್ ಸಿಡಿದೇಳುತ್ತಾಳೆ;
ಅವರು ಸಂಭ್ರಮಿಸುತ್ತಾರೆ
ನಾವು ಇಲ್ಲವಾಗುತ್ತೇವೆ !!

ನಾವೆದ್ದು ನಿಲ್ಲದಿದ್ದರೆ
ಕಾಲವೂ ಕ್ಷಮಿಸುವುದಿಲ್ಲ !!!

– ನಾ ದಿವಾಕರ



# ಸವಾಲಿನ ಹಾದಿಯಲ್ಲಿ ಸ್ಫೂರ್ತಿದಾಯಕ ಪಯಣ

ಕಮ್ಯುನಿಸ್ಟ್ ಪಕ್ಷವೊಂದರ ಪರಂಪರೆಯಲ್ಲಿ ಪಕ್ಷದ ಮಹಾಧಿವೇಶನ ಅತ್ಯುನ್ನತ ಸ್ತರದ ಸಭೆಯಾಗಿದ್ದು, ವರ್ತಮಾನದ ಪರಿಸ್ಥಿತಿಯಲ್ಲಿ ಪಕ್ಷದ ಭವಿಷ್ಯದ ಪಯಣವನ್ನು ನಿರ್ಧರಿಸುವ ವೇದಿಕೆಯಾಗಿರುತ್ತದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಭಾರತದ ವರ್ತಮಾನದ ಪರಿಸ್ಥಿತಿಯು ಕಮ್ಯುನಿಸ್ಟ್ ಚಳುವಳಿಗೆ ಅತ್ಯಂತ ದೊಡ್ಡ ಸವಾಲಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಪಾಟ್ನಾದಲ್ಲಿ ಸಿಪಿಐ ಎಂಎಲ್ ಪಕ್ಷದ ಹನ್ನೊಂದನೆ ಮಹಾಧಿವೇಶನದಲ್ಲಿ ಪಕ್ಷವು ತನ್ನ ಆಂತರ್ಯದ ಚಲನಶೀಲ ಶಕ್ತಿಯ ಪ್ರದರ್ಶನ ಮಾಡಿದ್ದು, ಸಂಘಟನೆಯ ವಿಸ್ತರಣೆ, ಹೆಚ್ಚಾಗುತ್ತಿರುವ ರಾಜಕೀಯ ಕ್ರಿಯಾಶೀಲ ಪ್ರಯತ್ನಗಳನ್ನು ಬಿಂಬಿಸಿದೆ. ಹಾಗೆಯೇ ಮೋದಿ ಹಾಗೂ ಸಂಘಪರಿವಾರದ ಫ್ಯಾಸಿಸ್ಟ್ ಆಳ್ವಿಕೆಯ ವಿರುದ್ಧ ಜನತೆಯ ಪ್ರತಿರೋಧವನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಪಕ್ಷದ ಮಧ್ಯಪ್ರವೇಶ ಹಾಗೂ ಕ್ರಿಯಾಶೀಲ ಚಟುವಟಿಕೆಗಳನ್ನು ಬಿಂಬಿಸುವುದರಲ್ಲಿ ಯಶಸ್ವಿಯಾಗಿದೆ. ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಫೆಬ್ರವರಿ 15ರಿಂದ ಪಕ್ಷವು " ಪ್ರಜಾಪ್ರಭುತ್ವ ಉಳಿಸಿ ಭಾರತವನ್ನು ರಕ್ಷಿಸಿ " ಅಭಿಯಾನವನ್ನು ಹಮ್ಮಿಕೊಂಡಿದ್ದು ಫೆಬ್ರವರಿ 20ರ ಸಮಾರೋಪ ಸಮಾರಂಭದವರೆಗೂ ಯಶಸ್ವಿಯಾಗಿ ನಡೆಸಿತ್ತು. ಈ ದೃಷ್ಟಿಯಿಂದ ಹನ್ನೊಂದನೆ ಮಹಾಧಿವೇಶನವು ಕ್ರಾಂತಿಕಾರಕ ಪರಂಪರೆಯ ಪ್ರಾತ್ಯಕ್ಷಿಕೆಯಾಗಿ ಒಂದು ವಾರದ ಕಾಲ ನಡೆದಿತ್ತು ತನ್ಮೂಲಕ ವರ್ತಮಾನದ ನಿರ್ಣಾಯಕ ಸಂದರ್ಭದಲ್ಲಿ ಸಿಪಿಐ ಎಂಎಲ್ ಪಕ್ಷದ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸಿತ್ತು.

ಈ ಚಟುವಟಿಕೆಗಳ ನಡುವೆ ಹಲವೂ ನಿರ್ಣಯಗಳನ್ನು ಅನುಮೋದಿಸುವ ಮೂಲಕ ಹನ್ನೊಂದನೆ ಮಹಾಧಿವೇಶನವು ಪಕ್ಷವು ನಡೆಯುತ್ತಿರುವ ಹಾದಿಯ ವೈವಿಧ್ಯಮಯ ಆಯಾಮಗಳನ್ನು ಪ್ರದರ್ಶಿಸುವುರೊಂದಿಗೇ, ಭವಿಷ್ಯದ ಕಾರ್ಯತಂತ್ರದ ರೂಪುರೇಷೆಗಳನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಪಕ್ಷದ ಗುರಿ ಮತ್ತು ಆದ್ಯತೆಗಳನ್ನೂ ಸ್ಪಷ್ಟಪಡಿಸಿದೆ. ಮಹಾಧಿವೇಶನದ ಪೂರ್ವಭಾವಿಯಾಗಿ ನಡೆದ ಅಭಿಯಾನ ಮತ್ತು Rally ಪಕ್ಷದ ಸಂಘಟನಾತ್ಮಕ ಶಕ್ತಿಯನ್ನು ಪ್ರದರ್ಶಿಸಿದ್ದೇ ಅಲ್ಲದೆ ಹೊಸ ಪ್ರದೇಶಗಳಲ್ಲಿ ಪಕ್ಷದ ಚುಟಿವಟಿಕೆಗಳು ವಿಸ್ತರಿಸುತ್ತಿರುವುದನ್ನೂ, ಜನಸಮುದಾಯಗಳ ಹೊಸ ವಲಯಗಳ ನಡುವೆ ಪಕ್ಷವು ಹೆಚ್ಚು ಜನಪ್ರಿಯತೆ ಪಡೆಯುತ್ತಿರುವುದನ್ನೂ ಬಿಂಬಿಸಿತ್ತು. ಬಿಹಾರದ ನಗರ ಪ್ರದೇಶಗಳಲ್ಲಿನ ಮಧ್ಯಮ ವರ್ಗಗಳ ನಡುವೆಯೂ ಪಕ್ಷದ ಇರುವಿಕೆಯನ್ನು ನಿರೂಪಿಸಲಾಗಿತ್ತು. ಮತ್ತೊಂದೆಡೆ ಈ ಅಭಿಯಾನದ ಮೂಲಕ ಪಕ್ಷವು ಜನಸಾಮಾನ್ಯರ ಹಲವು ರೀತಿಯ ಹಕ್ಕೊತ್ತಾಯಗಳಿಗಾಗಿ ಹೋರಾಟಗಳನ್ನು ಮುಂದುವರೆಸುವ ಬದ್ಧತೆ ಇರುವುದನ್ನೂ ಪ್ರದರ್ಶಿಸುವುದರೊಂದಿಗೆ ಬಿಹಾರದಲ್ಲಿ ರೂಪುಗೊಂಡಿರುವ ಬಿಜೆಪಿಯೇತರ ಮೈತ್ರಿಕೂಟದ ಒಂದು ಪ್ರಮುಖ ಭಾಗವಾಗಿ ಪಕ್ಷದ ಪ್ರಾಮುಖ್ಯತೆಯನ್ನೂ ಬಿಂಬಿಸಿತ್ತು. ಬಿಹಾರದಲ್ಲಿ ಪಕ್ಷವು ಸರ್ಕಾರಕ್ಕೆ ಬಾಹ್ಯ ಬೆಂಬಲ ವ್ಯಕ್ತಪಡಿಸಿದೆ. ಪಕ್ಷದ ಬಲ ಇರುವುದು ಜನಸಮೂಹಗಳ ನಡುವೆ ಕಾರ್ಯಶೀಲತೆಯಿಂದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಲ್ಲಿ ಹಾಗೂ ಎಲ್ಲ ಅಡೆತಡೆಗಳನ್ನೂ ಎದುರಿಸಿ ಹೋರಾಟಗಳನ್ನು ಮುಂದುವರೆಸುತ್ತಿರುವುದರಲ್ಲಿ. ಪಕ್ಷದ ಈ ಸ್ಥಾಯಿ ಬಲದ ಕ್ರೋಢೀಕರಣ ಮತ್ತು ಪ್ರತಿಪಾದನೆಯೇ ಫ್ಯಾಸಿಸ್ಟ್ ವಿರೋಧಿ ಪ್ರತಿರೋಧದಲ್ಲಿ ಪಕ್ಷವು ಬದ್ಧತೆಯಿಂದ ಮುನ್ನಡೆಯಲು ನೆರವಾಗಿದ್ದು, ಈ ಧೋರಣೆಯು ಅಪೇಕ್ಷಿಸುವ ವೈವಿಧ್ಯಮಯ ಪ್ರಯತ್ನಗಳಿಗೂ ಎಡೆಮಾಡಿಕೊಟ್ಟಿದೆ.

ಮಹಾಧಿವೇಶನದ ಕಲಾಪಗಳು ಆರಂಭವಾದದ್ದು ಎಡಪಕ್ಷಗಳ ನಡುವೆ ಹೆಚ್ಚಿನ ಸಹಕಾರ ಹಾಗೂ ನಿಕಟ ಐಕ್ಯತೆಯನ್ನು ಸಾಧಿಸುವ ನಮ್ಮ ಸಂದೇಶದೊಂದಿಗೆ. ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳೊಂದಿಗೆ ಅಖಿಲ ಭಾರತ ಸಹಯೋಗದ ವೇದಿಕೆಯಲ್ಲಿ ಸಕ್ರಿಯ ಭಾಗವಾಗಿರುವ ಪಕ್ಷವು ಈ ಪಕ್ಷಗಳಿಂದ ಮಾತ್ರವೇ ಅಲ್ಲದೆ ಇತರ ಕಮ್ಯುನಿಸ್ಟ್ ಸಂಘಟನೆಗಳಾದ ಜಾರ್ಖಂಡ್‌ನ ಮಾರ್ಕ್ಸಿಸ್ಟ್ ಕೊ-ಆರ್ಡಿನೇಷನ್ ಸಮಿತಿ, ಮಹಾರಾಷ್ಟ್ರದ ಲಾಲ್ ನಿಶಾನ್ ಪಕ್ಷ, ಮಹಾರಾಷ್ಟ್ರದ ಸತ್ಯ ಶೋಧಕ ಕಮ್ಯುನಿಸ್ಟ್ ಪಕ್ಷ, ಪಂಜಾಬ್‌ನ ಆರ್‌ಎಂಪಿಐ ಮತ್ತಿತರ ಎಲ್ಲ ದೀರ್ಘಕಾಲದ ಮಿತ್ರ ಸಂಘಟನೆಗಳ ಪ್ರತಿನಿಧಿಗಳನ್ನೂ ಆಹ್ವಾನಿಸಿತ್ತು.

ಈ ಎಲ್ಲ ಪಕ್ಷ ಗುಂಪುಗಳೂ ಉದ್ಘಾಟನಾ ಸಮಾರಂಭದಲ್ಲಿ ಐಕ್ಯತೆ ಮತ್ತು ಐಕಮತ್ಯದ ಸಂದೇಶವನ್ನು ನೀಡಿದ್ದವು.



ಹನ್ನೊಂದನೆ ಮಹಾಧಿವೇಶನದಲ್ಲಿ ವೆನೆಜುವೆಲಾ ಮತ್ತು ಆಸ್ಟ್ರೇಲಿಯಾದಿಂದ ಹಾಗೂ ನೆರೆ ರಾಷ್ಟ್ರಗಳಾದ ಬಾಂಗ್ಲಾದೇಶ ಮತ್ತು ನೇಪಾಲದಿಂದ ಪ್ರತಿನಿಧಿಗಳು ಪಾಲ್ಗೊಂಡಿರುವುದು ಅಂತಾರಾಷ್ಟ್ರೀಯ ಐಕಮತ್ಯದ ಸ್ಪಷ್ಟ ಅಭಿವ್ಯಕ್ತಿಯಾಗಿಯೇ ಕಾಣುತ್ತದೆ. ಈ ಮಹಾಧಿವೇಶನದಲ್ಲೇ ಭಾರತದಲ್ಲಿ ಬೋಧಕ ವೃತ್ತಿಯಲ್ಲಿರುವ ಉಕ್ರೇನಿನ ಪ್ರಾಧ್ಯಾಪಕರೊಬ್ಬರು ಮಾತನಾಡಿದ್ದು, ಪ್ಯಾಲೆಸ್ಟೈನ್‌ನ್ನು ಆಕ್ರಮಿಸಿರುವ ಇಸ್ರೇಲ್ ವಿಧಿಸಿರುವ ಬಹಿಷ್ಕಾರ ಮತ್ತು ನಿಬಂಧನೆಗಳ ವಿರುದ್ಧ ನಡೆಯುತ್ತಿರುವ ಆಂದೋಲನದ ಪ್ರತಿನಿಧಿಯೊಬ್ಬರು ಮಾತನಾಡಿದ್ದು ಚಾರಿತ್ರಿಕವಾಗಿ ಕಾಣುತ್ತದೆ. ಲ್ಯಾಟಿನ್ ಅಮೆರಿಕ, ಆಫ್ರಿಕಾ ಮತ್ತು ಯೂರೋಪಿನ ಹಲವು ದೇಶಗಳಿಂದ, ಶ್ರೀಲಂಕಾ ಮತ್ತು ಪಾಕಿಸ್ತಾನದ ಕೆಲವು ಪ್ರಗತಿಪರ ಪಕ್ಷಗಳು, ಚಳುವಳಿಗಳೂ ಸಹ ತಮ್ಮ ವಿಡಿಯೋ ಸಂದೇಶದ ಮೂಲಕ ಮಹಾಧಿವೇಶನದೊಡನೆ ಐಕಮತ್ಯವನ್ನು ಘೋಷಿಸಿವೆ. ವಿದೇಶಗಳಲ್ಲಿ ನೆಲೆಸಿರುವ ಭಾರತೀಯ ಸಂಜಾತರೂ ಸಹ ತಮ್ಮ ಅಂತಾರಾಷ್ಟ್ರೀಯ ಐಕಮತ್ಯದ ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ, ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸಂ ವಿರುದ್ಧ ಹಾಗೆಯೇ ಭಾರತದಲ್ಲಿ ಬೆಳೆಯುತ್ತಿರುವ ಹಿಂದೂ ಬಲಪಂಥೀಯರ ದಾಳಿಯ ವಿರುದ್ಧ ತಮ್ಮ ಐಕಮತ್ಯವನ್ನು ಪ್ರದರ್ಶಿಸುವ ಮೂಲಕ ಮಹಾಧಿವೇಶನದ ಮೆರುಗು ಹೆಚ್ಚಿಸಿದ್ದಾರೆ.

ಒಂದು ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನದಲ್ಲಿ ಬಹುಶಃ ಪ್ರಪ್ರಥಮ ಬಾರಿಗೆ ಸಮಾವೇಶದ ಕಲಾಪಗಳನ್ನು ನಾಗರಿಕ ಸಮಾಜದಿಂದ ಆಗಮಿಸಿದ್ದ ಅತಿಥಿಗಳೂ ವೀಕ್ಷಿಸಲು ಸಾಧ್ಯವಾಗಿದೆ. ಲೇಖಕಿ ಹಾಗೂ ಕಾರ್ಯಕರ್ತೆ ಅರುಂಧತಿ ರಾಯ್ ಮತ್ತು ಪತ್ರಿಕೋದ್ಯಮದ-ಶೈಕ್ಷಣಿಕ ಬೌದ್ಧಿಕ ವಲಯದ ಹಲವು ವಿದ್ವಾಂಸರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ನಮ್ಮ ಕೆಲವು ಅತಿಥಿ ಗಣ್ಯರು ಇಡೀ ಕಲಾಪಗಳನ್ನು ವೀಕ್ಷಿಸಿದ್ದು, ಮಹಾಧಿವೇಶನದಲ್ಲಿ ನಿರ್ಣಯಗಳನ್ನು ಅಂಗೀಕರಿಸಿದಾಗ ಮತ್ತು ಸಂಘಟನಾತ್ಮಕ ಪರಿಷ್ಕರಣಾ ವರದಿಯನ್ನು ಮಂಡಿಸಿದಾಗಲೂ, ಉಪಸ್ಥಿತರಿದ್ದರು. ಹಾಗೆಯೇ ಹವಾಮಾನ ಬದಲಾವಣೆಯ ಸವಾಲುಗಳ ಚರ್ಚೆಯಲ್ಲಿ, ಕೇಂದ್ರ ಸಮಿತಿ ಸದಸ್ಯರನ್ನು ಗೋಪ್ಯ ಮತದಾನದ ಮೂಲಕ ಆಯ್ಕೆ ಮಾಡಿದ ಸಂದರ್ಭದಲ್ಲೂ ಹಾಜರಿದ್ದರು. 27 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಬಂದಿದ್ದ 1700 ಪ್ರತಿನಿಧಿಗಳು, ಎಲ್ಲ ಭಾಷಣಕಾರರ ಉಪನ್ಯಾಸಗಳನ್ನು ಎಲ್ಲ ಭಾಷೆಗಳಿಗೂ ಅನುವಾದಿಸಿದ್ದು, ನೂರಕ್ಕೂ ಹೆಚ್ಚು ಸಂಗಾತಿಗಳು ಸಲ್ಲಿಸಿದ ಅಭಿಪ್ರಾಯಗಳು ಮತ್ತು ತಿದ್ದುಪಡಿಗಳ ಬಗ್ಗೆ ಚರ್ಚೆ ನಡೆದಿದ್ದು, ಅಂತಿಮವಾಗಿ ಹನ್ನೆರಡು ನಿರ್ಣಯಗಳನ್ನು ಅನುಮೋದಿಸಿದ್ದು, ಸ್ಪರ್ಧೆಯಲ್ಲಿದ್ದ82 ಸಂಗಾತಿಗಳ ಪೈಕಿ ಮತದಾನದ ಮೂಲಕ 76 ಸದಸ್ಯರನ್ನು ಆಯ್ಕೆ ಮಾಡಿರುವುದು ಪಕ್ಷದ ಅಂತರಿಕ ಪ್ರಜಾಪ್ರಭುತ್ವದ ಸಂಕೇತವಾಗಿದೆ.

ಇದೇ ಮಹಾಧಿವೇಶನದಲ್ಲಿ ಗುರುತಿಸಬಹುದಾದ ಅಸಾಂಪ್ರದಾಯಿಕವಾದ ವಿದ್ಯಮಾನ ಎಂದರೆ ಅಧಿವೇಶನದ ವೇದಿಕೆಯಲ್ಲೇ ವಿರೋಧ ಪಕ್ಷದ ನಾಯಕರನ್ನೊಳಗೊಂಡ ಒಂದು ರಾಜಕೀಯ ಸಮಾವೇಶವನ್ನು ನಡೆಸಿದ್ದು. ಬಿಹಾರದ ಮುಖ್ಯಮಂತ್ರಿ ಹಾಗೂ ಜೆಡಿಯು ನಾಯಕ ನೀತಿಶ್ ಕುಮಾರ್, ಉಪಮುಖ್ಯಮಂತ್ರಿ ಹಾಗೂ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಹಿರಿಯ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್, ತಮಿಳುನಾಡಿನ ವಿಸಿಕೆ ಪಕ್ಷದ ಮುಖ್ಯಸ್ಥ ಮತ್ತು ಸಂಸದ ತಿರುಮಾವಳಂ ಇವರೆಲ್ಲರನ್ನೂ ಒಳಗೊಂಡ ರಾಜಕೀಯ ಸಮಾವೇಶದಲ್ಲಿ "ಪ್ರಜಾಪ್ರಭುತ್ವ ಉಳಿಸಿ ಭಾರತವನ್ನು ರಕ್ಷಿಸಿ" ಘೋಷಣೆಗೆ ವಿದ್ಯುಕ್ತವಾದ ಸ್ವರೂಪ ನೀಡಲಾಯಿತು. ಈ ಸಮಾವೇಶಕ್ಕೆ ಜಾರ್ಖಂಡ್ ಮುಖ್ಯಮಂತ್ರಿ ಮತ್ತು ಜೆಎಮ್‌ಎಮ್ ನಾಯಕ ಹೇಮಂತ್ ಸೊರೆನ್ ಶುಭಾಶಯಗಳನ್ನು ಕೋರಿದ್ದರು. ಭಾರತವನ್ನು ಫ್ಯಾಸಿಸ್ಟ್ ಮೋದಿ ಆಳ್ವಿಕೆಯ ಬಿಗಿಮುಷ್ಠಿಯಿಂದ ಪಾರುಮಾಡಲು ಹಾಗೂ ಸಂಘಪರಿವಾರದ ಆಕ್ರಮಣದಿಂದ ತಪ್ಪಿಸಲು ಎಲ್ಲರನ್ನೂ ಒಳಗೊಂಡ ವಿರೋಧ ಪಕ್ಷಗಳ ಐಕ್ಯತೆ ಇಂದು ಅತ್ಯವಶ್ಯವಾಗಿದೆ ಎಂದು ಸಮಾವೇಶ ಸಾರಿ ಹೇಳಿತ್ತು.

ನೀತಿಶ್ ಕುಮಾರ್ ಹಾಗೂ ಸಲ್ಮಾನ್ ಖುರ್ಷಿದ್ ಅವರ ಭಾಷಣಗಳು ನಿರೀಕ್ಷಿತವಾಗಿಯೇ ಕೆಲವು ಸಣ್ಣ ಪ್ರಮಾಣದ ವಾಗ್ವಾದಗಳಿಗೆ ಎಡೆಮಾಡಿಕೊಟ್ಟಿದ್ದು, ಈ ನಾಯಕರ ಪಕ್ಷಗಳು ಅಖಿಲ ಭಾರತ ಮಟ್ಟದಲ್ಲಿ ವಿರೋಧ ಪಕ್ಷಗಳ ಐಕ್ಯತೆಯನ್ನು ಸಾಧಿಸುವ ಸವಾಲನ್ನು ಎದುರಿಸುತ್ತಿರುವುದು ಸ್ಪಷ್ಟವಾಗಿತ್ತು. ಇಲ್ಲಿ ಗಂಭೀರವಾದ ವಿಚಾರವೆಂದರೆ ಭಾಷಣಕಾರರ ವಾದ ವಾಗ್ವಾದಗಳ ನಡುವೆಯೇ ವಿನಾಶಕಾರಿ ಗುಜರಾತ್ ಮಾದರಿಯ ವಿರುದ್ಧ ಹಾಗೂ ಇದನ್ನೇ ಭಾರತದಾದ್ಯಂತ ಜಾರಿಗೊಳಿಸುವ ಮೋದಿ ಆಳ್ವಿಕೆಯ ನಿರ್ಧಾರದ ವಿರುದ್ಧ ಬಿಹಾರ ಮಾದರಿಯನ್ನು ಅನುಸರಿಸಬೇಕು ಎಂಬ ಅಭಿಪ್ರಾಯವೂ ಈ ಅಧಿವೇಶನದಲ್ಲಿ ಖಚಿತತೆ ಪಡೆದಿತ್ತು.

ಈ ಎರಡೂ ಮಾದರಿಗಳ ನಡುವೆ ಇರುವ ವ್ಯತ್ಯಾಸವನ್ನು , ಗುಜರಾತ್‌ನಲ್ಲಿ ಬಿಜೆಪಿ ಕಳೆದ ಮೂರು ದಶಕಗಳಿಂದ ರಾಜಕೀಯ ಪ್ರಾಬಲ್ಯ ಸಾಧಿಸಿರುವುದು ಮತ್ತು ಬಿಹಾರದಲ್ಲಿ ಅಧಿಕಾರವನ್ನು ಕಳೆದುಕೊಂಡಿರುವ ಹಿನ್ನೆಲೆಯಲ್ಲಿ ಗುರುತಿಸಲಾಗುವುದಿಲ್ಲ. ಈ ಎರಡೂ ರಾಜ್ಯಗಳಲ್ಲಿ ಚಾರಿತ್ರಿಕವಾಗಿ ಬೆಳೆದುಬಂದಿರುವ ರಾಜಕಾರಣವನ್ನು ಆಳವಾಗಿ ಅಭ್ಯಸಿಸಬೇಕಾಗುತ್ತದೆ. ಗುಜರಾತ್ ಮಾದರಿಯ ಕೇಂದ್ರ ಬಿಂದು ಇರುವುದು 2002ರಲ್ಲಿ ನಡೆದ ಮುಸ್ಲಿಂ ನರಮೇಧದಲ್ಲಿ. ಈ ನರಮೇಧದ ಪ್ರಾಮುಖ್ಯತೆಯನ್ನು ಮತ್ತೆ ಮತ್ತೆ ಪ್ರಕಟಪಡಿಸುತ್ತಲೇ ಇರುವುದನ್ನು ಇತ್ತೀಚಿನ ಗುಜರಾತ್ ಚುನಾವಣೆಗಳಿಗೂ ಮುನ್ನ ಬಿಲ್ಕಿಸ್ ಬಾನು ಅತ್ಯಾಚಾರ ಹಾಗೂ ಕೊಲೆ ಪ್ರಕರಣಗಳಲ್ಲಿ ಅಪರಾಧಿಗಳಾಗಿದ್ದವರನ್ನು ಬಿಡುಗಡೆ ಮಾಡುವುದರಲ್ಲಿ ಗಮನಿಸಬಹುದು. ಭಾರತದ 75ನೆಯ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಈ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಅಪರಾಧಿಗಲನ್ನು ಸನ್ನಡತೆಯ ಮೇಲೆ ಬಿಡುಗಡೆ ಮಾಡಿರುವುದು ಹಾಗೂ 2002ರ ನರಮೇಧವನ್ನು ಗೃಹಸಚಿವ ಅಮಿತ್ ಷಾ ದಂಗೆಕೋರರಿಗೆ ಕಲಿಸಿದ ಪಾಠ , ಇದರಿಂದ ಗುಜರಾತ್‌ನಲ್ಲಿ ಶಾಶ್ವತ ಶಾಂತಿನೆಲೆಸಿದೆ ಎಂದು ಹೇಳಿರುವುದು ಗುಜರಾತ್ ಮಾದರಿಯ ಕೇಂದ್ರ ಬಿಂದುವನ್ನು ಬಿಂಬಿಸುತ್ತದೆ.

ಬಿಹಾರದಲ್ಲೂ ಇದೇ ರೀತಿಯ ಕ್ರೂರ ಹತ್ಯಾಕಾಂಡಗಳು ಸಂಭವಿಸಿವೆ. ಪುರ್ನಿಯಾದ ರುಪಾಸ್‌ಪುರ ಚಾಂದ್ವಾ ದಿಂದ ಅರ್ವಾಲದ ಲಕ್ಷ್ಮಣಪುರ ಬಾತೆ ಘಟನೆಯವರೆಗೂ ಇದನ್ನು ಗಮನಿಸಬಹುದು. ಬಿಹಾರದಲ್ಲಿ ದಲಿತರ ಮತ್ತು ಇತರ ಶೋಷಿತ ಜನತೆಯ ಭೀಕರ ಹತ್ಯಾಕಾಂಡಗಳನ್ನು ಕಾಲದಿಂದ ಕಾಲಕ್ಕೆ ನೋಡುತ್ತಲೇ ಬಂದಿದ್ದೇವೆ. ಭಗಲ್ಪುರ ಗಲಭೆಗಳು ಸ್ವಾತಂತ್ರ್ಯೋತ್ತರ ಭಾರತದ ಅತ್ಯಂತ ಆಘಾತಕಾರಿ ಕೋಮುವಾದಿ ಹತ್ಯಾಕಾಂಡದ ಒಂದು ನಿದರ್ಶನವಾಗಿ ನಮ್ಮ ಮುಂದಿದೆ. ಆದರೆ ಬಿಹಾರದಲ್ಲಿ ಜಾತಿ ಹತ್ಯಾಕಾಂಡಗಳನ್ನಾಗಲೀ, ಕೋಮು ಹಿಂಸಾಚಾರವನ್ನಾಗಲೀ ರಾಜಕೀಯ ಮಾದರಿಯಾಗಿ ಪರಿಗಣಿಸಲಾಗಿಲ್ಲ. ಇಲ್ಲಿನ ಊಳಿಗಮಾನ್ಯ ಹಿಂಸಾಚಾರವನ್ನು ಮತ್ತು ಪ್ರಭುತ್ವದ ದಬ್ಬಾಳಿಕೆಯನ್ನು ಸಿಪಿಐ ಎಂಎಲ್ ಪಕ್ಷವು ತನ್ನ ಆರಂಭದ ದಿನಗಳಿಂದಲೂ ದಿಟ್ಟತನದಿಂದ ಎದುರಿಸಿ ನಿಂತಿರುವುದು ಬಿಹಾರ ಮಾದರಿ ಎಂದು ಹೇಳಬಹುದು. ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿ ರಾಮಮಂದಿರ ನಿರ್ಮಿಸುವ ಸಲುವಾಗಿ ಅಡ್ವಾಣಿ ಕೈಗೊಂಡ ಫ್ಯಾಸಿಸ್ಟ್ ರಥಯಾತ್ರೆಗೆ ಪ್ರಬಲವಾದ ವಿರೋಧವನ್ನು ಬಿಹಾರದಲ್ಲೇ ಕಂಡಿರುವುದನ್ನು ನಾನು ನೆನೆಪಿಡಬೇಕಿದೆ. ಗುಜರಾತ್ ಮಾದರಿಯ ಕೇಂದ್ರ ಬಿಂದು ನರಮೇಧದ ಭೀಕರತೆಯಾಗಿದ್ದರೆ, ಬಿಹಾರ ಮಾದರಿಯು ಊಳಿಗಮಾನ್ಯ-ಕೋಮುವಾದಿ ಹಿಂಸಾಚಾರವನ್ನು ನಿರಾಕರಿಸುವ ನೆಲೆಯಲ್ಲಿ ಕಂಡುಬರುತ್ತದೆ.




**ಪಕ್ಷದ 11ನೇ ಮಹಾಧಿವೇಶನದಲ್ಲಿ ಫಾಸಿವಾದಿಯನ್ನು ಸೋಲಿಸಲು ಎಡ ಪಕ್ಷಗಳ ಐಕ್ಯತೆ ಕಟ್ಟಲು ಪ್ರತಿಜ್ಞೆ ಮಾಡಿದ ಸಂದರ್ಭ**

2002ರ ಮುಸ್ಲಿಂ ನರಮೇಧದ ಭೀಕರ ತಳಹದಿಯನ್ನೇ ಆಧರಿಸಿ ಸಂಘಪರಿವಾರ-ಬಿಜೆಪಿ ತನ್ನ ಗುಜರಾತ್ ಮಾದರಿಯನ್ನು ರೂಪಿಸಿದ್ದು, ಇದರಲ್ಲಿ ಮೋದಿ ಮತ್ತು ಶಾ ರಾಜಕೀಯ ಚದುರಂಗದಾಟದ ನಾಯಕರಾಗಿ ಕಂಡುಬಂದರೆ, ಅದಾನಿ ಮತ್ತು ಅಂಬಾನಿ ಕಾರ್ಪೋರೇಟ್ ಶಕ್ತಿಗಳಾಗಿ ಕಂಡುಬರುತ್ತಾರೆ. 2014ರಲ್ಲಿ ಗುಜರಾತ್ ಮಾದರಿಯನ್ನು ದೆಹಲಿಗೂ ವಿಸ್ತರಿಸಲಾಗಿತ್ತು. ಈಗ ಇದೇ ಫ್ಯಾಸಿಸ್ಟ್ ಮಾದರಿಯು ಹೊರಹಾಕಿರುವ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ವಿನಾಶದ ದಾಳಿಯಿಂದ ಇಡೀ ದೇಶವೇ ತತ್ತರಿಸುವಂತಾಗಿದೆ. ಒಂಬತ್ತು ವರ್ಷಗಳ ವಿನಾಶಕಾರಿ ವರ್ಷಗಳಲ್ಲಿ ಆರಂಭದಲ್ಲಿ ಅಚ್ಛೇದಿನದ ಘೋಷಣೆ ಇದ್ದರೆ ಈಗ ಅಮೃತಕಾಲದ ಘೋಷಣೆ ಕೇಳಿಬರುತ್ತಿದೆ. ಆದರೆ ಈಗ ಈ ಮೋದಿ-ಅದಾನಿಯ ನೆಂಟಸ್ತಿಕೆಯು ಬಹಿರಂಗವಾಗುತ್ತಿದ್ದು, ಅದಾನಿ ಸಾಮ್ರಾಜ್ಯಕ್ಕೆ ಧಕ್ಕೆ ಉಂಟುಮಾಡುವ ರೀತಿಯಲ್ಲಿ ಸವಾಲುಗಳು ಸೃಷ್ಟಿಯಾಗಿವೆ. ಪಾಟ್ನಾದಲ್ಲಿ ಪಕ್ಷದ 11ನೆಯ ಮಹಾಧಿವೇಶನವನ್ನು ನಡೆಸುವ ಮೂಲಕ ಬಿಹಾರ ಮಾದರಿಯು, ಆಕ್ರಮಣಕಾರಿ ಗುಜರಾತ್ ಮಾದರಿಗೆ ಒಂದು ಪ್ರತಿರೋಧದ ಮಾದರಿಯಾಗಿ ರೂಪುಗೊಳ್ಳುವ ಸಂದೇಶವನ್ನು ರವಾನಿಸಲಾಗಿದೆ.

ಮೋದಿ ಆಳ್ವಿಕೆಯು ವಿರೋಧ ಪಕ್ಷಗಳ ಮೇಲೆ ಹಾಗೂ ಇಡೀ ಸಂಸದೀಯ ಪ್ರಜಾತಂತ್ರ ಮತ್ತು ಸಂವಿಧಾನಾತ್ಮಕ ಕಾನೂನು ನಿಯಮಗಳ ಮೇಲೆ ತನ್ನ ಪ್ರಹಾರವನ್ನು ತೀವ್ರಗೊಳಿಸುತ್ತಿರುವುದನ್ನು 1970ರ ದಶಕದ ತುರ್ತುಪರಿಸ್ಥಿತಿ ಸಂದರ್ಭದೊಡನೆ ಹೋಲಿಸಿ ನೋಡಲಾಗುತ್ತಿದೆ. ಅಂದು ಭಾರತ ಭ್ರಷ್ಟಾಚಾರ ಮತ್ತು ಬೆಲೆ ಏರಿಕೆಯ ವಿರುದ್ಧ ಎರಡು ಪ್ರಬಲ ಹೋರಾಟಗಳನ್ನು ಕಂಡಿತ್ತು. ಈ ಯುವ ಆಂದೋಲನದ ಕೇಂದ್ರ ಬಿಂದು ಗುಜರಾತ್ ಮತ್ತು ಬಿಹಾರ್ ರಾಜ್ಯಗಳಾಗಿದ್ದವು. ಗುಜರಾತ್ ಚಳುವಳಿಯನ್ನು ನವ ನಿರ್ಮಾಣ ಆಂದೋಲನ ಎಂದು ಕರೆಯಲಾಗಿತ್ತು. ಬಿಹಾರದ ಚಳುವಳಿಯನ್ನು ಜಯಪ್ರಕಾಶ್ ನಾರಾಯಣ್ ಮುನ್ನಡೆಸಿದ್ದು ಸಂಪೂರ್ಣ ಕ್ರಾಂತಿ ಆಂದೋಲನ ಎಂದು ಕರೆಯಲಾಗಿತ್ತು. ಆರೆಸ್ಸೆಸ್‌ನ ವಿದ್ಯಾರ್ಥಿ ಸಂಘಟನೆಯಾದ ಎಬಿವಿಪಿ ಗುಜರಾತ್‌ನ ಆಂದೋಲನದಲ್ಲಿ ಪ್ರಮುಖವಾಗಿ ಮುನ್ನೆಲೆಗೆ ಬಂದಿತ್ತು. ಬಿಹಾರದಲ್ಲಿ ಸಮಾಜವಾದಿ ಚಳುವಳಿಗೆ ಬೆಂಬಲವಾಗಿ ವ್ಯಕ್ತವಾಗಿತ್ತು. ಇದು ಜನತಾ ಪಕ್ಷವನ್ನು ರಚಿಸಲು ಮತ್ತು ಜನತಾಪಕ್ಷದ ಸರ್ಕಾರ ರಚನೆಗೆ ಪೂರ್ವಭಾವಿಯಾಗಿತ್ತು. ಈ ಸಂದರ್ಭದಲ್ಲೇ ಭಾರತಕ್ಕೆ ಗುಜರಾತ್ ಮೂಲದ ವ್ಯಕ್ತಿ ಮೊರಾರ್ಜಿ ದೇಸಾಯಿ ಪ್ರಥಮ ಬಾರಿಗೆ ಭಾರತದ ಪ್ರಧಾನಿಯಾಗಿ ಆಯ್ಕೆಯಾಗಿದ್ದರು. ಈ ಸಂದರ್ಭದಲ್ಲೇ ಆರೆಸ್ಸೆಸ್ ಪ್ರಪ್ರಥಮ ಬಾರಿಗೆ ಮುಖ್ಯವಾಹಿನಿಯಲ್ಲಿ ಬೆರೆತು ಪ್ರಭುತ್ವದ ಶಕ್ತಿ ಕೇಂದ್ರಗಳಿಗೆ ಅಖಿಲ ಭಾರತ ಮಟ್ಟದಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗಿತ್ತು.

ಈ ಸಂದರ್ಭವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವಲ್ಲಿ ಆರೆಸ್ಸೆಸ್ ಸಫಲವಾದರೆ ಕಮ್ಯುನಿಸ್ಟ್ ಚಳುವಳಿಯು ಬಿಹಾರದಲ್ಲಿ ಅಂಚಿಗೆ ತಳ್ಳಲ್ಪಟ್ಟಿತ್ತು. ಇದಕ್ಕೆ ಕಾರಣ ಸಿಪಿಐ ಸಂಪೂರ್ಣ ಕ್ರಾಂತಿ ಆಂದೋಲನದೊಡನೆ ಕೈಜೋಡಿಸಲು ನಿರಾಕರಿಸಿ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಿತ್ತು. 1972ರ ಬಿಹಾರ ವಿಧಾನಸಭಾ ಚುನಾವಣೆಗಳಲ್ಲಿ 35 ಸ್ಥಾನಗಳನ್ನು ಗಳಿಸಿದ್ದ ಸಿಪಿಐ ಕ್ರಮೇಣ ತನ್ನ ನೆಲೆ ಕಳೆದುಕೊಳ್ಳಲಾರಂಭಿಸಿತ್ತು. ಜನತಾಪಕ್ಷದ ಪ್ರಯೋಗವು ಅಲ್ಪಕಾಲಿಕವಾಗಿದ್ದು, ಆರೆಸ್ಸೆಸ್ ಪಕ್ಷದ ಒಳಗಿನಿಂದಲೇ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳಲು ಸಕಲ ಪ್ರಯತ್ನಗಳನ್ನೂ ಮಾಡಿತ್ತು. ಮತ್ತೊಂದೆಡೆ ಜನತಾಪಕ್ಷದೊಳಗಿದ್ದ ಸಮಾಜವಾದಿಗಳು ಜನಸಂಘ ಸದಸ್ಯರ ಆರೆಸ್ಸೆಸ್ ಸಂಬಂಧಕ್ಕೆ ಆಕ್ಷೇಪ ವ್ಯಕ್ತಪಡಿಸತೊಡಗಿದ್ದರು. ಜನತಾ ಪಕ್ಷದ ಪ್ರಯೋಗವನ್ನೇ ಉಪಯೋಗಿಸಿಕೊಂಡ ಆರೆಸ್ಸೆಸ್ ಬಿಜೆಪಿಯನ್ನು ಹುಟ್ಟುಹಾಕಲು ಇದನ್ನೇ ಚಿಮ್ಮುಹಲಗೆಯಾಗಿ ಬಳಸಿಕೊಂಡಿತು. ಸಮಾಜವಾದಿ ಚಳುವಳಿಯ ನಾಯಕರು ಜನತಾ ದಳವನ್ನು ರಚಿಸುವ ಮೂಲಕ ದೀರ್ಘಕಾಲ ರಾಜಕೀಯ ಪ್ರಭಾವವನ್ನು ವಿಸ್ತರಿಸುವುದರಲ್ಲಿ ಯಶಸ್ವಿಯಾಗಿದ್ದರು. ಮಂಡಲ್ ಆಯೋಗದ ಶಿಫಾರಸುಗಳ ಅನ್ವಯ ಒಬಿಸಿಗಳಿಗೆ ಮೀಸಲಾತಿಯನ್ನು ವಿಸ್ತರಿಸುವ ಮೂಲಕ ಜನತಾದಳದ ಸಾಮಾಜಿಕ ತಳಹದಿಯೂ ತಕ್ಕಮಟ್ಟಿಗೆ ಸುಸ್ಥಿರವಾಗಿತ್ತು.

ಇತ್ತೀಚಿನ ದಶಕಗಳಲ್ಲಿ ಹಲವಾರು ಪ್ರಾದೇಶಿಕ ಪಕ್ಷಗಳು ಮತ್ತು ಅಸ್ಮಿತೆಗಳನ್ನಾಧರಿಸಿದ ರಾಜಕೀಯ ಗುಂಪುಗಳು ಹೆಚ್ಚಾಗಿ ವಿಸ್ತರಿಸುತ್ತಿದ್ದರೂ, ಚಾರಿತ್ರಿಕವಾಗಿ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಭೂಮಿಕೆಯಲ್ಲಿ ನಾಲ್ಕು ರೀತಿಯ ಪ್ರಧಾನ ಧೋರಣೆಗಳನ್ನು ಗುರುತಿಸಬಹುದು. ಕಾಂಗ್ರೆಸ್, ಸಮಾಜವಾದಿಗಳು, ಕಮ್ಯುನಿಸ್ಟರು ಹಾಗೂ ಹಿಂದುತ್ವ ಬಲಪಂಥೀಯರು. ಕಾಂಗ್ರೆಸ್ ಪಕ್ಷದ ಪ್ರಾಬಲ್ಯ ಹೆಚ್ಚಾಗಿದ್ದ ಕಾಲಘಟ್ಟದಲ್ಲಿ ದಟ್ಟವಾಗಿದ್ದ ಕಾಂಗ್ರೆಸ್ ವಿರೋಧಿ ವಾತಾವರಣವನ್ನು ಹಿಂದುತ್ವ ಬಲಪಂಥೀಯರು ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವ ಮೂಲಕ ಕಾಂಗ್ರೆಸ್ ವಿರುದ್ಧ ಆಕ್ರಮಣಶೀಲ ಧೃವೀಕರಣವನ್ನು ಸಾಧಿಸಲು ಯಶಸ್ವಿಯಾದರು. ಸಮಾಜವಾದಿ ಗುಂಪಿನ ರಾಜಕೀಯ ಬೆಳವಣಿಗೆಯ ಹೊರತಾಗಿಯೂ ಸಂಘಟನಾತ್ಮಕ ಐಕ್ಯತೆಯು ವಿಘಟಿತವಾದ ಕಾರಣ ಮಂಡಲ್ ನಂತರದ ಅವಧಿಯಲ್ಲಿ ಪ್ರಾದೇಶಿಕ ನೆಲೆಗಳಲ್ಲಲಿ ವಿಘಟನೆ ತೀವ್ರವಾಗಿತ್ತು. ಮತ್ತೊಂದೆಡೆ ಬಿಜೆಪಿಯ ಬೆಳವಣಿಗೆಗೆ ಪ್ರತಿಕ್ರಯಿಸುವ ನಿಟ್ಟಿನಲ್ಲಿ ಸಮಾಜವಾದಿ ಗುಂಪಿನ ಪ್ರತಿಕ್ರಿಯೆಯೂ ಈ ವಿಘಟನೆಗೆ ಕಾರಣವಾಗಿತ್ತು. ಬಿಜೆಪಿ ತನ್ನ ಪ್ರಧಾನ ಕಾರ್ಯಸೂಚಿಯ ಕೆಲವು ವಿಚಾರಗಳನ್ನು ಬದಿಗೊತ್ತಿ, ಮುಂದೂಡುವ ಮೂಲಕ ಸಮಾಜವಾದಿಗಳ ಗುಂಪಿನ ಕೆಲವರನ್ನು ಸೆಳೆಯುತ್ತಲೆ ಎನ್‌ಡಿಎ ಮೈತ್ರಿಕೂಟವನ್ನ ರಚಿಸುವುದರಲ್ಲಿ ಯಶಸ್ವಿಯಾಗಿತ್ತು. 2014ರಲ್ಲಿ ಬಿಜೆಪಿಗೆ ಎನ್‌ಡಿಎ ಯುಗದ ಮೈತ್ರಿಕೂಟದ ಅವಶ್ಯಕತೆ ಇಲ್ಲ ಎನ್ನುವುದು ಮನದಟ್ಟಾದುದೇ ಅಲ್ಲದೆ,

ಎನ್‌ಡಿಎ ಕಾಲದ ಎಚ್ಚರಿಕೆಯ ನಡೆಯ ಕಾರ್ಯತಂತ್ರವೂ ಅಪ್ರಸ್ತುತವಾಗಿತ್ತು. 2019ರ ಚುನಾವಣೆಗಳಲ್ಲಿ ನರೇಂದ್ರ ಮೋದಿ ಪುನರಾಯ್ಕೆಯಾಗುವುದರ ಮೂಲಕ ಫ್ಯಾಸಿಸ್ಟ್ ಆಳ್ವಿಕೆಯು ಅಧಿಕಾರ ರಾಜಕಾರಣದ ಶಕ್ತಿಯೆಲ್ಲವನ್ನೂ ಕ್ರೋಢೀಕರಿಸಿ, ಭಾರತವನ್ನು ವಿರೋಧ ಪಕ್ಷ ಮುಕ್ತ ಗಣತಂತ್ರವನ್ನಾಗಿ ಮಾಡುವ ನಿಟ್ಟಿನಲ್ಲಿ ಸಾಗುತ್ತಿದೆ. ಈಗ ಬಿಜೆಪಿ ನಾಯಕರು ಭಾರತವನ್ನು ಏಕಪಕ್ಷದ ಪ್ರಭುತ್ವವಾಗಿ ಪರಿವರ್ತಿಸಿ ಐವತ್ತು ವರ್ಷಗಳ ಕಾಲ ಆಳ್ವಿಕೆ ನಡೆಸುವ ತಮ್ಮ ಆಕಾಂಕ್ಷೆಯನ್ನು ಬಹಿರಂಗವಾಗಿ ಪ್ರಕಟಪಡಿಸುತ್ತಿದ್ದಾರೆ.

ಈ ಹೊಸ ಸನ್ನಿವೇಶವು ಕಮ್ಯುನಿಸ್ಟರಿಗೆ, ಸಮಾಜವಾದಿಗಳಿಗೆ, ಅಂಬೇಡ್ಕರ್‌ವಾದಿಗಳಿಗೆ, ಗಾಂಧಿವಾದಿಗಳಿಗೆ ಹಾಗೂ ನೆಹರೂ ಅನುಯಾಯಿಗಳಿಗೆ ಐಕಮತ್ಯದೊಂದಿಗೆ ಕೈಜೋಡಿಸಿ ಫ್ಯಾಸಿಸ್ಟರ ವಿರುದ್ಧ ಸಾಮೂಹಿಕ ಪ್ರತಿರೋಧವನ್ನು ದಾಖಲಿಸಲು ಪ್ರಶಸ್ತವಾಗಿದೆ. 11ನೆಯ ಪಕ್ಷದ ಮಹಾಧಿವೇಶನದಲ್ಲಿ ಈ ನಿರ್ಣಾಯಕ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಲಾಗಿದ್ದು ಈ ಒಂದು ಪ್ರಯತ್ನಕ್ಕೆ ಪೂರಕವಾಗಿ ಕ್ರಾಂತಿಕಾರಕ ಸಿದ್ಧಾಂತ, ಸಂಘಟನೆ, ಹೋರಾಟ ಮತ್ತು ಪ್ರಯತ್ನಗಳೂ ಬೆಂಗಾವಲಾಗಿ ಕಾರ್ಯನಿರ್ವಹಿಸಿದಲ್ಲಿ ಇದರ ಪ್ರಭಾವ ಇನ್ನೂ ಪರಿಣಾಮಕಾರಿಯಾಗಿ ಇರಲಿದೆ. ಬಿಹಾರದಂತಹ ರಾಜ್ಯದಲ್ಲಿ ದೀರ್ಘಕಾಲದ ಪರಂಪರೆಯುಳ್ಳ ಕಮ್ಯುನಿಸ್ಟ್ ಸಂಘಟನೆಗೆ ಇದು ಪ್ರಶಸ್ತ ಸಂದರ್ಭವಾಗಿದೆ. 1970ರ ಮಧ್ಯಕಾಲದ ಪರಿಸ್ಥಿತಿಗೂ ಇಂದಿಗೂ ಬಿಹಾರದಲ್ಲಿ ಇರುವ ವಾತಾವರಣವನ್ನು ಇದು ಸ್ಪಷ್ಟವಾಗಿ ಬಿಂಬಿಸುತ್ತದೆ. ಐವತ್ತು ವರ್ಷಗಳ ಹಿಂದೆ ಲಲ್ಲೂ ಪ್ರಸಾದ್ ಯಾದವ್ ಮತ್ತು ನೀತಿಶ್ ಕುಮಾರ್ ಪಾಟ್ನಾದಲ್ಲಿ ವಿದ್ಯಾರ್ಥಿ ಚಳುವಳಿಯ ಮುಂದಾಳತ್ವವನ್ನು ವಹಿಸಿದ್ದರು. ಸಿಪಿಐ ಎಂಎಲ್‌ಬಿಹಾರದ ಗ್ರಾಮೀಣ ಭಾಗಗಳಲ್ಲಿ ತನ್ನ ಸಶಸ್ತ್ರ ಕ್ರಾಂತಿಕಾರಿ ಹೋರಾಟಗಳನ್ನು ನಡೆಸುತ್ತಿತ್ತು. ಪಾಟ್ನಾಗೆ ಸಮೀಪ ಇರುವ ಶಾಹಬಾದ್ ಮತ್ತು ಮಗಧ್ ಪ್ರದೇಶಗಳಲ್ಲಿ ಈ ಸಶಸ್ತ್ರ ಹೋರಾಟ ಪ್ರಬಲವಾಗಿತ್ತು. ಆದರೂ ಈ ಎರಡೂ ಧೋರಣೆಗಳು ತಳಮಟ್ಟದಲ್ಲಿ ಒಂದಾಗಲಿಲ್ಲ. ಎರಡೂ ಧೋರಣೆಯನ್ನು ಪ್ರತಿನಿಧಿಸಿದ್ದ ಕಾರ್ಯಕರ್ತರು ಜೈಲುಗಳಲ್ಲಿ ಪರಸ್ಪರ ಭೇಟಿಯಾಗಿದ್ದುಂಟು. ಇದೇ ಸಂದರ್ಭದಲ್ಲಿ ಜೆಪಿ ಚಳುವಳಿಯಿಂದ ಸ್ಫೂರ್ತಿ ಪಡೆದು ಸಮಗ್ರ ಕ್ರಾಂತಿಯತ್ತ ಸಾಗುತ್ತಿದ್ದ ಯುವ ಸಮೂಹ ಸಿಪಿಐ ಎಂಎಲ್ ಪಕ್ಷಕ್ಕೆ ಸೇರ್ಪಡೆಯಾಗಿತ್ತು. ಜನತಾಪಕ್ಷದ ಅಲ್ಪಕಾಲದ ಸರ್ಕಾರ ಕುಸಿದ ಕಾರಣ ಹಾಗೂ ಈ ಪ್ರಯೋಗದ ವೈಫಲ್ಯವು ಯುವಕರಲ್ಲಿ ಭ್ರಮನಿರಸನ ಉಂಟುಮಾಡಿದ್ದುದೂ ಸಹ ಹೆಚ್ಚಿನ ಯುವಕರು ಸಿಪಿಐ ಎಂಎಲ್ ಸೇರ್ಪಡೆಯಾಗಲು ಕಾರಣವಾಗಿತ್ತು. 1990ರ ನಂತರ ಸಿಪಿಐ ಎಂಎಲ್ ಚಳುವಳಿಯು ಚುನಾವಣಾ ಅಖಾಡದಲ್ಲಿ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳಲು ಆರಂಭಿಸಿತು. ಆಳ್ವಿಕೆಯು ಜೆಪಿ ಚಳುವಳಿಯ ಮುಂಚೂಣಿ ವಾರಸುದಾರ ಕೈಗೆ ರವಾನೆಯಾಗಿದ್ದರಿಂದ ಹಾಗೂ ಬಿಜೆಪಿ ಸಹ ಬಿಹಾರದಲ್ಲಿ ಆಳುವ ಪಕ್ಷವಾಗಿ ಬೆಳೆದು ನೀತಿಶ್ ಕುಮಾರ್ ಅವರ ಜೆಡಿಯು ಪಕ್ಷದೊಡನೆ ಮೈತ್ರಿ ಸಾಧಿಸಲು ಸಾಧ್ಯವಾಗಿದ್ದರಿಂದ, ಸಿಪಿಐ ಎಂಎಲ್ ಅತಿಶೋಷಿತ ಜನಸಮುದಾಯಗಳ ಹಿತಾಸಕ್ತಿಗಳಿಗಾಗಿ ಹೋರಾಡುವ ಒಂದು ಪಕ್ಷವಾಗಿ ಮುಂದುವರೆದು, ಬಿಹಾರದ ವಿಧಾನಸಭೆಯಲ್ಲಿ ಕ್ರಾಂತಿಕಾರಕ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸಿತ್ತು. ಇಂದು ಇದೇ ಸಮಾಜ ಪರಿವರ್ತನೆಯ ಹೋರಾಟವನ್ನು ಹಾಗೂ ಪ್ರಜೆಗಳ ಹಕ್ಕುಗಳಿಗಾಗಿ ಹೋರಾಟವನ್ನು ಮುಂದುವರೆಸಿಕೊಂಡು ಬರುತ್ತಿರುವ ಸಿಪಿಐ ಎಂಎಲ್ ತನ್ನ ಕ್ರಾಂತಿಕಾರಕ ಜವಾಬ್ದಾರಿಯನ್ನು ಸಂಪೂರ್ಣವಾಗಿ ನಿಭಾಯಿಸಲು ನಿಶ್ಚಯಿಸಿದ್ದು, ಪ್ರಜೆಗಳ ಮುನ್ನಡೆಗೆ ಕಂಟಕಪ್ರಾಯವಾಗಿರುವ ಫ್ಯಾಸಿಸಂನ ವಿರುದ್ಧ ಹೋರಾಡಲು ಸರ್ವಸನ್ನದ್ಧವಾಗಿದೆ. ಹಿಂದಿನ ದಿನಗಳಲ್ಲಿ ಭೂಮಿಗಾಗಿ, ಕೂಲಿಗಾಗಿ, ಘನತೆಗಾಗಿ, ಸ್ಥಳೀಯ ಊಳಿಗಮಾನ್ಯರ ವಿರುದ್ಧ ನಡೆಸಲಾಗುತ್ತಿದ್ದ ಹೋರಾಟಗಳು ಇಂದು ಪ್ರಜಾಪ್ರಭುತ್ವವನ್ನು ಸಂರಕ್ಷಿಸುವ ಹಾಗೂ ಭಾರತವನ್ನು ಫ್ಯಾಸಿಸ್ಟ್ ಆಕ್ರಮಣಕಾರರಿಂದ ಸಂರಕ್ಷಿಸುವ ಹೋರಾಟವಾಗಿ ಪರಿವರ್ತನೆಯಾಗಿವೆ.

ಪಕ್ಷದ ಹನ್ನೊಂದನೆಯ ಮಹಾಧಿವೇಶನವು ತನ್ನ ಧ್ಯೇಯೋದ್ದೇಶಗಳನ್ನು ಸ್ಪಷ್ಟವಾಗಿ ಗುರುತಿಸಿದ್ದು ಇವುಗಳನ್ನು ಸಾಕಾರಗೊಳಿಸಲು ಮುನ್ನಡೆದಿದೆ. ಈಗ ಇಡೀ ಪಕ್ಷವೇ ತನ್ನೆಲ್ಲಾ ಬಲವನ್ನೂ ಪ್ರಯೋಗಿಸಿ, ಪ್ರಜೆಗಳ ಪ್ರತಿರೋಧದ ಶಕ್ತಿಯನ್ನು ಬಳಸಿಕೊಂಡು, ಭಾರತದ ಕಮ್ಯುನಿಸ್ಟ್ ಚಳುವಳಿಯ ಭವ್ಯ ಪರಂಪರೆಯನ್ನು ಮೈಗೂಡಿಸಿಕೊಂಡು , ಭಾರತದ ಇತಿಹಾಸದಲ್ಲಿ ಕಾಣುವ ಎಲ್ಲ ಪ್ರಗತಿಪರ ಧೋರಣೆಗಳನ್ನೂ ಹೊತ್ತುಕೊಂಡು ಕ್ರಾಂತಿಕಾರಿ ಬದಲಾವಣೆಗಾಗಿ ಹೋರಾಡಲು ಸರ್ವಸನ್ನದ್ಧವಾಗಿದೆ. ★




**ದೇಶದ ವಿರೋಧ ಪಕ್ಷಗಳು ಐಕ್ಯಮತ್ಯದಿಂದ ಸಂಘ ಪರಿವಾರದವರ ವಿರುದ್ಧ ಹೊರಡಬೇಕೆಂದು ನಡೆಸಿದ ಸಮ್ಮೇಳನ**

# ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ವಾಹನ ಚಾಲಕರು-ಸಹಾಯಕರುಗಳ ಹೋರಾಟ
















Kannada Liberation | Monthly Publication
RNI No. KARKAN/2002/07847
Posting at Bengaluru, Karnataka

# ನಮ್ಮ ಕಾರ್ಯಕ್ರಮಗಳು





ದಿನಾಂಕ 11.03.2023ರಂದು ಚಿಕ್ಕಬಳ್ಳಾಪುರದ ಕಂಬಾಲಪಲ್ಲಿ ಹಳ್ಳಿಯಲ್ಲಿ ದಲಿತ ಸಮುದಾಯದವರ ಬರ್ಬರ ಹತ್ಯೆಯಾಗಿ 23 ವರ್ಷಗಳು ಕಳೆದಿದ್ದವು ಮತ್ತು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು





ಹರಪನಹಳ್ಳಿ, ಕೊಡಗು, ಎಚ್. ಡಿ. ಕೋಟೆ, ಬೆಂಗಳೂರು ಮತ್ತು ಇತರೆ ಜಾಗಗಳಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರ 132ನೇ ಜಯಂತಿ ಆಚರಿಸಲಾಯಿತು





CPIML ಪಕ್ಷದ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತು. ಕಾಮ್ರೇಡ್ ಲೆನಿನ್ ಮತ್ತು ಕಾಮ್ರೇಡ್ ಚಾರು ಮಜುಂದಾರ್ ಅವರನ್ನು ಸ್ಮರಿಸಲಾಯಿತು

EDITORIAL OFFICE: NO. 19, BHARAT BHAVAN, NO. 35, 1ST FLOOR, OPP. BALAJI PLYWOODS, INFANTRY ROAD, SHIVAJINAGAR, BANGALORE - 01.

Email: cpimlkarnataka@gmail.com
Facebook & Twitter: @CPIMLKar
Printed and Published by Clifton D' Rozario for the State Committee, CPIML (Liberation)
No. 19, Bharat Bhavan, No. 35, First Floor, Opp. Balaji Plywoods, Infantry Road, Shivajinagar, Bangalore - 560 001.

Printed at: Spectrum Printss, #119, Jewellers Street, Tasker Town, Shivaji Nagar, Bengaluru, Karnataka - 560 001.